Mr. SPEAKER.—Is the House agreeable to this?

(*Some Members*: Yes.)

Demand No. 24, half an hour; Demands Nos. 27 and 28 together half an hour; the remaining time for Demand No. 26.

Sri H. SIDDAVEERAPPA (Minister for Home and Industries).—Before we take up the Demand, I want to make one statement. Yesterday there was a representation from the Leader of the House that the House should meet on Sunday the 29th. Now there are two proposals. I leave it to the House to agree whether it will be possible to meet twice on Saturday both in the morning and in the afternoon or whether it would be possible to meet on Sunday morning. At any rate, it is absolutely necessary to keep up on the calendar that we have to work an extra day, may be either in the afternoon of Saturday or in the morning of Sunday. I leave it to you to adopt one of the alternatives.

Mr. SPEAKER.—I will leave it to the House.

Sri J. MOHAMED IMAM (Jagalur).—Generally we are not inclined to work on Sundays, but when the Leader of the House consulted me at the time when we had to go for Ugadi I requested him to allow one more day and he asked me at that time whether we were prepared to work on Sunday. I told him that we had no objection to co-operate with him. Yesterday I repeated to work on Sunday. I must also submit to the Government that many of us are anxious to go home at least for a short time. It is a very long session; it has engaged us here for nearly one month away from our wives and children (*Laughter*). So it is the desire of many of my friends that if the Government find it convenient, from the first of April there may be a short break. We will have disposed of the most important part of the business, and we go to Bills. In order to see that the members will come back refreshed, I would suggest a short respite between the close of the financial business and the taking of the Bills including non-official ones.

Mr. SPEAKER.—It must be before the 30th.

Sri J. MOHAMED IMAM.—After the completion of the financial work before taking Bills, we may have a short interval. It is done in other Legislatures also. You may be pleased to give us a short leave for two or three days so that we can come back afresh, full of ideas and we will do our work with great zeal. I think this will be approved by all the members of the House. Let there be a short respite of three days.

Sri H. SIDDAVEERAPPA.—So far as the present suggestion of the Leader of the Opposition is concerned, I shall be able to make a definite statement to-morrow.

Mr. SPEAKER.—That will be decided to-morrow.

BUDGET FOR 1953-54—DEMANDS FOR GRANTS (*Contd.*)

DEMAND NO. 24—VETERINARY CHARGES.

Mr. SPEAKER.—Motion moved:

"That a sum not exceeding Rs. 25,32,000 be granted to the Government to defray the charges which will come in course of payment during the year ending 31st day of March 1954, in respect of 'Veterinary charges'."

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕಾ ಸಚಿವರು).—ಅಧ್ಯಕ್ಷರೇ, ಈ ಡಿಮ್ಯಾಂಡಿನ ವಿಚಾರದಲ್ಲಿ ಕೇವಲ ಎರಡು ನಿಮಿಷಗಳಲ್ಲಿ ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಒಂದು ಮಾತಿನಲ್ಲಿ ಹೇಳುವುದಾದರೆ ಪಶುವೈದ್ಯ ಇಲಾಖೆಯು ಈಗ ಕೆಲಸಮಾಡುತ್ತಾ ಇರತಕ್ಕ ರೀತಿ ಸಮರ್ಪಕವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಇಲ್ಲಿ ಒಂದು ನೂರು ಜನಕ್ಕೆ 73 ದನಗಳಂತೆ ನಮ್ಮ ಜನಸಂಖ್ಯೆಗನುಸಾರವಾಗಿ ದನಗಳ ಸಂಖ್ಯೆಯೂ ಇದೆ. 1923ರಲ್ಲಿ ಪಶುವೈದ್ಯ ಇಲಾಖೆಯನ್ನು ಪ್ರತ್ಯೇಕವಮಾಡಿದಾಗ, ನಮ್ಮ ಉದ್ದೇಶ ಆ ಇಲಾಖೆ ಇನ್ನೂ ಚಟುವಟಿಕೆಯಿಂದ ಕೆಲಸಮಾಡುವಂತಾಗಬೇಕೆಂಬುದಾಗಿತ್ತು. ಅದರಂತೆ ಮಾಡಿದ ಮೇಲೆ ಈ ಇಲಾಖೆಯು ಕೆಲಸ ಎಷ್ಟು

ರವಮಟ್ಟಿಗೆ ಫಲದಾಯಕವಾಗಿದೆಯೆಂಬುದನ್ನು ಈ ಅಂಕಿ ಅಂಶಗಳಿಂದ ತಿಳಿಯಬಹುದು. 1944-45ರಲ್ಲಿ 87 ಆಸ್ಪತ್ರೆಗಳಿದ್ದವು. ಈಗ 1952-53ರಲ್ಲಿ 205 ಆಸ್ಪತ್ರೆಗಳಿವೆ. ನಮ್ಮಲ್ಲಿರತಕ್ಕ 1951ನೆಯ ಇಸವಿಯ ಸೆನ್ಸಸ್ ಲೆಕ್ಕದ ಪ್ರಕಾರ ನೋಡಿದರೂ ಜಾನುವಾರುಗಳ ಸಂಖ್ಯೆ ಹೆಚ್ಚುತ್ತಿರುವುದೂ ಕಂಡುಬರುತ್ತದೆ. ಒಟ್ಟಿನಲ್ಲಿ 1945ನೆಯ ಇಸವಿಗಿಂತ 14·7% ನಷ್ಟು ದನಗಳ ಸಂಖ್ಯೆ ಜಾಸ್ತಿಯಾಗಿದೆಯೆಂದು ಹೇಳಬಹುದು. ಅಗ್ಗೆ 46,85,9 9 ದನಗಳಿದ್ದುವು.

Sri L. SIDDAPPA (Channagiri).—In 1944 there was Rinderpes all over the State!

ಶ್ರೀ ಎಚ್. ಸಿದ್ಧವೀರಪ್ಪ.—ಪ್ರತಿ ಭಾಗದಲ್ಲೂ ದನಗಳ ಸಂಖ್ಯೆ ಹೆಚ್ಚಾಗಿರುವುದನ್ನು ನಾವು ಇಲ್ಲಿ ಕಾಣಬಹುದು. ಎಮ್ಮೆಗಳ ಸಂಖ್ಯೆ 27·1% ಜಾಸ್ತಿಯಾಗಿದೆ. ಕುರಿಗಳ ಸಂಖ್ಯೆ 19·6 ಜಾಸ್ತಿಯಾಗಿದೆ. ಮೇಕೆಗಳ ಸಂಖ್ಯೆ 23% ಜಾಸ್ತಿ; ಕೋಳಿಗಳ ಸಂಖ್ಯೆ 39·8% ಜಾಸ್ತಿಯಾಗಿದೆ. ಒಟ್ಟಿನಲ್ಲಿ ಈ ಲೆಕ್ಕಾಚಾರದ ಪ್ರಕಾರ ಅಲ್ಲಿನ ಕೆಲಸ ಬಹಳ ಸಮರ್ಪಕವಾಗಿದೆಯೆಂದು ಹೇಳಬಹುದು. ಇದಕ್ಕೆಲ್ಲಾ ವಿಶದವಾಗಿ ನಾನು ಅಂಕಿಅಂಶಗಳನ್ನು ಕೊಡಬೇಕಾದುದು ಅನಾವಶ್ಯಕ. ನಾನೀಗ ಹೇಳಿರತಕ್ಕ ಶೇಕಡಾವಾರು ಲೆಕ್ಕಗಳಿಂದಲೇ ಇದು ಸಾಕಾದಷ್ಟು ಸ್ಪಷ್ಟವಾಗುತ್ತದೆಂದು ಭಾವಿಸುತ್ತೇನೆ. ಇನ್ನು ನಮ್ಮ ದೇಶದಲ್ಲಿರತಕ್ಕ ಸೀರಂ ಇನ್ಸ್ಟಿಟ್ಯೂಟಿನ ವಿಚಾರದಲ್ಲಿ ಒಂದು ಮಾತು. ಇದು ಬಹಳ ಸಮರ್ಪಕವಾಗಿ ಕೆಲಸಮಾಡುತ್ತಾ ಇಡೀ ಇಂಡಿಯಾದೇಶಕ್ಕೇ ಹೆಸರುವಾಸಿಯಾಗಿದೆಯೆಂದು ಹೇಳಿದರೆ ಸಾಕು ಒಂದೂವರೆ ಲಕ್ಷ ರೂಪಾಯಿಗಳು ಈ ವರ್ಷ ಈ ಇಲಾಖೆಯಿಂದ ನಮ್ಮ ಸಂಸ್ಥಾನಕ್ಕೆ ಬಂದಿವೆ.

ಈಗಿರತಕ್ಕ ಆಸ್ಪತ್ರೆಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆಯೆನ್ನುವುದನ್ನೂ ನೋಡುವುದಾದರೆ, ಸುಮಾರು 120 ಆಸ್ಪತ್ರೆಗಳು ಗ್ರಾಮಾಂತರ ಪ್ರದೇಶಗಳಲ್ಲಿದ್ದು ದನಗಳಿಗೆ ಬಹಳ ದೊಡ್ಡ ಖಾಯಿಲೆಯೆನಿಸಿಕೊಂಡಿರುವ ದೊಡ್ಡರೋಗವನ್ನು ಬಹಳಮಟ್ಟಿಗೆ ಹಿಡಿತಕ್ಕೆ ತಂದಿವೆ 1952-53ರಲ್ಲಿ 16 ಕಡೆಗಳಲ್ಲಿ ಮಾತ್ರ ಈ ಖಾಯಿಲೆ ಕಾಣಿಸಿಕೊಂಡಿತ್ತು. ಅಲ್ಲಿಯೂ ಸತ್ತಿದ್ದು 32 ಮಾತ್ರ. ಬಾಕಿ ದನಗಳೆಲ್ಲಾ ಸಕಾಲದಲ್ಲಿ ಇಲಾಜು ಹೊಂದಿ ಬದುಕಿಕೊಂಡವೆಂದು ಗೊತ್ತಾಗಿವೆ. 729 ಹೋರಿಗಳನ್ನು ಎಲ್ಲಕಡೆಯೂ ಕೊಟ್ಟು ಅದರಿಂದ ಪ್ರಯೋಜನ ಉಂಟಾಗಿದೆಯೆಂದು ಗೊತ್ತಾಗಿದೆ. ಆರು ಕಡೆಗಳಲ್ಲಿ artificial Insemination centres ಏರ್ಪಡಿಸಿದ್ದೇವೆ. ಈರೀತಿ ಕೃತಕ ವೀರ್ಯದಿಂದ ತಳಿ ಜಾಸ್ತಿಮಾಡುವುದು ಏನೋ ಒಂದು ಹೊಸ ಪದ್ಧತಿಯೆಂದು ನಾವುಗಳು ಯೋಚನೆ ಮಾಡುವುದಿಲ್ಲ. ಹಿಂದೆ 12ನೆಯ ಶತಮಾನದಲ್ಲಿಯೂ ಸಹ ಇದು ರೂಢಿಯಲ್ಲಿತ್ತೆಂದು ತಿಳಿದುಬಂದಿದೆ. ಅರಬ್ಬಿ ದೇಶದಲ್ಲಿ ಒಳ್ಳೆಕುದುರೆಗಳ ಉತ್ಪತ್ತಿಯನ್ನು ಈ ರೀತಿ ಮಾಡುತ್ತಿತ್ತೆಂತಲೂ ಇತ್ತೀಚೆಗೆ ರಷ್ಯ ಮುಂತಾದ ದೇಶಗಳಲ್ಲಿ ಈ ವಿಧಾನದಿಂದ ಬಹಳ ಹೆಚ್ಚಿನ ಪ್ರಯೋಜನ ಲಭಿಸಿದೆಯೆಂತಲೂ ಗೊತ್ತಾಗಿದೆ. ಅಲ್ಲದೆ ನಾವೂ ಇಲ್ಲಿ ಕೆಲವೆಡೆ ನೋಡಿದ್ದರಲ್ಲಿ ಈ ಪದ್ಧತಿಯಿಂದ ನಿಜವಾಗಿಯೂ ಕೆಲವು ಪ್ರಯೋಜನಗಳಿವೆಯೆಂದು ಗೊತ್ತಾಗಿದೆ.

ಶ್ರೀ ಎಲ್. ಸಿದ್ದಪ್ಪ.—ಇದನ್ನು ಮಿಕ್ಕಕಡೆಗೂ extend ಮಾಡುವುದಕ್ಕೆ ಏನಾದರೂ ಕಾರ್ಯ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಚ್. ಸಿದ್ಧವೀರಪ್ಪ.—ಸದ್ಯಕ್ಕೆ ಡಿಸ್ಟ್ರಿಕ್ಟ್‌ಗೊಂದರಂತೆಮಾಡಿ ಕ್ರಮೇಣ ಪ್ರತಿಯೊಂದು ತಾಲ್ಲೂಕಿಗೂ ಒಂದರಂತೆ 82 ತಾಲ್ಲೂಕುಗಳಿಗೂ ಕೊಡುವ ಏರ್ಪಾಡು ಮಾಡಬೇಕೆಂಬುದೇ ಸರ್ಕಾರದ ನೀತಿಯಾಗಿದೆ.

ಕುಣಿಗಲ್ ಸ್ಟಡ್ ಫಾರಮ್ಮಿನ ವಿಚಾರದಲ್ಲಿ ಒಂದು ಮಾತು. ಕುದುರೆಗಳನ್ನು ಸಾಕುವುದಕ್ಕಾಗಿ ಏರ್ಪಡಿಸಿರುವ ಈ ಫಾರಮ್ಮು ಈಗ ಸ್ವಾವಲಂಬಿಯಾಗಿ ಕೆಲಸ ಮಾಡುತ್ತಿದೆಯೆನ್ನಬಹುದು. ಅಷ್ಟೇ ಅಲ್ಲ, ಮೊನ್ನೆ ತಾನೆ ಅಲ್ಲಿ ಹುಟ್ಟಿದ ಒಂದು ಕುದುರೆ ಬೊಂಬಾಯಿನಲ್ಲಿ 27,000 ರೂಪಾಯಿಗಳಿಗೆ ಮಾರಾಟವಾಯಿತೆಂದರೆ ನಮ್ಮ ಕುದುರೆಗಳು ಎಂಥವೆಂಬುದು ಅರ್ಥವಾಗುತ್ತದೆ. ಇಷ್ಟು ಹೆಚ್ಚಿನ ಬೆಲೆ ಇಂಡಿಯಾ ದೇಶದಲ್ಲೇ ಎಲ್ಲೂ ಬಂದಿರಲಿಲ್ಲ. ಅಲ್ಲದೆ, ನಮ್ಮಲ್ಲಿ ತಯಾರಾದ ಕಿಂಬರ್ಲಿ ಎಂಬ ಕುದುರೆ ಈಗ ಪ್ರತಿಯೊಂದು ಜೂಜಿನಲ್ಲೂ ಗೆಲ್ಲುತ್ತಿದೆ. ಯೂರೋಪಿನಲ್ಲಿಯೂ ಸಹ ಇಂಥ ಕುದುರೆ ಇಲ್ಲವೆಂದು ಗೊತ್ತಾಗಿದೆ. ಇಷ್ಟಾದರೂ, ನಮ್ಮ ಈ ಸ್ಟಡ್ ಫಾರಮ್ಮನ್ನು ಉತ್ತಮಪಡಿಸಬೇಕಾದ್ದಿದೆ. ಅದನ್ನು ಸರಿಯಾದ ರೀತಿಯಲ್ಲಿಟ್ಟುಕೊಳ್ಳಬೇಕೆಂಬುದೇ ಸರ್ಕಾರದ ಆಶೆ.

ಅಜ್ಜಂಪುರ ಮತ್ತು ಹೆಸರಘಟ್ಟ ಫಾರಮ್ಮುಗಳಲ್ಲೂ ಕೆಲಸ ತೃಪ್ತಿಕರವಾಗಿ ನಡೆಯುತ್ತಿದೆ ಅಲ್ಲಿನ ಸೇರ್ವೆಗಾರರ ವಿಚಾರದಲ್ಲಿ ಕೆಲವು ದೂರುಗಳು ಬರುತ್ತಿದ್ದವು. ಆ ಸೇರ್ವೆಗಾರರನ್ನು ತಪ್ಪಿಸಿ ಏಡೆಡ್ ಬ್ರೀಡರ್ಸ್ ಅಸೋಸಿಯೇಷನ್ ಸ್ಕೀಮಿನ ಪ್ರಕಾರ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡಿದ್ದೇವೆ. ಒಟ್ಟಿನಲ್ಲಿ ಈ ಇಲಾಖೆ ನನ್ನ ಅಭಿಪ್ರಾಯದಲ್ಲಿ ಕೊಂಚಮಟ್ಟಿಗೆ ಚೆನ್ನಾಗಿಯೇ ಕೆಲಸ ಮಾಡುತ್ತಿದೆ ಎನ್ನಬೇಕು. ಇದನ್ನು ನಾವು ಅಷ್ಟಾಗಿ appreciate ಮಾಡಬೇಕಾದರೆ ಬಾಕಿ ಕಡೆಗಳಲ್ಲಿ ಅಂಕಿ ಅಂಶಗಳು ಯಾವ ರೀತಿಯಿವೆ, ನಮ್ಮಲ್ಲಿನ ಅಂಕಿ ಅಂಶಗಳಿಗೆ ಎಷ್ಟರ ಮಟ್ಟಿಗೆ ಹೋಲುತ್ತಿವೆ ಎಂಬುದನ್ನು ನೋಡಬೇಕು. ಇಲ್ಲದಿದ್ದರೆ ಅಷ್ಟು ಚೆನ್ನಾಗಿ ಅರ್ಥವಾಗುವುದಿಲ್ಲ. ನಮ್ಮಲ್ಲಿ 144 ಚ. ಮೈಲಿಗಳಿಗೆ ಒಂದು ಆಸ್ಪತ್ರೆಯಿದೆ. ಬೇರೆ ಕಡೆಗಳಲ್ಲಿ 1,223 ಚ. ಮೈಲಿಗಳಿಗೆ ಸಾಮಾನ್ಯವಾಗಿ ಒಂದು ಆಸ್ಪತ್ರೆಯಿರುತ್ತದೆ. ಕೆಲವುಕಡೆ 752 ಚ. ಮೈಲಿಗಳಿಗೆ ಒಂದು ಆಸ್ಪತ್ರೆಯಿದೆ. 252 ಚ. ಮೈಲಿಗಳಿಗೆ ಒಂದು ಆಸ್ಪತ್ರೆಯಿರುವುದೇ ಇಂಡಿಯಾ ದೇಶದ ಇತರ ಕಡೆಗಳಿಗೆ lowest ಎನ್ನಬಹುದು. ಹೀಗಿರುವಾಗ ನಮ್ಮಲ್ಲಿ 144 ಚ. ಮೈಲಿಗಳಿಗೆ ಒಂದು ಆಸ್ಪತ್ರೆಯಿದೆ. ಎಷ್ಟು ಔಷಧಿಗಳನ್ನು ಕೊಟ್ಟಿದೆಯೆಂತಲೂ ನೋಡುವುದಾದರೆ, 1945-46ರಲ್ಲಿ 7,26,000 ದನಗಳಿಗೆ ಔಷಧಿ ಕೊಟ್ಟಿರುವಲ್ಲಿ 1952-53ರಲ್ಲಿ 1,5 ,025 ದನಗಳಿಗೆ ಔಷಧಿಕೊಟ್ಟಿದೆ. 1945-46ರಲ್ಲಿ 98,000 ಹೋರಿಗಳಿಗೆ ಬೀಜ ಒಡೆದರು. 1952-53ರಲ್ಲಿ 1,24,000 ಹೋರಿಗಳಿಗೆ ಬೀಜ ಒಡೆದಿದ್ದಾರೆ. ಹೀಗೆ ಪ್ರತಿಯೊಂದು ಭಾಗದಲ್ಲೂ ಈ ಇಲಾಖೆ ಮೆಚ್ಚಿಕೆಯ ಕೆಲಸಮಾಡಿದೆ. ನಾವುಗಳೂ ಈ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಒಂದು ಒಳ್ಳೆಯ ಮಾತನ್ನಾಡಿದರೆ ಉತ್ತೇಜಕವಾಗಿರುತ್ತದೆಂದು ಹೇಳುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—Royal Commission on Agriculture ರವರು ಏನು ಶಿಫಾರಸು ಮಾಡಿದ್ದಾರೋ ಆ ಶಿಫಾರಸಿನ ಮಟ್ಟಕ್ಕೆ ನಾವು ಈಗ ಹೋಗಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆ ಶಿಫಾರಸಿನ ಮಟ್ಟ 25,000 ದನಗಳಿಗೆ ಒಂದರಂತೆ ಇರಬೇಕೆಂದಿದೆ. ನಮ್ಮಲ್ಲಿ 22,000ಕ್ಕೆ ಒಂದರಂತೆ ಏರ್ಪಡಿಸಿದ್ದೇವೆ. ಆ ಮಟ್ಟಕ್ಕೆ ಬರುವುದಕ್ಕೆ ಇನ್ನೆಲ್ಲಾ ಸ್ವಲ್ಪ ದರಲ್ಲಿದ್ದೇವೆ, ಅಷ್ಟೆ.

Mr. SPEAKER.—These are the timings fixed for the Demands. Demand No. 24: 1-15 to 1-45. Demand No. 25: 1-45 to 2-15. Demand No. 26: 3-30 to 4-30 (with half an hour interval). The last two Demands: 4-30 to 5.

Sri S. SRINIVASA IYENGAR (T.-Narasipur).—We will talk on the Demands.

Mr. SPEAKER.—Those who have tabled cut motions must give up their right.

Sri Mulka GOVINDA REDDY.—We do not wish to move the cut motions. We will talk on the Demands.

Mr. SPEAKER.—That is agreed. So far as this cut motion and the next one are concerned......

Sri S. SRINIVASA IYENGAR.—If a chance is given, I will withdraw my cut motions.

Mr. SPEAKER.—One or two can speak. Five minutes will be allowed to each. Then the Minister will have to reply. Sri Nagappa Setty.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು ಈ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಹಿಂದೆ ಮಾತನಾಡಿದ ಅನೇಕ ಸಂದರ್ಭಗಳಲ್ಲಿ ಮಲೆನಾಡಿನ ಪಶುಸಂಪತ್ತು ಎಷ್ಟು ಹೀನಸ್ಥಿತಿಯಲ್ಲಿದೆಯೆಂಬುದನ್ನು ತಿಳಿಸಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಶೇಕಡ 70ರಷ್ಟು ಆಹಾರ ಉತ್ಪತ್ತಿ ಮಾಡುತ್ತಿರುವ ಮಲೆನಾಡಿನಲ್ಲಿ ಎಷ್ಟು ಕಷ್ಟವಿದೆಯೆಂಬ ವಿಚಾರದಲ್ಲಿ ಎರಡು ಮಾತು ಹೇಳುತ್ತೇನೆ. ಅಲ್ಲಿರುವ ದನಗಳ ಶೇಕಡ 30ರಷ್ಟು ಎಮ್ಮೆ ಆಕಳು ಇವೆ. ಬೇರೆಕಡೆಯಿಂದ ಕೊಂಡು ಕೊಂಡು ಬಂದ ಸಂದರ್ಭದಲ್ಲಿ ಆರು ತಿಂಗಳು ಅಥವಾ ಒಂದು ವರ್ಷದಲ್ಲೇ ಬಲಹೀನವಾಗುತ್ತವೆ ಬೇರೆಕಡೆ ಒಂದು ಸೇರು ಹಾಲುಕೊಡುವುದು ಅಲ್ಲಿಗೆ ಬಂದರೆ ಅರ್ಧಸೇರಿಗೆ ಇಳಿದು ಹೋಗುತ್ತದೆ. ಏಕೆ ಹೀಗಾಗುತ್ತದೆ ಎಂಬುದನ್ನು ಸರ್ಕಾರದವರು ಪರಿಶೀಲನೆಮಾಡಿಲ್ಲ. ಇದು ಬಹಳ ಮುಖ್ಯವಾದ ವಿಚಾರ ಮಲೆನಾಡಿನಲ್ಲಿ ಹೆಲ್ತ್ ಯೂನಿಟ್ ಕೊಡಲು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಜನರ ಆರೋಗ್ಯ ಕಾಪಾಡಲು ಆಸ್ಪತ್ರೆಗಳಿಗಾಗಿ ಹಣ ಖರ್ಚು ಮಾಡುತ್ತಾರೆ. ಅಲ್ಲಿ ಹಾಲಿನ ಉತ್ಪತ್ತಿಯನ್ನು ಹೆಚ್ಚು ಮಾಡಿ ಜನರಿಗೆ ಸಿಕ್ಕುವಂತೆ ಮಾಡಿದರೆ ಆಸ್ಪತ್ರೆಗಳ ಅವಶ್ಯಕತೆಯೇ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಭಾರತ ರಾಜ್ಯಾಂಗದಲ್ಲಿ ಕೂಡ—

"The state shall endeavour to organise agriculture and animal husbandry on modern and scientific lines and shall, in particular, take steps for preserving and improving the breeds and prohibiting the slaughter of cows and calves and other milch and draught cattle."

ಎಂದು ಹೇಳಿದೆ. ವೈಜ್ಞಾನಿಕವಾಗಿ ನಡೆಸಬೇಕೆಂದು ಹೇಳಿದೆ. ಐದು ವರ್ಷದ ಯೋಜನೆಯಲ್ಲಿ 'breeding, management, control and preservation from diseases' ಈ ರೀತಿ ಸರ್ಕಾರಕ್ಕೆ ಒಂದು ಮಾರ್ಗವನ್ನು ತೋರಿಸಿದ್ದಾರೆ. ದನಗಳ ಆಹಾರದ ವಿಷಯ ತೆಗೆದುಕೊಂಡರೆ, ಮಲೆನಾಡಿನಲ್ಲಿ ಮಳೆ ಜಾಸ್ತಿಯಾದುದರಿಂದ ಹುಲ್ಲಿನಲ್ಲಿ ಸಾರ ಕಡಿಮೆಯಾಗುತ್ತದೆ. ಹೀಗೆ ಅಲ್ಲಿ ಬೆಳೆಯ ತಕ್ಕ ಹುಲ್ಲಿನಲ್ಲಿ ಶಕ್ತಿಯಿಲ್ಲದೇಯಿರುವುದರಿಂದ ಯಾವ ರೀತಿಯ ಹುಲ್ಲನ್ನು ಅಲ್ಲಿ ಬೆಳೆದರೆ ಸರಿಯಾಗುತ್ತದೆ, ಬೇರೆ ಯಾವ ರೀತಿಯ ಆಹಾರವನ್ನು ಆಕಳುಗಳಿಗೆ ಅಲ್ಲಿ ದೊರಕಿಸಬಹುದು ಎಂಬ ವಿಷಯಕ್ಕೆ ಸರ್ಕಾರ ಗಮನಕೊಟ್ಟಿಲ್ಲ. ಹೆಸರಘಟ್ಟದಲ್ಲಿ ಬೆಳೆಯುತ್ತಾರೆ, ಬೇರೆ ಕಡೆ ಒಳ್ಳೆಯ ಹುಲ್ಲನ್ನು ಬೆಳೆಯುತ್ತಾರೆ. ಆದರೆ ಮಲೆನಾಡಿನಲ್ಲಿ ಬೇಸಿಗೆಯಲ್ಲಿ ದನಗಳು ತರಗೆಲೆ ತಿನ್ನಬೇಕು.

ಇನ್ನು ದನಗಳ ತಳಿಯ ವಿಷಯ. ಮೈದಾನದಲ್ಲಿ ಸಾವಿರಾರು ಜನರು ಒಳ್ಳೆಯ ದನಗಳನ್ನು ಚೆನ್ನಾಗಿ ಸಾಕಿಕೊಂಡು ತಮ್ಮ ವ್ಯವಸಾಯ ನಡೆಸುತ್ತಿದ್ದಾರೆ. ಆದರೆ ಮಲೆನಾಡಿನಲ್ಲಿ ಈ ಅನುಕೂಲತೆಯಿಲ್ಲ. ಏಕೆಂದರೆ, ಅಲ್ಲಿ ದನಗಳನ್ನು ತಂದು ಕೊಟ್ಟಿಗೆಯಲ್ಲಿ ಕಟ್ಟಿದರೆ ಸೊಳ್ಳೆಯ ಕಾಟದಿಂದಲೋ ಅಥವಾ ಬೇರಾವ ಕಾರಣದಿಂದಲೋ ಒಂದು ವರ್ಷದಲ್ಲಿ ಸತ್ತು ಹೋಗುತ್ತವೆ. ಈ ಇಲಾಖೆಗಾಗಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಅನಿಮಲ್ ಹಸ್‌ಬೆಂಡ್ರಿ ಇಲಾಖೆಯನ್ನು ಬೇರೆ ಮಾಡಿದ ಸಂದರ್ಭದಲ್ಲಿ ಈ ಇಲಾಖೆ ಬಹಳ ಚೆನ್ನಾಗಿ ಕೆಲಸಮಾಡಬೇಕೆಂದು ಅಮೆರಿಕಾಕ್ಕೆ ಒಬ್ಬರನ್ನು ಕಳುಹಿಸಿ ಅವರ ಶಿಕ್ಷಣಕ್ಕೆ 60–70 ಸಾವಿರ ರೂಪಾಯಿ ಖರ್ಚಾಗಿದೆ. ಅವರಿಗೆ ಆಫೀಸಿನಲ್ಲಿ ಕುಳಿತುಕೊಳ್ಳಬೇಕೆಂಬ ಆಸಕ್ತಿ ಇಲ್ಲ, ಆದರೆ ಹೊರಗಡೆ ಹೋಗಿನೋಡಿ ಏನೇನು ಕಲಿತುಕೊಂಡು ಬಂದರೋ ಅದನ್ನೆಲ್ಲಾ ಇಲ್ಲಿ ಉಪಯೋಗಿಸುವುದಕ್ಕೆ ಅನುಕೂಲಕಲ್ಪಿಸಿಕೊಡಬೇಕೆಂಬುದನ್ನು ತಿಳಿದು ಅದಕ್ಕೆ ತಕ್ಕ ಏರ್ಪಾಡುಮಾಡುತ್ತಿಲ್ಲ. ಸರ್ಕಾರದವರು ಅವರಿಗೆ ಯಾವ ರೀತಿಯ ಶಿಕ್ಷಣಕೊಡಿಸಿದ್ದಾರೆ, ಅವರನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ಎಂಬುದರ ಕಡೆ ಗಮನಕೊಡಬೇಕು.

ಡೈರಿ ಡೆವಲಪ್‌ಮೆಂಟ್ ಆಫೀಸರ ಸ್ಥಾನವನ್ನು ಮಾಡಿದ್ದಿರಿ. ಈಗ ಅದನ್ನು ರದ್ದುಮಾಡಿದ್ದೀರಿ. ಇದಕ್ಕಾಗಿ ಸಾವಿರಾರು ರೂಪಾಯಿ ಖರ್ಚಾಗಿದೆ. ಹೇಗಿದ್ದರೂ ಇದನ್ನೂ ರದ್ದುಮಾಡಲು ಕಾರಣವೇನೆಂಬುದನ್ನು ಹೇಳುತ್ತೀರೆಂದು ಭಾವಿಸಿದ್ದೇನೆ. ನನ್ನ ಈ ಖೋತಾ ನಿರ್ಣಯದ ಉದ್ದೇಶ. ಈ ಇಲಾಖೆಗೆ ಒದಗಿಸಿರುವ ಹಣವನ್ನು ಸರಿಯಾಗಿ ಖರ್ಚುಮಾಡಿ, ಈ ಇಲಾಖೆಯ ಕೆಲಸ ಕಾರ್ಯಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಿ ಉತ್ತಮ ಪಡಿಸಬೇಕೆಂದು ಸಲಹೆಮಾಡುವುದು. ಮಲೆನಾಡಿನಲ್ಲಿ ಹುಲ್ಲುಗಾವಲುಗಳಿವೆ. ಆದರೆ ಅಲ್ಲಿ ಲಂಟಾನ, ಮುಂತಾದುವುಗಳು ವಿಶೇಷವಾಗಿ ಬೆಳೆದು ದನಗಳು ಒಳಕ್ಕೆ ಹೋಗುವುದಕ್ಕಾಗುವುದಿಲ್ಲ.

ಆದಕಾರ್ಣ ಟ್ರಾಕ್ಟರುಗಳ ಸಹಾಯದಿಂದ ಆ ಲಂಟಾನವನ್ನು ತೆಗೆಸಿ ಆ ಪ್ರದೇಶವನ್ನು ಉತ್ತು ಉತ್ತಮಗೊಳಿಸಿದರೆ, ದನಗಳಿಗೆ ಎಷ್ಟೋ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯವಾಗಿದೆ.

ಈ ಇಲಾಖೆಯ ಖರ್ಚನ್ನು ಕಡಿಮೆಮಾಡುವ ದೃಷ್ಟಿಯಿಂದ ಹೇಳುವುದಾದರೆ, ಈಗ ಹೆಡ್‌ಕ್ವಾರ್ಟರ್ ಅಸಿಸ್ಟೆಂಟುಗಳು ಇಬ್ಬರಿದ್ದಾರೆ. ಎರಡು ಡಿಸ್ಟ್ರಿಕ್ಟುಗಳನ್ನು ಒಂದೊಂದು ಯೂನಿಟ್ ಮಾಡಿ ಅಮೇರಿಕಾದಲ್ಲಿ ಶಿಕ್ಷಣ ಪಡೆದು ಬಂದಿರುವ ಡಾ॥ ಬಿ. ಚಂದ್ರಶೇಖರ್‌ರವರನ್ನು ಡೆಪ್ಯುಟಿ ಡೈರೆಕ್ಟರುಗಳಾಗಿ ನೇಮಕ ಮಾಡಬಹುದು. ನಾನು ಹಿಂದೆಯೇ ಸಲಹೆಮಾಡಿರುವಂತೆ ಇಂಥ ಅಧಿಕಾರಿಗಳನ್ನು ಉಪಯೋಗಿಸಿಕೊಂಡು, ಫಾರಮುಗಳ ಅಭಿವೃದ್ಧಿ, ಡೈರಿ ಅಭಿವೃದ್ಧಿ, ದನಗಳ ತಳಿ ಅಭಿವೃದ್ಧಿ ಈ ಕಾರ್ಯಗಳಿಗೆ ಗಮನಕೊಡುವುದಕ್ಕೆ ಅಸಿಸ್ಟೆಂಟ್ ಡೈರೆಕ್ಟರನ್ನು ನೇಮಿಸಬಹುದು. ಅದರಲ್ಲಿ ಉಳಿತಾಯವಾಗುವ ಹಣವನ್ನು ಇದಕ್ಕೆ ಉಪಯೋಗಿಸಿ ಪಶುಪಾಲನೆಯ ಕಡೆಗೆ ಹೆಚ್ಚುಗಮನ ಕೊಡುತ್ತಾರೆಂಬ ಭಾವನೆಯಿಂದ ಇಷ್ಟು ಹೇಳಿದ್ದೇನೆ.

Sri S. SRINIVASA IYENGAR (T.-Narsipur).—Mr. Speaker, I beg to bring to the kind notice of this House the various difficulties experienced in the Veterinary Department. I have just now heard the Hon'ble Home Minister speaking about the working of the Department. While speaking on the development of the Department, he has all along stressed towards the medical side. My idea is, that the Veterinary Department should be changed into a department of Animal Husbandry, and I believe it has been done in 1945 when re-orientation of the Department was undertaken. It is the animal husbandry side which is much more important than the disease side. The disease side is also important, but the animal husbandry side is more important. Under animal husbandry, breeding, feeding, maintenance and diceases come up. Why I am very particular that animal husbandry should be developed is because Mysore State is very famous for its Hallikar and Amrit Mahal breeds. Every farmer is anxious to get a calf that will be suitable for him for draught work. We are having a number of draught animals rather than milking cows. The milk problem has been completely neglected. Our cows yield about three to five pounds of milk per day, while the minimum obtained in America and in other foreign countries where animal husbandry has taken an important part, is about 50 pounds per day. That is the minimum. I want to see that the Government devotes greater attention towards animal husbandry. Under Development schemes, even now, Animal Husbandry gets a minor part. Out of a development scheme of about 12.4 lakhs, they have provided 1.88 lakhs purely towards cattle breeding and artificial insemination, etc. My point is this. Under animal husbandry, it is possible for you to devote greater attention to improving the cattle wealth of the State. To treat a diseased animal is a secondary part but the animal husbandry part should be stressed.

Now they have introduced what is called artificial insemination. Unfortunately, we are doing the wrong thing. Before extracting semen from the bull, it must be a proved bull. I believe that the methods at our disposal, whether they are good or not, are not sufficient. To get a bull said to be proved, either you have to trace the pedigree of the bull or you have to test the progeny. To trace the pedigree, none of our ryots have maintained the history of such bulls. But the progeny you can easily test. We have to watch how a calf that is obtained after artificial insemination behaves. You are committing the greatest crime in undertaking artificial insemination. You have not the necessary opportunities to see whether the semen extracted from a particular bull has been definitely proved or not. I believe that artificial insemination is a very good thing and it must be introduced throughout our State. By that only you can improve the wealth of the cattle. You can inject the semen taken from a good bull which has to its credit giving birth to good cows with a greater milking capacity, and I believe then only, you can develop the healthy cows. What we are doing in our villages at present is—we just cover it by any sort of a bull that is available in the village

(SRI S. SRINIVASA IYENGAR.)

parts and we are not sure what type of calf or what type of cow it begets. Therefore, our milk yield is very much reduced. In Punjab and some other places in Northern India, the milk that is consumed by every individual is about eight ounces, while it is much more in foreign countries. Unfortunately when you go round any village, you will find that we do not get even half a seer of milk. Why have we been reduced to this state of affairs ? It is just because our raiyat feels that the animal that is important is the one for draught work. He loves it for that and does not feel so about the cow. Would it not be fair for the Government to devote greater attention to developing greater milk producing cows rather than allowing it to remain as it is ? I, therefore, feel that, so far as the Veterinary Department is concerned, it is not working satisfactorily. It is for that that I have brought this cut motion.

In addition..........

Mr. SPEAKER.—The Minister should have some time to reply.

Sri S. SRINIVASA IYENGAR.—Tank you, sir, I close my speech.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಶ್ರೀ ಮಾನ್ ನಾಗಪ್ಪಶೆಟ್ಟರು ಹೇಳಿದ ವಿಷಯದಲ್ಲಿ-ಮಲೆನಾಡಿನಲ್ಲಿ ತಳಿಗಳನ್ನು ಉತ್ತಮಪಡಿಸಬೇಕೆಂಬ ದೃಷ್ಟಿಯಿಂದ ಸರ್ಕಾರದವರು ಏನೇನು ಕಾರ್ಯ ಕ್ರಮಗಳನ್ನು ಕೈಕೊಂಡಿದ್ದಾರೆಂಬ ವಿಷಯದಲ್ಲಿ ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಕೂಲಂಕಷವಾಗಿ ಪ್ರಸ್ತಾಪ ಮಾಡಿದ್ದೆ. ಸೂಳೆಕೆರೆ ಫಾರಂ ಪ್ರಾರಂಭಮಾಡಿದ್ದೇವೆ. ಮಲೆನಾಡಿನಲ್ಲಿ ಹುಲ್ಲನ್ನು ಉತ್ತಮ ಪಡಿಸಬೇಕು, ದನಗಳ ಕೊರತೆಯನ್ನು ತಪ್ಪಿಸಲು ಅವುಗಳ ಆಹಾರದ ವಿಷಯದಲ್ಲಿ ಏನುಮಾಡಬೇಕು, ತಳಿಗಳನ್ನು ಉತ್ತಮ ಪಡಿಸಲು ಏನು ಕೆಲಸಮಾಡಬೇಕು ಇತ್ಯಾದಿ ವಿಚಾರಗಳಲ್ಲಿ ಪ್ರಯತ್ನಮಾಡುತ್ತಲೇ ಇದ್ದೇವೆ. ಅಜ್ಜಂಪುರದಲ್ಲಿ ಒಂದು ಫಾರಂ ಏರ್ಪಾಡುಮಾಡಿದ್ದೇವೆ. ಹೆಚ್ಚು ಕಾಲಾವಕಾಶವಿಲ್ಲದಿರುವುದರಿಂದ ನಾನು ಈಗ ಹೆಚ್ಚು ವಿವರಗಳಿಗೆ ಹೋಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಇವುಗಳಿಗೆಲ್ಲಾ ಒಂದು ಲಕ್ಷ ಚಿಲ್ಲರೆ ಖರ್ಚುಮಾಡಿದರೆ, ಮಲೆನಾಡಿನ ದನಗಳು ಅಭಿವೃದ್ಧಿಯಾಗುತ್ತವೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಸಂಶೋಧನೆ ನಡೆಸುತ್ತಿದ್ದೇವೆ. ಅಭಿವೃದ್ಧಿಮಾಡುವುದೇ ಸರ್ಕಾರದ ಉದ್ದೇಶ. ಅಲ್ಲಿ ಮುಖ್ಯವಾಗಿ ದನಗಳು ಬರಿಯ ಭತ್ತದ ಹುಲ್ಲನ್ನು ತಿನ್ನುವುದರಿಂದ ನಿರ್ವೀರ್ಯವಾಗಿವೆಯೆಂಬುದು ಹೇಳುತ್ತಾರೆ. ಇದಕ್ಕೆ ಯಾವ ರೀತಿ ಮಾಡಬೇಕೆಂಬುದನ್ನು ಕಂಡುಹಿಡಿಯುವ ಉದ್ದೇಶದಿಂದ ಸಂಶೋಧನೆ ನಡೆಸುತ್ತಿದ್ದೇವೆ. ಇದು ಬಹು ಮುಖ್ಯವಾದ ವಿಷಯ, ಇದು ಮುಂದುವರಿಯುತ್ತದೆಂದು ಭರವಸೆಕೊಡುತ್ತೇನೆ.

ಇನ್ನು ಅಧಿಕಾರಿಗಳ ವಿಷಯದಲ್ಲಿ ಹೇಳಿದರು. ಇನ್ನೊಬ್ಬರು ಡೆಪ್ಯುಟಿ ಡೈರೆಕ್ಟರನ್ನು ನಿಯಮಿಸಬೇಕೆಂದು ಯೋಚನೆಮಾಡುತ್ತಿದ್ದೇವೆ.

Mr. SPEAKER.—They used to get some powder—mineral powder or salt. We had once purchased.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನೂ ಮಾಡುತ್ತಿದ್ದೇವೆ. ಭತ್ತದ ಹುಲ್ಲಿಗೆ ಸ್ವಲ್ಪ ರುಚಿ ಬರಲೆಂದು ಅದನ್ನು ನೀರಿನಲ್ಲಿ ನೆನಸಿ, ಅದಕ್ಕೆ ಸೇರಿಸುತ್ತಿದ್ದೇವೆ. ಇದು ಇನ್ನೂ ಸಂಶೋಧನೆಯಾಗುತ್ತಿದೆ. ಅದರ ಫಲವೇನಾಗುತ್ತದೆಂದು ಇನ್ನೂ ನೋಡಬೇಕು ಚಿಕ್ಕಮಗಳೂರಿನಲ್ಲಿ 'ಆರ್ಟಿಫಿಷಿಯಲ್ ಇನ್‌ಸೆಮಿನೇಷನ್' ಕೇಂದ್ರವನ್ನು ಪ್ರಾರಂಭಮಾಡಿದ್ದೇವೆ. ಅದರ ಫಲವನ್ನೂ ನೋಡೋಣ. ಮಲೆನಾಡಿನಲ್ಲಿ 48 ಕೇಂದ್ರಗಳಿವೆ.

ಇನ್ನೊಬ್ಬರು ಶಿಕ್ಷಣಪಡೆದ ಅಧಿಕಾರಿಗಳಿದ್ದಾರೆ, ಅವರ ಸರ್ವಿಸನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ, ಅದನ್ನೂ ಯೋಚನೆಮಾಡುತ್ತೇವೆ.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಮುಖ್ಯವಾಗಿ ಹಾಲಿನ ವಿಚಾರ ಹೇಳಿದರು. ಅದನ್ನು ವ್ಯಸನದಿಂದ ಒಪ್ಪಿಕೊಳ್ಳಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಹಾಲು ಬಹಳ ಕಡಿಮೆ. ಅಖಿಲ ಭಾರತದ ಲೆಕ್ಕ 5 ಔನ್ಸ್ ಬಂದರೆ, ನಮ್ಮದು ಕೇವಲ ಅರ್ಧ ಅಥವಾ ಒಂದು ಔನ್ಸ್ ಬರುತ್ತದೆ. ಇದನ್ನು ಬಹಳ ದೂರದೃಷ್ಟಿಯಿಂದ ಯೋಚನೆಮಾಡಬೇಕು. ಇದನ್ನು ಯಾವ ರೀತಿ ಉತ್ತಮ ಪಡಿಸಬೇಕೆಂಬುದನ್ನು ನಮ್ಮ ಅಧಿಕಾರಿಗಳು ತೀವ್ರಾಸಕ್ತಿಯಿಂದ ಯೋಚನೆಮಾಡುತ್ತಿದ್ದಾರೆ. ಸರ್ಕಾರದ ದೃಷ್ಟಿಯಲ್ಲಿದೆ. ಇದನ್ನು ಬಗೆಹರಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಯೋಚನೆಮಾಡುತ್ತೇವೆ.

ಅವರು ಇನ್ನೊಂದು ವಿಷಯ ಹೇಳಿದರು. ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ವಿಚಾರದಲ್ಲಿ 'ಪೆಡಿಗ್ರಿ'' 'ಪ್ರಾಜನಿ' ನೋಡಿಕೊಳ್ಳಬೇಕೆಂದು ಹೇಳಿದರು. ಇದು ಸೂಕ್ತ ಸಲಹೆ. ಇದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಸರಿಪಡಿಸುವುದಕ್ಕೆ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ. ಈ ಸಂಬಂಧದಲ್ಲಿ ಇಂಗ್ಲೆಂಡಿನಿಂದ ವಿಮಾನದ ಮೂಲಕ ತರಿಸಿ ಪ್ರಯೋಗಮಾಡಿದ್ದಾರೆ, ಫಲ ಬಹಳ ಚೆನ್ನಾಗಿ ಬಂದಿದೆ. ಕರು ಬಹಳ ಚೆನ್ನಾಗಿದೆ. I wish you (referring to Sri S. Srinivasa Iyengar) come and see those calves. They have really come very well. ಆದರೂ ಇದು ಮುಂದೆ ಹೇಗೆ ಬರುತ್ತದೆ, ಪೆಡಿಗ್ರಿ, ಪ್ರಾಜೆನಿ ನೋಡಬೇಕು. ಇನ್ನೂ ಒಂದು ವರ್ಷವಾಗಿಲ್ಲ. ಮುಂದೆ ತಳಿ ಹೇಗಾಗುತ್ತದೆ, ಸರಿಯಾಗಿ ಬರುತ್ತದೆಯೆ ಎಂಬುದನ್ನು ನೋಡಿ ಯೋಚನೆಮಾಡಬೇಕು. ಅವರು ಹೇಳಿದಂತೆ, ನಮ್ಮ ದೇಶದ ರೈತನಿಗೆ ಅತಿ ಮುಖ್ಯ ಆಸ್ತಿಯಾದ ಗೋ ಸಂಪತ್ತನ್ನು ಹೆಚ್ಚುಮಾಡಬೇಕು, ಅಭಿವೃದ್ಧಿಪಡಿಸಬೇಕು ಎಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ದೃಷ್ಟಿಯಿಂದ ಸರ್ವರೂ ಈ ಡಿಮ್ಯಾಂಡಿಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is :

"That a sum not exceeding Rs. 25,32,000 be granted to the

Government to defray the charges which will come in course of payment during the year ending 31st day of March 1954, in respect of Veterinary Charges."

The motion was adopted.

DEMAND NO. 25 CO-OPERATION
42. Co-operation

Mr. SPEAKER.—Motion moved :

"That a sum not exceeding Rs. 6,59,000 be granted to the Government to defray the charges which will come in course of payment during the year ending 31st day of March 1954, in respect of 'Co-operation.'

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಮೈಸೂರು ಸಂಸ್ಥಾನದಲ್ಲಿ ಒಟ್ಟು 5186 ಸಹಕಾರ ಸಂಘಗಳಿರುತ್ತವೆ. ಈ ಸಂಘಗಳಲ್ಲಿ ಇರುವ ಒಟ್ಟು ಸದಸ್ಯರ ಸಂಖ್ಯೆ 6 ಲಕ್ಷ 65 ಸಾವಿರ. Paid-up capital $1\frac{1}{2}$ ಕೋಟಿ ಇದೆ. ಇವುಗಳಲ್ಲೆಲ್ಲಾ ಬಹಳ ಮುಖ್ಯವಾದದ್ದು ಏಪೆಕ್ಸ್ ಬ್ಯಾಂಕ್, ಮೈಸೂರು ಸಂಸ್ಥಾನದಲ್ಲಿರತಕ್ಕ ಎಲ್ಲಾ ಸಹಕಾರ ಸಂಘಗಳ ಹಣಕಾಸಿಗಿಂತಲೂ ಈ ಏಪೆಕ್ಸ್ ಬ್ಯಾಂಕಿನ ಹಣಕಾಸಿನ ಬಗ್ಗೆ ಬಹಳ ಪ್ರಾಮುಖ್ಯ ಕೊಡಲಾಗಿದೆ. ರಿಸರ್ವ್ ಬ್ಯಾಂಕಿನವರು ಕೊಡತಕ್ಕ ಹಣವನ್ನು ಸಂಸ್ಥಾನದಲ್ಲಿರತಕ್ಕ ಇತರ ಎಲ್ಲ ಸಹಕಾರ ಸಂಘಗಳಿಗೂ ಈ ಏಪೆಕ್ಸ್ ಬ್ಯಾಂಕ್ ಮೂಲಕ ಒದಗಿಸಬೇಕೆಂದು ಉದ್ದೇಶಮಾಡಲಾಗಿದೆ ಮತ್ತು ಆ ರೀತಿ ನಿರ್ಧಾರವನ್ನೂ ಮಾಡಲಾಗಿದೆ. ಈ ಬಗ್ಗೆ ಮಾಡಬೇಕಾಗಿರತಕ್ಕ ! ಬದಲಾವಣೆಗಳಿಗನುಸಾರವಾಗಿ ಕಾನೂನು ತಿದ್ದುಪಡಿಮಾಡಬೇಕೆಂದು ಆಲೋಚಿಸಲಾಗಿದೆ. ಈ ಸೊಸೈಟಿಗಳನ್ನು ಇನ್ನೂ ಹೆಚ್ಚು ವಿಸ್ತಾರ ಮಾಡತಕ್ಕ ಬಗ್ಗೆ ಸೆಂಟ್ರಲ್ ರಿಸರ್ವ್ ಬ್ಯಾಂಕಿನವರನ್ನು $2\frac{1}{2}$ ಕೋಟಿ ರೂಪಾಯಿ ಕೊಡಬೇಕೆಂದು ಕೇಳಿದ್ದೇವೆ. ಅಧಕ್ಕೆ ಅವರು ಈ ತಕ್ಷಣಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡಿದ್ದಾರೆ. 30 ಲಕ್ಷ ರೂಪಾಯಿಗಳ ಡಿಬೆಂಚರ್ಸ್ ಎತ್ತುವುದಕ್ಕೆ ಸರ್ಕಾರದವರೂ ಅಪ್ಪಣೆಕೊಟ್ಟಿದ್ದಾರೆ. ಇದರಿಂದ ಸೆಂಟ್ರಲ್ ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನ ಹಣಕಾಸಿನ ಪರಿಸ್ಥಿತಿ ಉತ್ತಮ ಗೊಳ್ಳಲು ಅನುಕೂಲವಾಗುತ್ತದೆ.

ಇನ್ನು ಸಂಸ್ಥಾನದಲ್ಲಿ 826 ಮಲ್ಟಿಪರ್ಪಸಸ್ ಸೊಸೈಟಿಗಳಿದ್ದು 1 ಲಕ್ಷ 90 ಸಾವಿರದ 260 ಜನ ಸದಸ್ಯರಿದ್ದಾರೆ. 31,734 ರೂಪಾಯಿ subscribed share capital ಇದೆ. ಇವುಗಳ total turn over for 1951-52 7·8 ಕೋಟಿಇದೆ. ಈ ವರ್ಷ ಸರ್ಕಾರದವರು 52 ಸೊಸೈಟಿಗಳಿಗೆ 1 ಸಾವಿರ ರೂಪಾಯಿಗಳಂತೆ ಸಬ್‌ವೆನ್ಷನ್ ಕೊಟ್ಟಿದ್ದಾರೆ. ಈ ಕೋಆಪರೇಟಿವ್ ಸೊಸೈಟಿಗಳ ವರದಿಗಳನ್ನು ನಾನು ಯಾವತ್ತೂ ತರಿಸಿ ತನಿಖೆಮಾಡಿ ನೋಡುತ್ತಿದ್ದೇನೆ. ಅದರಲ್ಲಿ ಯಾವ ನ್ಯೂನತೆಗಳೂ ಕಂಡುಬರುತ್ತಿಲ್ಲ. ಅವುಗಳೆಲ್ಲಾ ಸರಿಯಾಗಿ ಕೆಲಸಮಾಡಿಕೊಂಡು ಬರುತ್ತಿವೆಯೆಂದು ನಾನು ಒಂದು ಅಂಶವನ್ನು ತಮಗೆ ಈ ಸಂದರ್ಭದಲ್ಲಿ ತಿಳಿಸಿದರೆ ಸಾಕು.

ಇತ್ತೀಚೆಗೆ ಮಾರ್ಕೆಟಿಂಗ್ ಸೊಸೈಟಿಗಳನ್ನು ಬೇರೆ ಪ್ರಾರಂಭಮಾಡಿದ್ದೇವೆ. ದಾವಣಗೆರೆಯಲ್ಲಿ ಊರು ಹೊರಗಡೆ ಒಂದು ದೊಡ್ಡ yardನ್ನು ಮಾಡಿದ್ದೇವೆ. This is profitable and going to be one of the finest marketing centres in the South. ಇದಕ್ಕೆ ಸುಮಾರು 300 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡಿದೆ. ಈಗ ಈ ದೊಡ್ಡ ಸೊಸೈಟಿ ಯಾರ್ಡಿನಲ್ಲಿ ಕೆಲಸ ನಡೆಯುತ್ತಿದೆ. ಇದೇ ರೀತಿಯಾಗಿ ಬಾಕಿ ಕಡೆಗಳಲ್ಲೂ ಮಾಡಬೇಕೆಂಬ ಆಶೆಯಿದೆ.

ಇನ್ನು ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿಗೆ ಈ ವರ್ಷ 2 ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಟ್ಟು ಅದನ್ನು ಇನ್ನೂ ವಿಸ್ತರಣಮಾಡಬೇಕೆಂದು ತಿಳಿಸಲಾಗಿದೆ.

ಇನ್ನು ಈ ಸಹಕಾರ ಸಂಘಗಳಿಂದಲೇ ನಮ್ಮ ದೇಶದ ಆರ್ಥಿಕಸ್ಥಿತಿ ಸರಿಹೋಗುವಂತೆ ಮಾಡಬೇಕೆಂಬ ದೃಷ್ಟಿಯಿಂದ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಸಂಘಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡಲಾಗಿದೆ. ಇದೆಲ್ಲಕ್ಕೂ ಸಾರ್ವಜನಿಕರ ಸಹಕಾರ ಹೆಚ್ಚಿಗೆ ಬೇಕಾಗಿದೆ. ಇನ್ನು ನಮ್ಮ ಇಲಾಖೆಯವರೆಲ್ಲ ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ಒಂದು ಮಾತು ಹೇಳಿ ತಾವು ಇದಕ್ಕೆ ಬೆಂಬಲನೀಡಬೇಕೆಂದು ಆಶಿಸುತ್ತೇನೆ.

Sri S. SRINIVASA IYENGAR.—I will not move the cut moion. I will speak on the demand.

Mr. SPEAKER.—Why not some other Members be given a chance ?

Sri S. SRINIVASA IYENGAR.—This is an important subject.

Mr. SPEAKER.—If the same Member is given chance to speek, that may be a grievance in fairness to ohers.

Sri S. SRINIVASA IYENGAR.—If there is time, I will speak on the demand.

Mr. SPEAKER.—Yes.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ ಮತ್ತು ಹೆಗ್ಗಡದೇವನ ಕೋಟೆ).—ಸ್ವಾಮಿ, ಈ ಮಲ್ಟಿಪರ್ಪಸಸ್ ಸೊಸೈಟಿಗಳ ವಿಚಾರದಲ್ಲಿ ಕೆಲವು ವಿಷಯಗಳನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಆದರೆ ಈ ಸಹಕಾರ ಸಂಘಗಳು ನಮ್ಮ ದೇಶದಲ್ಲಿ ಇನ್ನೂ ಹೆಚ್ಚಾಗಿ ಆಗಬೇಕು, ಅವುಗಳಿಗೆ ಜನರು ಹೆಚ್ಚಿನ ಸ್ವಾಗತ ನೀಡಬೇಕು ಎಂಬತಕ್ಕ ವಿಚಾರವನ್ನು ಎಲ್ಲರೂ ಒಪ್ಪುತ್ತಾರೆ, ನಾನೂ ಒಪ್ಪುತ್ತೇನೆ. ಆದರೆ ಈಗಿರತಕ್ಕ ಸಹಕಾರ ಸಂಘಗಳು ಅಷ್ಟು ಯಶಸ್ವಿಯಾಗಿ ಕೆಲಸ ನಡೆಸಿರುವುದಿಲ್ಲ. ನಾವು ಎಷ್ಟರ ಮಟ್ಟಿಗೆ ಒಂದು

---

* Asterisk indicates that the Member concerned has not revised the speech.

(ಶ್ರೀ ಹೆಚ್. ಕೆ. ಶಿವರುದ್ರಪ್ಪ.)

ಅನುಕೂಲವನ್ನು ಇವುಗಳಿಂದ ಆಶಿಸಿದ್ದೆವೋ, ಅಷ್ಟರ ಮಟ್ಟಿಗೆ ಇವು ಕೆಲಸಮಾಡಿರುವುದಿಲ್ಲ ಮತ್ತು ನಮಗೆ ಆ ಅನುಕೂಲಗಳೂ ಇವುಗಳಿಂದ ದೊರೆತಿಲ್ಲವೆಂದು ನಾನು ತಮಗೆ ತಿಳಿಸಬಯಸುತ್ತೇನೆ.

ಈ ಮಲ್ಟಿಪರ್ಪಸಸ್ ಸೊಸೈಟಿಗಳೆಲ್ಲವುಗಳಿಂದ ಸುಮಾರು 31,734 ರೂಪಾಯಿಗಳು subscribed share capital ಜನರಿಂದ ವಸೂಲಾಗಿದ್ದರೂ ಈ ಸಂಘಗಳು ಸರಿಯಾಗಿ ಕೆಲಸ ಕಾರ್ಯ ನಡೆಸುತ್ತಿಲ್ಲ, ಇವುಗಳೆಲ್ಲವೂ ಬಹಳ ಲುಕ್ಸಾನಿನಲ್ಲಿ ಕೆಲಸಮಾಡುತ್ತಿವೆ ಯೆಂದು ಗೊತ್ತಾಗಿದೆ. ನಾವು ಯಾವ ಒಂದು ಸದುದ್ದೇಶದಿಂದ ಇವುಗಳನ್ನೆಲ್ಲಾ ಸ್ಥಾಪನೆಮಾಡಿದೆವೋ ಆ ಸದುದ್ದೇಶದಿಂದ ಇವು ಈ ದಿವಸ ಕೆಲಸಮಾಡುತ್ತಿಲ್ಲ. ಈ ಕಾರಣದಿಂದ ಇವು ನಾವು ಇಟ್ಟುಕೊಂಡಿದ್ದ ಗುರಿಯನ್ನೂ ಮುಟ್ಟಲಾರವೆಂಬ ಶಂಕೆ ಅನೇಕರಿಗೆ ಉಂಟಾಗಿದೆ. ಈ ಸೊಸೈಟಿಗಳ ಪ್ರಾರಂಭಕಾಲದಲ್ಲಿ ಸರ್ಕಾರದವರು ಇವುಗಳ ಉದ್ಧಾರ ಮಾಡುತ್ತೇವೆಂದು ಕೊಂಚ ಮಟ್ಟಿಗೆ ಪ್ರೋತ್ಸಾಹ ನೀಡಿದರು. ಆ ತರುಣದಲ್ಲಿಯೇ ಇವುಗಳ ಮೇಲ್ವಿಚಾರಣೆಗಾಗಿ ಒಬ್ಬ ರೆವಿನ್ಯೂ ಇನ್ಸ್ಪೆಕ್ಟರನ್ನು ನೇರವಾಗಿಕೊಟ್ಟಿದ್ದರು. ಇದೇ ರೀತಿಯಾಗಿ ಒಬ್ಬ ವ್ಯವಸಾಯದ ಇಲಾಖಾ ಆಫೀಸರನ್ನೂ ಸಹ ಕೊಟ್ಟಿದ್ದರು. ಆಗ ಇಷ್ಟೆಲ್ಲಾ ಇದ್ದದ್ದರಿಂದ ಇವುಗಳು ಒಂದು ರೀತಿಯಲ್ಲಿ ಜನರ ಸೇವೆಮಾಡಲು ಅವಕಾಶವಾಗಿತ್ತು. ಇತ್ತೀಚೆಗೆ ಸರ್ಕಾರದವರು ಪ್ರತಿಯೊಂದು ಸಂಸ್ಥೆಯೂ ತನ್ನ ಕಾಲು ಬಲದಮೇಲೆ ನಿಂತುಕೊಳ್ಳಬೇಕೇ ಶಿವಾಯಿ ಬೇರೆಯವರ ಸಹಾಯ ಅಪೇಕ್ಷಿಸತಕ್ಕದ್ದು ಸರಿಯಲ್ಲವೆಂಬ ಕಾರಣದ ಮೇಲೆ, ಅವರು ನೀಡುತ್ತಿದ್ದ ಸಹಾಯಗಳೆಲ್ಲವನ್ನು ವಾಪಸ್ಸು ತೆಗೆದುಕೊಂಡು ಬಿಟ್ಟಿದ್ದಾರೆ. ಇದರಿಂದ ಅನೇಕ ಸಹಕಾರ ಸಂಘಗಳು ತಮಗೆ ತಕ್ಕಷ್ಟು ಲಾಭಪಡೆಯಲು ಶಕ್ತಿಯಿಲ್ಲದೆ ಬೇಕಾದ ಖರ್ಚು ವೆಚ್ಚಗಳಿಗೆಲ್ಲಾ ಮೂಲ ನಿಧಿಯಿಂಥ ಹಣವನ್ನು ಖರ್ಚು ಮಾಡುತ್ತಿವೆ. ಅಂಥಪರಿಸ್ಥಿತಿ ಬಂದಿದೆ. ಆದರೆ ಇವುಗಳು ಏತಕ್ಕಾಗಿ ಸರಿಯಾಗಿ ಕೆಲಸಮಾಡುತ್ತಿಲ್ಲ, ಇದಕ್ಕೆಲ್ಲಾ ಕಾರಣಗಳೇನು ಎಂಬುದನ್ನು ಇಲ್ಲಿಯವರೆಗೂ ಯಾರೂ ಪರೀಕ್ಷೆಮಾಡಿಲ್ಲ. ಹೀಗೆ ಯಾರೂ ಅವುಗಳನ್ನು ಕೇಳತಕ್ಕವರೇ ಇಲ್ಲದಂತಾಗಿ ಅವುಗಳ ವಶದಲ್ಲಿರುವ ಮೂಲನಿಧಿಯನ್ನೇ ತಿಂದು ಹಾಕುತ್ತ, ಬಂಡವಾಳಕ್ಕೇ ಧಕ್ಕೆ ಯುಂಟಾಗುತ್ತಿದೆ. ಇನ್ನು ಸ್ವಲ್ಪ ದಿವಸಗಳ ಕಾಲ ಹೀಗೆ ನಡೆದ ಪಕ್ಷದಲ್ಲಿ ಈ ಸೊಸೈಟಿಗಳೆಲ್ಲಾ ಖಂಡಿತವಾಗಿ ಹಾಳಾಗಿ ಹೋಗುತ್ತವೆಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ಸರ್ಕಾರದವರು ಇವುಗಳನ್ನು ಸಾರೋದ್ಧಾರವಾಗಿ ನಡೆಯುವಂತೆ ಮಾಡಬೇಕೆಂಬ ಒಂದು ಘನೋದ್ದೇಶದಿಂದ ಹೇಗೆ ಇವುಗಳನ್ನು ಪ್ರಾರಂಭಮಾಡಿದರೋ, ಅದೇ ಉದ್ದೇಶದಿಂದ ಈಗಲೂ ಸೊಸೈಟಿಗಳ ಈ ಅವ್ಯವಸ್ಥೆಯ ಕಡೆಗೆ ಕೂಡಲೇ ತಮ್ಮ ಲಕ್ಷ್ಯವನ್ನು ಕೊಟ್ಟು, ಲಕ್ಷಾಂತರ ಜನರು ಕೈಯಿಂದ ಹಾಕಿರತಕ್ಕಬಂಡವಾಳ ಹಾಳಾಗದಂತೆ ಮಾಡಿ ಬಡಜನರ ಹಣ ಉಳಿಯುವಂತೆ ಒಂದು ಸುವ್ಯವಸ್ಥೆಮಾಡತಕ್ಕದ್ದೂ ಅವರ ಕರ್ತವ್ಯವಾಗಿದೆ.

ಈ ಲೋಪದೋಷಗಳನ್ನೆಲ್ಲಾ ಕೂಡಲೇ ತಾವು ಸರಿಪಡಿಸಿ, ಎಂದಿನಂತೆ ಇವುಗಳಿಗೆ ಪ್ರೋತ್ಸಾಹ ನೀಡಿ ಇವುಗಳು ಸರಿಯಾದ ಒಂದು ವ್ಯವಸ್ಥೆಯಿಂದ ಕೆಲಸ ಮಾಡುವಂತೆ ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನಮ್ಮ ಮಾನ್ಯ ಮಂತ್ರಿಗಳು ಈಗತಾನೆ ಹೇಳಿರತಕ್ಕ ರೀತಿಯಲ್ಲಿ ನಮ್ಮ ದೇಶದ ಆರ್ಥಿಕ ಬೆಳವಣಿಗೆಗೆ ಮತ್ತು ದೇಶದ ಬೆಳವಣಿಗೆಗೆ ಈ ಸಹಕಾರ ಸಂಘಗಳೂ ಬಹಳ ಅಗತ್ಯವಾಗಿವೆ. ನಮ್ಮ ಆರ್ಥಿಕ ಭದ್ರತೆಯನ್ನು ಈ ಸಹಕಾರ ಸಂಘಗಳ ತಳಹದಿ ಮೇಲೆ ಕಟ್ಟಬೇಕಾಗಿದೆ. ಇದನ್ನು ಸರ್ಕಾರದವರು ಮನಗಂಡೇ ದೇಶದಾದ್ಯಂತವೂ ಎಲ್ಲಕಡೆಯೂ ಮಲ್ಟೀಪರ್ಪಸಸ್ ಸೊಸೈಟಿಗಳನ್ನು ಸ್ಥಾಪನ ಮಾಡಿದರು. ಸಾಮಾನ್ಯವಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಇವು ಪ್ರಾರಂಭದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಲಾರಂಭಿಸಿದವು. ಈ ಸೊಸೈಟಿಗಳಿಗಾಗಿ ಮೊದಲು ಸರ್ಕಾರದವರು ನೇರವಾಗಿ ಕೊಟ್ಟಿದ್ದ ರೆವಿನ್ಯೂ ಇನ್ಸ್ಪೆಕ್ಟರುಗಳನ್ನು ವಾಪಸ್ಸು ತೆಗೆದುಕೊಂಡಿದ್ದರಿಂದ ಅವುಗಳು ಕೆಲಸ ಮಾಡತಕ್ಕದ್ದು ಕಡಿಮೆಯಾಗಿ, ಅವುಗಳ ಆಡಳಿತ ಸ್ವಲ್ಪಮಟ್ಟಿಗೆ ಕುಂಠಿತವಾಗಿರುವಂತೆ ಕಾಣುತ್ತಿದೆ. ಈ ವಿಚಾರವಾಗಿ ಮಾನ್ಯ ಶಿವರುದ್ರಪ್ಪನವರು ಹೇಳಿರತಕ್ಕದ್ದು ವಾಸ್ತವವಾಗಿದೆ. ಸರ್ಕಾರದವರು ಇವುಗಳನ್ನು ಅಷ್ಟು ಸಡಿಲ ಬಿಡದೆ ಇವುಗಳ ಆಯವ್ಯಯವನ್ನು ಒಂದು ಸರಿಯಾದ ರೀತಿಯಲ್ಲಿ ನಡೆಸುವಂತೆ ಮಾಡಿ ಅವುಗಳ ಮೇಲೆ ನಿಗಾ ಇಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಈ ದಿವಸ ದೇಶದಾದ್ಯಂತವೂ 800ಕ್ಕೆ ಮೇಲ್ಪಟ್ಟು ಈ ಸೊಸೈಟಿಗಳಿರುತ್ತವೆ. ಇವುಗಳಲ್ಲಿ ಚಿಲ್ಲರೆ ಸೊಸೈಟಿಗಳು 400-500 ಇರಬಹುದು. ಆದರೆ ಇವುಗಳ ಅಭಿವೃದ್ಧಿಗೆ ಸರ್ಕಾರದವರು ಒಂದು ಮಾರ್ಗವನ್ನು ಹಾಕಿಕೊಡದೆ ಇರುವುದರಿಂದ ಇವುಗಳೆಲ್ಲಾ ಈ ದಿವಸ ಯಶಸ್ವಿಯಾಗಿ ಕೆಲಸ ನಡೆಸಲು ಕಷ್ಟವಾಗಿರುತ್ತದೆ. ಈ ಸೊಸೈಟಿಗಳ ಅಭಿವೃದ್ಧಿಗೆ ಸರಿಯಾದ ಯೋಜನೆ ಇಲ್ಲ. ಸರ್ಕಾರದವರು ಮಾಡತಕ್ಕ ಯೋಜನೆಗಳು ಈ ರೀತಿಯಾದಲ್ಲಿ ಜನರು ಸರ್ಕಾರದಮೇಲೆ ಇಟ್ಟಿರತಕ್ಕ ನಂಬಿಕೆ ಕೆಡಲು ಕಾರಣವಾಗುತ್ತದೆ. ಈ ಕಾರಣದಿಂದ ಸರ್ಕಾರದವರು ಮುಂದೆ ಕೈಕೊಳ್ಳಬಹುದಾದ ಅನೇಕ ಹೊಸ ಹೊಸ ಯೋಜನೆಗಳ ಬಗ್ಗೆ ಅನಾನುಕೂಲವಾಗಬಹುದು. ಆ ದೃಷ್ಟಿಯಿಂದ ಸರ್ಕಾರದವರು ಬೇಗ ಇವುಗಳ ಕಡೆ ಗಮನಕೊಟ್ಟು ಇವುಗಳನ್ನು ಸರಿಯಾದ ವ್ಯವಸ್ಥೆಗೆ ತರಬೇಕೆಂದು ಹೇಳುತ್ತೇನೆ. ಶ್ರೀ ಶಿವರುದ್ರಪ್ಪನವರು ಹಿಂದೆ ಸರ್ಕಾರದವರು ಕೊಟ್ಟಿದ್ದ ರೆವಿನ್ಯೂ ಇನ್ಸ್ಪೆಕ್ಟರುಗಳಿಗೆ ಕೊಡುತ್ತಿದ್ದ ಸಂಬಳ ಸಾರಿಗೆಯೆಲ್ಲಾ ಸರ್ಕಾರದವರದ್ದೇ ಆಗಿತ್ತೆಂದು ತಿಳಿಸಿದರು. ಆದರೆ ಈಗ ಖಾಸಗಿಯವರು ಬಹಳ ತೀವ್ರವಾಗಿ ಕೆಲಸಮಾಡಬೇಕು. ಸರ್ಕಾರದವರು ಈ ಸಂಸ್ಥೆಗಳನ್ನು ಸ್ಥಾಪನೆ ಮಾಡಿರುವ ಉದ್ದೇಶ ಸಾರ್ಥಕವಾಗುವಂತೆ ಮಾಡಬೇಕಾಗಿದ್ದರೆ ಇನ್ನೂ 2-3 ವರ್ಷ ಒಂದು ಸಬ್‌ವೆನ್ಷನ್ ಕೂಡ ಕೊಟ್ಟು, ಇವುಗಳನ್ನು ಒಂದು ಸುವ್ಯವಸ್ಥೆಗೆ ತರತಕ್ಕದ್ದು ಅವರ ಕರ್ತವ್ಯ. ಈಗೇನೋ ಅವರು ಕೇವಲ ತಾಲ್ಲೂಕು ಮಲ್ಟಿಪರ್ಪಸಸ್‌ಸೊಸೈಟಿಗಳಿಗೆ ಮಾತ್ರ ಹಾಗೆ ಮಾಡುತ್ತಿದ್ದಾರೆ. ಈ ತಾಲ್ಲೂಕು ಮಲ್ಟಿ ಪರ್ಪಸಸ್ ಸೊಸೈಟಿಗಳಿಗೂ ಗ್ರಾಮಾಂತರದಲ್ಲಿರತಕ್ಕವುಗಳಿಗೂ ನೇರವಾದ ಸಂಬಂಧವಿಲ್ಲ. ಈ ತಾಲ್ಲೂಕು ಕಸಬೆಗಳಲ್ಲಿರತಕ್ಕ ಸಂಘಗಳಿಗೆ ವರ್ತಕರ ಮತ್ತು ಹೋಲ್ ಸೇಲ್ ವ್ಯಾಪಾರಿಗಳ ಷೇರ್ ಜಾಸ್ತಿಯಿರುತ್ತದೆ. ಇದರಿಂದ ರೈತರಿಗೆ ಅಷ್ಟು ಹೆಚ್ಚಿನ ಫಾಯಿದೆಯಿಲ್ಲ. ತಾವು ತಾಲ್ಲೂಕಿನಲ್ಲಿರತಕ್ಕ ಸಂಘಗಳಿಗೆ ಸಹಾಯ ನೀಡುತ್ತಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆ ಸೊಸೈಟಿಗಳಿಗೂ ಒಂದೊಂದು ತಾಲ್ಲೂಕಿಗೆ 3—4 ಸೊಸೈಟಿಗಳನ್ನಾ

ದಗೂ ಒಂದುಗೂಡಿಸಿ, ಅಂಥ ಪ್ರತಿಯೊಂದು ಗುಂಪಿಗೂ 3-4ಸಾವಿರ ರೂಪಾಯಿಗಳನ್ನು ಇನ್ನು 1—2 ವರ್ಷಗಳವರೆಗಾದರೂ ತಾವು ಕೊಡದೆ ಹೋದರೆ ಅವುಗಳನ್ನು ಮುಚ್ಚಬೇಕಾಗುತ್ತದೆ; ಹಾಗೆ ಅವುಗಳನ್ನು ಮುಚ್ಚಲು ಅವಕಾಶಕೊಡದೆ ಇರುವಂತೆ ಮಾಡುವುದಕ್ಕೂ ಮತ್ತು ಅವು ಸಾರೋದ್ಧಾರವಾಗಿ ನಡೆದುಕೊಂಡು ಬರುವಂತೆ ಮಾಡಲೂ ಸಲಹೆ ನೀಡತಕ್ಕ ಬಗ್ಗೆ ಒಂದು ಸಮಿತಿಯನ್ನಾದರೂ ನೇಮಿಸತಕ್ಕದ್ದು ಅನುಕೂಲವೆ, ಅಲ್ಲವೆ ಎಂಬುದನ್ನೂ ಸಹ ಸರ್ಕಾರ ಆಲೋಚಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಮುಲ್ಕ ಗೋವಿಂದ ರೆಡ್ಡಿ (ಚಿತ್ರದುರ್ಗ).—ಮಾನ್ಯ ಅಧ್ಯಕ್ಷರೇ, ನಾನು ಈ ಸಂಬಂಧದಲ್ಲಿ ಕೆಲವು ಸಲಹೆಗಳನ್ನು ನೀಡಬೇಕೆಂದಿದ್ದೇನೆ. ಈ ಸೊಸೈಟಿಗಳ ಬಗ್ಗೆ ನಾನು ಮಲ್ಟಿ ಪರ್ಪಸಸ್ ಸೊಸೈಟಿಗಳ ವಿಚಾರ ತಿಳಿಸಬೇಕೆಂದಿದ್ದೇನೆ. ದೇಶದ ಬೆಳವಣಿಗೆಗೂ ಮತ್ತು ನಮ್ಮ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲಿಕ್ಕೂ ಈ ಮಲ್ಟಿ ಪರ್ಪಸಸ್ ಸೊಸೈಟಿಗಳ ಅಗತ್ಯವು ನಮಗೆ ಅವಶ್ಯಕವೆಂಬುದಾಗಿ ಈಗಾಗಲೇ ಅನೇಕರು ತಿಳಿಸಿದ್ದಾರೆ, ನನಗೂ ಕೂಡ ಅದೇ ಅಭಿಪ್ರಾಯವಿದೆ. ಇತ್ತೀಚೆಗೆ ಈ ಮಲ್ಟಿಪರ್‌ಪಸಸ್ ಸೊಸೈಟಿಗಳು ಸರಿಯಾಗಿ ಕೆಲಸ ನಡೆಸುತ್ತಿವೆಯೋ ಇಲ್ಲವೇ, ಇವು ಅಭಿವೃದ್ಧಿ ಸ್ಥಿತಿಗೆ ಬರುತ್ತಿವೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಲು ಯಾರೂ ಇವುಗಳ ತನಿಖೆಯನ್ನು ನಡೆಸುತ್ತಿಲ್ಲ. ಈ ರೂರಲ್ ಮತ್ತು ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗಳಿಗೆ ಇರುವ ಛೇರ್ಮನರುಗಳೆಲ್ಲಾ ಈ ಸೊಸೈಟಿಗಳ ಅಧ್ಯಕ್ಷರಾಗಿ ನಾಮಕರಣ ಮಾಡಲ್ಪಟ್ಟವರು. ಈ ಬಗ್ಗೆ ಚುನಾವಣೆಯನ್ನು ಮಾಡದೆ ಏತಕ್ಕಾಗಿ ಸರ್ಕಾರದವರು ಕೈ ಬಿಟ್ಟುಕೊಂಡು ಬರುತ್ತಿದ್ದಾರೋ ಅದು ತಿಳಿಯದಾಗಿದೆ. ಇದನ್ನು ಮೊದಲು ಸರಿಪಡಿಸಬೇಕು.

ಈಗ ದೇಶದಲ್ಲಿ ರೈತರ ಸಾಲ ಪೂರಾ ಹೆಚ್ಚಾಗುತ್ತಾ ಬಂದಿದೆ. ಈಗಾಗಲೇ ಸುಮಾರು ಒಂದು ನೂರು ಕೋಟಿ ರೂಪಾಯಿಗಳವರೆಗೂ ಸಾಲ ಇರಬಹುದು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಅಷ್ಟಿಲ್ಲ, ಸುಮಾರು 24 ಕೋಟಿ ರೂಪಾಯಿಗಳಿರುತ್ತದೆಂದು ನನಗೆ ತಿಳಿದುಬಂದಿದೆ.

ಶ್ರೀ ಕೆ. ಪಟ್ಟಾಭಿರಾಮಯ್ಯ (ಕೋಲಾರ).—100 ಕೋಟಿಗೂ ಮೇಲಿರಬಹುದೇ ಹೊರತು ಅದಕ್ಕಿಂತ ಕಮ್ಮಿ ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಾನು ಹೇಳುತ್ತೇನೆ—ಈ ಸಾಲ ಒಂದು ನೂರು ಕೋಟಿ ಇದೆಯೆಂದು ತಾವು ಹೇಳಬಹುದು ಅದು ಹತ್ತು ಕೋಟಿ ಎಂದು. ಅಂತೂ ಯಾರೂ ಈ ಬಗ್ಗೆ ಒಂದು ಸರ್ವೆ ಪರಿಶೀಲನೆ ನಡೆಸಿಲ್ಲ. ಇದನ್ನು ಈಗಲಾದರೂ ಸರ್ವೆ ಮಾಡಿ ನಮ್ಮ ದೇಶದ ರೈತರ ಸಾಲ ಎಷ್ಟಿರುತ್ತದೆಯೆಂಬುದನ್ನು ನಿರ್ಧರಮಾಡಬೇಕಾದದ್ದು ಸರ್ಕಾರದವರ ಕರ್ತವ್ಯ. ಇದನ್ನು ಯಾವ ರೀತಿಯಾಗಿ ಹೋಗಲಾಡಿಸಲು ಸಾಧ್ಯವಿದೆಯೆಂಬುದನ್ನು ಇಲ್ಲಿಯತನಕ ಯಾರೂ ವಿಮರ್ಶೆ ಮಾಡಿರುವುದಿಲ್ಲ. ತಾವು 23 ವರ್ಷಗಳಲ್ಲಿ 7,000 ಜನ ರೈತರ ಋಣಬಾಧೆಯನ್ನು ಪರಿಹಾರ ಮಾಡಿರತಕ್ಕದ್ದೆಲ್ಲ ಎಷ್ಟಾಗಿದೆಯೆಂದು ನೋಡಿದರೆ, ಅದು ಕೇವಲ 1 ಕೋಟಿ ರೂಪಾಯಿಗಳು ಮಾತ್ರವಿದೆ. ಹೀಗೆ ತಾವು 23—24 ವರ್ಷಗಳ ದೀರ್ಘಾವಧಿಯಲ್ಲಿ ಒಂದು ಕೋಟಿ ರೂಪಾಯಿಗಳ ಸಾಲ ತೀರ್ವೆಯನ್ನು ಮಾಡತಕ್ಕಂಥ ಮಾರ್ಗ ಕಂಡು ಹಿಡಿದಿರತಕ್ಕದ್ದು ಸರಿಯಾದ ಮಾರ್ಗವೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ತೀರ್ಮಾನ ಮಾಡಲು ಮತ್ತು ಈ ಸಾಲವನ್ನು ಸಂಪೂರ್ಣವಾಗಿ ಹೋಗಲಾಡಿಸಲು ಇನ್ನೆಷ್ಟು ವರ್ಷಕಾಲ ಹಿಡಿಯುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ನೋಡಿದರೆ, ತಾವು ರೈತರ ಅನುಕೂಲಕ್ಕೆ ಅಷ್ಟೊಂದು ಹೆಚ್ಚಿನ ನಿಗಾ ಕೊಟ್ಟಿರುವುದಿಲ್ಲವೆಂದೂ ಮತ್ತು ಅವರ ಅನುಕೂಲಕ್ಕಾಗಿ ಏನೂ ಕೆಲಸ ಮಾಡಿಲ್ಲವೆಂದೂ ನಿರ್ಭಯವಾಗಿ ಹೇಳಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಈ ವರ್ಷ ಸಾಲ ಮಾಡಿರತಕ್ಕದ್ದು ತೀರಿಸಿದರೆ ಪುನಃ ನಾಳೆ ವರ್ಷ ಹೊಸದಾಗಿ ಸಾಲಕ್ಕೆ ಪ್ರಾರಂಭಮಾಡುತ್ತಾರೆ. ಇದಕ್ಕೆಲ್ಲಾ ಏನುಮಾಡುವುದಕ್ಕಾಗುತ್ತದೆ?

ಶ್ರೀ ಮುಲ್ಕ ಗೋವಿಂದರೆಡ್ಡಿ.—ಸಾಲಕ್ಕೆ ಹಾಕಿಕೊಂಡ ಅರ್ಜಿಗಳು ಬೇಗ ಇತ್ಯರ್ಥವಾಗುತ್ತಿಲ್ಲ. ಇದಕ್ಕಾಗಿ ತಾವು ಒಬ್ಬ ಸ್ಪೆಷಲ್ ಆಫೀಸರನ್ನೇ ನೇಮಕಮಾಡಿ, ರೈತರು ಯಾವ ರೀತಿ ಅರ್ಜಿ ಹಾಕಿಕೊಳ್ಳಬೇಕೋ, ಏನೇನು ಮಾಡಬೇಕೋ, ಅವುಗಳನ್ನೆಲ್ಲಾ ಮಾಡಲು ಸರಿಪಡಿಸಿ ಅವರಿಗೆ ಬೇಗ ಸಾಲ ದೊರೆಯುವಂತೆ ಮಾಡುವುದಕ್ಕಾಗಿ ಒಬ್ಬ ಆ ಸೊಸೈಟಿ ಇನ್ಸ್‌ಪೆಕ್ಟರನ್ನೇ ಇದಕ್ಕಾಗಿ ನೇಮಕ ಮಾಡಿ, ಆ ಸಾಲಕ್ಕಾಗಿ ಬರತಕ್ಕ ಅರ್ಜಿಗಳು ಬೇಗ ಇತ್ಯರ್ಥವಾಗುವಂತೆ ಮಾಡಬೇಕು. ಈಗ ಒಂದೊಂದು ತಾಲ್ಲೂಕಿನಲ್ಲಿ ನೂರಾರು ಅಪ್ಲಿಕೇಷನ್‌ಗಳು ಸಾಲಕ್ಕಾಗಿ ಬಂದಿವೆ. ಅವುಗಳ ವಿಲೇವಾರಿ ಈಗಿರುವ ರೀತಿ ಮಾಡುವುದಾದರೆ. ಅನೇಕ ಜನ ರೈತರಿಗೆ ಸಾಲವೇ ಸಿಕ್ಕುವುದಿಲ್ಲ. ಒಂದು ವೇಳೆ ಸಿಕ್ಕಿದರೂ ಬಹಳ ನಿಧಾನ. ಹಾಗೆ ಸಿಕ್ಕುವುದರಲ್ಲೂ ಮಧ್ಯೆ ಮಧ್ಯೆ ಸರಿಹೋಗಿ ಬಹಳ ತೊಂದರೆಯಾಗುತ್ತದೆ.

ಇದೆಲ್ಲದರ ಜೊತೆಗೆ ರೈತರ ಸಾಲದ ಹೊರೆಯನ್ನು ಪರಿಹರಿಸಬೇಕಾದರೆ ಏನಾದರೂ ಒಂದು ತೀಕ್ಷ್ಣವಾದ Radical Reform ಮಾಡಿದ ಹೊರತು ಸಾಧ್ಯವಿಲ್ಲ. ಇದಕ್ಕೊಂದು ಮಾರಿಟೋರಿಯಮ್ ಅನ್ನೇ ತರಬೇಕು. ಕಾನೂನಿನಿಂದ ಸಾಲವನ್ನು ನೀಗುವುದಕ್ಕೆ ಏರ್ಪಾಡು ಮಾಡಿದರೇ ವಿನಾ ಇನ್ನಾವ ವಿಧದಲ್ಲೂ ರೈತರನ್ನು ಋಣಮುಕ್ತರನ್ನಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದು ಖಂಡಿತ.

ಒಬ್ಬ ಸದಸ್ಯರು.—ಮಾನ್ಯ ಸ್ನೇಹಿತರು ಮಾತನಾಡುತ್ತಾ, ರೈತರ ಋಣ ಪರಿಹಾರಕ್ಕೆ ಮಾರಿಟೋರಿಯಮ್ಮೇ ಆಗಬೇಕೆಂದರು. ಮಾರಿಟೋರಿಯಮ್ ಎನ್ನುವುದು ಸಾಹುಕಾರರ ಹಣಕ್ಕೆ ಮಾತ್ರವೇ ಅಥವಾ ಸರ್ಕಾರದ ಹಾಗೂ ಸಾರ್ವಜನಿಕರ ಸಾಲದ ಹಣಕ್ಕೂ ಅನ್ವಯಿಸುತ್ತದೆಯೋ ?

ಶ್ರೀ ಮುಲ್ಕ ಗೋವಿಂದ ರೆಡ್ಡಿ.—ನಾನು ಹೇಳುವುದು ಸಾಹುಕಾರರುಗಳಿಂದ ರೈತರು ಸಾಲತೆಗೆದುಕೊಂಡು, ಅವರ ಸಾಲಗಳನ್ನು ಕೊಡುವುದಕ್ಕಾಗದೆ ಕಿರುಕುಳಗಳನ್ನು ಅನುಭವಿಸುತ್ತಿದ್ದಾರೆ, ಅಂಥ ಕಿರುಕುಳವನ್ನು ತಪ್ಪಿಸಬೇಕು. ಎಂದು. ಮುಖ್ಯವಾಗಿ private money lending ಎನ್ನುವುದು ತಪ್ಪಬೇಕು ಇದರಿಂದ ರೈತರಿಗೆ ತೊಂದರೆಯಾಗುತ್ತದೆ, ನಿಜ. ಅದಕ್ಕಾಗಿ agricultural rural credit banks ಹಳ್ಳಿ ಹಳ್ಳಿಗಳಲ್ಲೂ, ಪ್ರತಿಹೋಬಳಿಯಲ್ಲೂ, ತೆರೆದು, short term ಸಾಲಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬಹುದು. ವ್ಯವಸಾಯದ ಕಾಲದಲ್ಲಾಗಲಿ, ಬಿತ್ತನೆಯ ಕಾಲದಲ್ಲಾಗಲಿ, ಅತನಿಗೆ ಎಷ್ಟು ಹಣ ಬೇಕೋ ಅಷ್ಟನ್ನು ಕೊಡುವಂತೆ

(ಶ್ರೀ ಮುಲ್ಕಿ ಗೋವಿಂದರೆಡ್ಡಿ.)

ಮಾಡಿ ಫಸಲು ಬಂದಾಗ produce ಮೇಲೆ 20%—30% ನಷ್ಟು ಹಣಕೊಟ್ಟರೆ, ಆತನು ತನ್ನ ಅಲ್ಪ ಸ್ವಲ್ಪ ಖರ್ಚುಗಳಿಗೂ ಸಾಹುಕಾರನನ್ನು ಆಶ್ರಯಿಸಿ ತೊಂದರೆ ಗೀಡಾಗುವುದು ತಪ್ಪುತ್ತದೆ. ಹೀಗೆ ರೂರಲ್ ಕ್ರೆಡಿಟ್ ಸೊಸೈಟಿಗಳನ್ನು ಸ್ಥಾಪನೆ ಮಾಡುವುದು ಪ್ರಜೆಗಳ ಹಿತದೃಷ್ಟಿಯಿಂದ ಬಹಳ ಅನುಕೂಲವಾಗುತ್ತದೆ. ಇದೀಗ ಅತಿ ಪ್ರಾಮುಖ್ಯವಾದ ವಿಷಯವಾಗಿದೆ. ಇದಕ್ಕೆ ಸರ್ಕಾರದವರು ತೀವ್ರಾಸಕ್ತಿ ತೋರಿಸಬೇಕು. ರೈತರ ಏಳಿಗೆ ಮುಖ್ಯವಾಗಿ ಇದನ್ನೇ ಅವಲಂಬಿಸಿದೆ. ರೈತರು ಈ ರೀತಿ ಸಾಲಗಳಿಂದ ವಿಮುಕ್ತರಾಗಿ ಹೆಚ್ಚಿಗೆ ಶ್ರಮ ಪಟ್ಟು ಕೆಲಸಮಾಡುವುದಕ್ಕೆ ಅವಕಾಶವಾದರೆ ದೇಶದಲ್ಲಿ ಉತ್ಪತ್ತಿ ಜಾಸ್ತಿಯಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸರ್ಕಾರದವರು ತೀವ್ರಾಸಕ್ತಿ ವಹಿಸಿ ರೈತರ ಸಾಲ ನೀಗಿಸುವುದಕ್ಕೆ ಇಂಥ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ಅಧ್ಯಕ್ಷರೇ, ನಾನು ಹೆಚ್ಚಿಗೆ ಕಾಲತೆಗೆದುಕೊಂಡು ಭಾಷಣಮಾಡುವುದಕ್ಕೆ ಇಷ್ಟಪಡುವುದಿಲ್ಲ. ಎರಡ ವಿಷಯ ಗಳನ್ನು ಮಾತ್ರ ಸರ್ಕಾರದವರ ಗಮನಕ್ಕೆ ತರಬೇಕೆಂದು ಎದ್ದು ನಿಂತಿದ್ದೇನೆ.

ನಮ್ಮ ದೇಶದ ಆರ್ಥಿಕಾಭಿವೃದ್ಧಿಯಾಗಬೇಕಾದರೆ ಸಹಕಾರ ಬೆಳವಣಿಗೆ ಅತ್ಯಾವಶ್ಯಕವೆಂದು ನಂಬಿಕೆಯುಳ್ಳವರಲ್ಲಿ ನಾನೊಬ್ಬ. ಹೀಗಿರಬೇಕಾದರೆ, ಈಗ 800 ಚಿಲ್ಲರೆ ಸೊಸೈಟಿಗಳು ಹೊಸದಾಗಿ ಸ್ಥಾಪಿಸಿರುವಂಥವು ಮತ್ತು ಈ ಮೊದಲೇ ಇದ್ದಂಥವು ಎಲ್ಲ ಸೇರಿ 5,000 ಸೊಸೈಟಿಗಳು ಈಗ ನಮ್ಮ ದೇಶದಲ್ಲಿದ್ದರೂ, ಅವು ಸಾಕಾದಷ್ಟು ಮುಂದುವರಿದಿಲ್ಲವೆಂಬ ಅಂಶವನ್ನು ನೋಡಿದರೆ, ಅವುಗಳಲ್ಲೇನೋ ಲೋಪವಿರಬೇಕೆಂಬುದು ಅರ್ಥವಾಗುತ್ತದೆ. ಒಂದು ಕಾರಣ ಹೇಳುವುದಾದರೆ, ಈ ಸಹಕಾರ ಸಂಘಗಳನ್ನು ದಕ್ಷತೆಯಿಂದ ನಡೆಸಲು Trained Personnel ಇಲ್ಲವೆಂದು ಕಾಣುತ್ತದೆ. ಸರ್ಕಾರದವರು Trained Personnel ಒದಗಿಸುವುದಕ್ಕೆ ತಕ್ಕ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ಈ ಸಂಘಗಳಲ್ಲಿ ಹಣದ ದುರುಪಯೋಗಕ್ಕೆ ಅವಕಾಶವಾಗಿದೆ. ನ್ಯಾಯವಾಗಿ ಇವುಗಳ ಆಡಳಿತ ನಡೆಸಬೇಕಾದರೆ ಪ್ರತಿ ವರ್ಷವೂ ಇವುಗಳ ಲೆಕ್ಕಗಳನ್ನು ಆಡಿಟ್‌ಮಾಡಿಸುವುದು ಅತ್ಯಾವಶ್ಯಕ. ಈಗ ನಡೆಯುತ್ತಿರುವ ಆಡಿಟ್ ರೀತಿ ಅಷ್ಟಾಗಿ ಸಮರ್ಪಕವಾಗಿಲ್ಲ. ಪ್ರತಿ ವರ್ಷವೂ ಆಯಾ ವರ್ಷದ ಲೆಕ್ಕಗಳು ಆಡಿಟ್ ಆಗುವಂತೆ ಸಾಕಷ್ಟು ಆಡಿಟ್ ಸಿಬ್ಬಂದಿಯನ್ನು ಜಾಸ್ತಿಮಾಡಿದರೆ ಇಂಥ ದುರುಪಯೋಗಗಳಿಗೆ ಅವಕಾಶವಿರುವುದಿಲ್ಲ. ಜನರಿಗೂ ಸಹಕಾರ ಸಂಘಗಳಲ್ಲಿ ನಂಬಿಕೆ ಹುಟ್ಟುತ್ತದೆ. ಸೊಸೈಟಿಯ ಲೆಕ್ಕ ಪತ್ರಗಳೆಲ್ಲಾ ಸರಿಯಾಗಿವೆಯೆಂದು ಜನರಿಗೆ ತಿಳಿಯಪಡಿಸಬೇಕಾದರೆ ಒಳ್ಳೆ ದಕ್ಷತೆಯುಳ್ಳ ಆಡಿಟ್ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ತಕ್ಕಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕಾ ಸಚಿವರು).—ಅಧ್ಯಕ್ಷರೇ, ಇದುವರೆಗೂ ಮಾತನಾಡಿದ ಮಾನ್ಯ ಸ್ನೇಹಿತರು ಸಹಕಾರ ಸಂಘಗಳನ್ನು ಸಂಸ್ಥಾನದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಮಾಡುವಂತೆ ಮಾಡುವುದಕ್ಕಾಗಿ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀ ಎಚ್. ಕೆ. ಶಿವರುದ್ರಪ್ಪನವರು ಮೂಲಧನವೇ ಕೈಬಿಟ್ಟು ಎಲ್ಲಿ ಹೋಗುತ್ತದೆಯೋ ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಆ ರೀತಿ ಶಂಕೆಪಡುವುದಕ್ಕೆ ಕಾರಣವಿಲ್ಲ. ಅಂಥದಕ್ಕೆ ಅವಕಾಶವನ್ನೂ ಕೊಡುವುದಿಲ್ಲ. ಸಹಕಾರ ಸಂಘಗಳ ಬೆಳವಣಿಗೆಯ ಮೇಲೆಯೇ ನಮ್ಮ ಆರ್ಥಿಕ ಸ್ಥಿತಿ ಯಾವ ರೀತಿ ರೂಪುಗೊಳ್ಳಬೇಕೆಂಬುದು ನಿಂತಿದೆಯೆಂಬುದನ್ನು ನಾನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದೇನೆ. ಸಹಕಾರ ಸಂಘಗಳ ಬೆಳವಣಿಗೆಯಿಂದಲೇ ನಮ್ಮ ಗ್ರಾಮಾಂತರಗಳ ಆರ್ಥಿಕಸ್ಥಿತಿಯನ್ನು ಉತ್ತಮ ಪಡಿಸಲು ಸಾಧ್ಯವೆಂದು ನಂಬಿರುವವರ ಪೈಕಿ ನಾನೊಬ್ಬ.

ಇನ್ನು, ಸಹಕಾರ ಸಂಘಗಳ ಬೆಳವಣಿಗೆಗೆ, ಮಲ್ಟಿ ಪರ್ಪಸ್ ಸೊಸೈಟಿಗಳ ಏಳಿಗೆಗೆ ಏನುಮಾಡಬೇಕೆಂಬುದನ್ನು ಕುರಿತು ಒಂದೆರಡು ಸಲಹೆಗಳನ್ನುಮಾಡಿದ್ದಾರೆ. ಯಾವ್ಯಾವ ಸಂಘಗಳಿಗೆ ಸಬ್‌ವೆನ್ಷನ್ ಕೊಡಬೇಕು —— ಎಂಬುದಕ್ಕೆ ಒಂದು ತತ್ವವಿದೆ. ಸ್ವಲ್ಪ ಕಾಲ, ಅವು ಅಭಿವೃದ್ಧಿಗೆಬರುವವರೆಗೂ ಸಹಾಯಮಾಡಬೇಕು. ಅವು ತಮ್ಮ ಕಾಲಮೇಲೆ ನಿಲ್ಲುವಂತೆ ಮಾಡಬೇಕು ಎಂಬುದು ನ್ಯಾಯ. ಅದಿಲ್ಲದೆ, ಈ ಸಹಾಯವೇ ಖಾಯಮ್ಮಾಗಿರಬೇಕೆಂದು ಅವರು ಬಯಸಿಕೊಂಡಿದ್ದರೆ ಅದು ತತ್ವಕ್ಕೆ ವಿರುದ್ಧ. ಏಕೆಂದರೆ, ಎಲ್ಲಿಯವರೆಗೆ ತಾನೆ artificial ಆಗಿ ಹೀಗೆ ಸಹಾಯಮಾಡುವುದಕ್ಕೆ ಸಾಧ್ಯ? ಆದ್ದರಿಂದ ಮುಖ್ಯವಾಗಿ ಸಹಕಾರ ಮನೋಭಾವನೆ ಜನರಲ್ಲಿ ಬೆಳೆದರೆ ಆಗ್ಗೆ ಇಂಥ ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತವೆ. ಅನೇಕ ಕಡೆ ಸಹಕಾರ ಸಂಘಗಳನ್ನೇ ಒಂದು ರೀತಿಯಲ್ಲಿ ದುರುಪಯೋಗಪಡಿಸಿಕೊಂಡು ಪಾರ್ಟಿ ದ್ವೇಷಮ್ಯಕ್ಕೆ ಎಡೆಕೊಟ್ಟು ಸೊಸೈಟಿಯ ಬೆಳವಣಿಗೆಗೇ ಧಕ್ಕೆ ತಂದಿರುವ ನಿದರ್ಶನಗಳೂ ಇವೆ, ಎಷ್ಟೋ ಸಂದರ್ಭಗಳಲ್ಲಿ ಕೋರ್ಟು ಕಛೇರಿಗಳಿಗೆ ಹೋಗಿರುವುದೂ ನನ್ನ ಗಮನಕ್ಕೆ ಬಂದಿದೆ. ಅದೃಷ್ಟವಶಾತ್ ನಮ್ಮ ಸಂಸ್ಥಾನದಲ್ಲಿ ಅಂಥ ಸಂಘಗಳು ಕಡಿಮೆ. ಸಹಕಾರ ಸಂಘಗಳ ಬೆಳವಣಿಗೆ ಆಗಬೇಕಾದರೆ ನಿಸ್ಪೃಹತೆಯಿಂದ ಕೂಡಿದ ಸೇವಾಮನೋಭಾವನೆಯುಳ್ಳ ಜನರು ಇರಬೇಕಾದುದು ಬಹಳ ಮುಖ್ಯ. ಆದ್ದರಿಂದ ಎಲ್ಲೆಲ್ಲಿ ಅಂಥ ಜನರಿದ್ದು ಚೆನ್ನಾಗಿ ಸಹಕಾರ ಸಂಘಗಳನ್ನು ನಡೆಸಿಕೊಂಡಿರುತ್ತಾರೋ ಅಲ್ಲಿ ಸರ್ಕಾರದವರೂ ಖಂಡಿತವಾಗಿ ಸಹಾಯಮಾಡುವುದಕ್ಕೆ ಸದಾ ಸಿದ್ಧರಾಗಿದಾರೆ. ಅಂಥ ಸಂಘಗಳಿಗೆ ಸಹಾಯ ಮಾಡಬೇಕೆಂಬುದೇ ಸರ್ಕಾರದವರ ನೀತಿಯಾಗಿದೆ. ಇನ್ನು ಕೆಲವು ಸಂಘಗಳಿಗೆ, ಎಷ್ಟು ವರ್ಷ ಸಹಾಯ ಮಾಡಿದರೂ ತಮ್ಮ ಕಾಲ ಮೇಲೆ ನಿಂತುಕೊಳ್ಳಲು ಸಾಧ್ಯವಿಲ್ಲದಂಥವುಗಳಿಗೆ, ಉತ್ತೇಜನಕೊಟ್ಟು ಪ್ರಯೋಜನವಿಲ್ಲವೆಂದು ತಿಳಿದಿದ್ದೇವೆ. ನಮಗೆ ಸಂಖ್ಯೆಗಳ ಮೇಲೆ ಆಸೆಯಿಲ್ಲ, Quality ಬೇಕು. ಒಳ್ಳೆಯ ಉತ್ತಮ ರೀತಿಯಲ್ಲಿ ಕೆಲಸಮಾಡುತ್ತಿರುವಂಥವು ಕೆಲವೇ ಇದ್ದರೂ ಸಾಕೆಂದು ನಂಬಿರುವವನು ನಾನು. ಆದರೂ ಒಟ್ಟಿನಲ್ಲಿ ಸಹಕಾರ ಸಂಘಗಳನ್ನು ಯಾವ ಹಿರಿಯಾಸೆಯಿಂದ ಸ್ಥಾಪನೆಮಾಡಿದ್ದಾರೋ ಅದನ್ನು ಕುಂಠಿತಗೊಳಿಸಬೇಕೆಂಬ ಉದ್ದೇಶ ನನಗಿಲ್ಲ. ಈ ವರ್ಷ ಸಬ್‌ವೆನ್ಷನ್ ಕೊಡಬೇಕೇ ಬೇಡವೇ, ಗ್ರಾಮಾಂತರ ಸೊಸೈಟಿಗಳ ವಿಚಾರದಲ್ಲಿ ಯಾವ ರೀತಿ ಮಾಡಬೇಕು ಎಂಬುದನ್ನಾಲೋಚಿಸಿ, ಅವರ ಕೆಲಸ ನೋಡಿ ಸಹಾಯಮಾಡಲಿಕ್ಕೆ ಪ್ರಯತ್ನಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಮುಲ್ಕಿ ಗೋವಿಂದರೆಡ್ಡಿಯವರು ಒಂದು ಸಲಹೆ ಕೊಟ್ಟರು. ಅವರು ಪದೇ ಪದೇ ರೈತರ ಸಾಲದ ವಿಚಾರ ಹೇಳುತ್ತಾರೆ. ಜನರು ಅವರಿಗೆ ಸಾಲವೇ ಕೊಡುವುದು ಬೇಕಾಗಿಲ್ಲವೆಂದು ದೊಡ್ಡದಾಗಿ

ಅವರು ವಾದಿಸಿದರು. ಆದರೆ ಇಂದು ನಮ್ಮ ಆರ್ಥಿಕ ಸ್ಥಿತಿ ಯಾವ ರೀತಿಯದೆ, ನಮ್ಮ ಸಮಾಜ ಯಾವ ರೀತಿಯಿದೆ, ಯಾವ ರೀತಿ ಜನರ ಮನೋಬೆಳವಣಿಗೆಗೆ ಅವಕಾಶಕೊಡಬೇಕು ಎಂಬುದನ್ನು ಮುಖ್ಯವಾಗಿ ನಾವು ನೋಡಬೇಕು. ರೈತರೇಕೆ ಸಾಲ ಕೇಳಲಿಕ್ಕೆ ಹೋಗುತ್ತಾರೆಂಬುದನ್ನೂ ನೋಡಬೇಕು. ನಾವು ನೋಡಿರುವಂತೆ, ಆತ ಒಂದು ರೂಪಾಯಿ Productive ಸಾಲ ಮಾಡಿದರೆ, ನಾಲ್ಕು ರೂಪಾಯಿ unproductive ಸಾಲವನ್ನು ನಿಷ್ಕಾರಣವಾಗಿ ಮಾಡುತ್ತಾನೆ. ಇನ್ನು ಕೆಲವರನ್ನು ನಾನು ನೋಡಿದ್ದೇನೆ, ಹತ್ತು ಸಾವಿರ ರೂಪಾಯಿಗಳ ನೇಂಗ ಬೆಳೆದಕೂಡಲೆ 20,000 ರೂಪಾಯಿಗಳ ಸಾಲಮಾಡುತ್ತಾರೆ. ಇದೆಲ್ಲಾ ತಪ್ಪಬೇಕಾದರೆ, ಸಮಾಜದಲ್ಲಿ ಸರಿಯಾದ ತಿಳುವಳಿಕೆ ಹರಡಬೇಕು. ಯಾರೇ ಆಗಲಿ, ಮುಂದಿನ ವರ್ಷ ಕಷ್ಟಬಂದರೆ ಏನ ಮಾಡಬೇಕೆಂಬ ಮನೋಭಾವನೆಯಿಂದ ಕೆಲಸ ಮಾಡುವಂತೆ ಮಾಡಬೇಕು. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳು ರೈತರ ಪೂರಾ ಸಾಲವನ್ನು ತೀರಿಸುವುದಕ್ಕಾಗುವುದಿಲ್ಲವೆಂದು ಈಗ ತಾವು ಹೇಳಿದಿರಿ. ಈಗ ಮೊನ್ನೆ ಬಂದ ಒಳ್ಳೆಯ ಧಾರಣೆಯಲ್ಲಿ ಅನೇಕ ಜನರು ತಮ್ಮ ಸಾಲಗಳನ್ನು ತೀರಿಸಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ನಮ್ಮಲ್ಲಿ ದುರದೃಷ್ಟವಶಾತ್ ಸರಿಯಾದ ಅಂಕಿ ಅಂಶಗಳಿಲ್ಲ. ಏನೋ ಸ್ವಲ್ಪ ಇರುವುದರಲ್ಲಿ ಅಷ್ಟು ಚೆನ್ನಾಗಿ ಗೊತ್ತಾಗುವುದಿಲ್ಲ. ಪೂರಾಸರ್ವೆ ಕೂಡ ಈಚೆಗೆ ಮಾಡಿಸಿಲ್ಲ. ಇಂಡಿಯ ಸರ್ಕಾರದವರು ಮಾಡಿಸಿದ್ದುದೂ Sample Survey. ಸರ್ವೆಮಾಡಿರುವವರೂ ಕೂಡ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. Statistical ಅಂಕಿ ಅಂಶಗಳಲ್ಲೂ ವಿಪರೀತ ಏರುಪೇರುಗಳು (wide differences) ಕಂಡುಬರುವುದರಿಂದ, ಯಾವ ನಿರ್ದಿಷ್ಟವಾದ ತೀರ್ಮಾನಕ್ಕೂ ಬರುವಂತಿಲ್ಲವೆಂದು ಅವರೂ ಹೇಳಿದ್ದಾರೆ. ಕೆಲವರು ನಮ್ಮ ದೇಶದಲ್ಲಿ ಆಹಾರವು ಕೊರತೆಯಾಗಿಲ್ಲ ಸರ್ಪ್ಲಸ್ಸೇ ಇದೆಯೆಂದೂ ಹೇಳಿದ್ದಾರೆ. ಅದೇ ಪ್ರಕಾರ ರೈತರ ಸಾಲದ ವಿಷಯದಲ್ಲೂ ಕೂಡ ನಮಗೆ ಸರಿಯಾದ ಆಧಾರಗಳಿಲ್ಲ. ಅಂತೂ, ರೈತರ ಸಾಲದ ತೀರ್ವೆಯ ವಿಚಾರದಲ್ಲಿ, ರೈತರ ಹಿತದೃಷ್ಟಿಯನ್ನೇ ಗಮನದಲ್ಲಿಟ್ಟುಕೊಂಡು ರಿಸರ್ವ್ ಬ್ಯಾಂಕಿನಿಂದ ಸಾಲ ತಂದಿದ್ದೇವೆ. ಮುಖ್ಯವಾಗಿ ರೈತರು ಸಾಲವನ್ನು ಸರಿಯಾಗಿ ವಾಪಸುಕೊಡುವಂತೆ ಅವರ ಮನೋಭಾವನೆಯನ್ನು ಬದಲಾವಣೆಯಾಗುವ ರೀತಿಯಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಜಿ. ಬಸಪ್ಪನವರು ಗ್ರಾಮಾಂತರಗಳಲ್ಲಿದ್ದು ರೈತರ ಕಷ್ಟಸುಖಗಳನ್ನು ಬಲ್ಲವರಾಗಿ ಕೆಲವು ಸಲಹೆಗಳನ್ನು ನೀಡಿದ್ದಾರೆ. ಅವರು ಹೇಳಿದಂತೆ ಸೊಸೈಟಿಗಳಲ್ಲಿ ಆಡಿಟ್ ಸರಿಯಾಗಿಲ್ಲದೆ ತೊಂದರೆಯಾಗಿರುವುದು ನಿಜ. ಹೀಗೆ ಆಡಿಟ್ ಆಗದಿರುವುದಕ್ಕೆ ಮುಖ್ಯಕಾರಣ ಸಿಬ್ಬಂದಿಯಿಲ್ಲದಿರುವುದು. ಆಮೇಲೆ ಸೊಸೈಟಿಗಳಲ್ಲಿ ಆಡಳಿತ ನಡೆಸಲು Trained Personnel ಇಲ್ಲವೆಂದು ಹೇಳಿದರು. ಮೈಸೂರಿನಲ್ಲಿ ಹೀಗೆ ತರಪೇತುಕೊಡುವುದಕ್ಕಾಗಿಯೇ ಒಂದು Cooperative Institute ಇದೆ. ಯಾರಾದರೂ ಹೋಗಿ ಅಲ್ಲಿ ಟ್ರೈನಿಂಗ್ ತೆಗೆದುಕೊಳ್ಳಬೇಕೆಂದು ಇಷ್ಟಪಟ್ಟರೆ, ಅವರಿಗೆ ಸರ್ಕಾರದವರು ಕೈಲಾದಮಟ್ಟಿಗೂ ಸಹಾಯಮಾಡುವುದಕ್ಕೆ ತಯಾರಾಗಿದ್ದಾರೆ.

ಒಟ್ಟಿನಲ್ಲಿ ಸಹಕಾರ ಸಂಘಗಳ ಬೆಳವಣಿಗೆಗೆ ತಾವೆಲ್ಲರೂ ಸಹಾಯಮಾಡಬೇಕು. ಅದರಿಂದಲೇ ನಮಗೆ ಮುಕ್ತಿ ಎಂದು ಪ್ರಾರ್ಥನೆಮಾಡಿ ಈ ಡಿಮ್ಯಾಂಡಿಗೆ ಬೆಂಬಲನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That a sum not exceeding Rs. 6,59,000 be granted to the Government to defray the charges which will come in course of payment during the year ending 31st day of March 1954, in respect of 'Co-operation'."

The motion was adopted.

DEMAND NO. 26—INDUSTRIES AND SUPPLIES.

43. *Industries and Supplies (except Sericulture).*

Mr. SPEAKER.—Motion moved:

"That a sum not exceeding Rs.6,03,46,000 be granted to the Government to defray the charges which will come in course of payment during the year ending 31st day of March 1954, in respect of 'Industries and Supplies (Except Sericulture)'."

So far as the other two Demands were concerned, we adopted the procedure of having a general debate. What procedure shall we adopt in respect of this Demand?

Sri H. SIDDAVEERAPPA.—(Minister for Home and Industries).—This general debate has proved well. So many ideas have been expressed.

Sri S. SRINIVASA IYENGAR (T.-Narsipur).—Our chances have been taken away.

Mr. SPEAKER.—Till 4-30 we have time. So we shall have a general debate on the main motion. We will adopt this procedure.

ಶ್ರೀ ಎಚ್. ಸಿದ್ದವೀರಪ್ಪ.—ಅಧ್ಯಕ್ಷರೇ, ಈ ಡಿಮ್ಯಾಂಡಿನ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಿರತಕ್ಕ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಎಂಬುವರಿಗೆ ಈ ಇಲಾಖೆಯ ಕೆಲಸ ಕಾರ್ಯಗಳ ಜೊತೆಗೆ ಇನ್ನು ಅನೇಕ ಕೆಲವು ಮುಖ್ಯ ಕೆಲಸ ಕಾರ್ಯಗಳನ್ನು ಕೊಟ್ಟಿದೆ. Director of Sandal Oil Factory, Commissioner for Economic Development and Planning—ಈ ಹುದ್ದೆಗಳೂ ಅವರಿಗೆ ಸೇರಿವೆ. ಇದಲ್ಲದೆ ಎಕಾನಮಿ ಮಾಡಬೇಕೆಂಬ ದೃಷ್ಟಿಯಿಂದ additional Director of Industries

(ಶ್ರೀ ಹೆಚ್. ಸಿದ್ದವೀರಪ್ಪ)

ಎಂಬ ಹುದ್ದೆಯನ್ನೂ ಕೂಡ ವಜಾ ಮಾಡಿದ್ದೇವೆ. ಹಿಂದೆ ಇಬ್ಬರು ಡೈರೆಕ್ಟರುಗಳಿದ್ದರು. ಈಗ ಒಬ್ಬರನ್ನೇ ಇಟ್ಟಿದ್ದೇವೆ.

ಇದು ಈ ಇಲಾಖೆಯ ಆಡಳಿತ ಬಾಬಿನ ವಿಷಯವಾಯಿತು. ಇನ್ನು ಈ ಇಲಾಖೆಯ ಕೆಲಸ ಕಾರ್ಯಗಳ ವಿಚಾರ. ನಮ್ಮಲ್ಲಿ ಸಂಪೂರ್ಣವಾಗಿ ಸರ್ಕಾರದಿಂದಲೇ ನಡೆಸತಕ್ಕ ಕೈಗಾರಿಕೋದ್ಯಮ ಒಟ್ಟು ಹತ್ತು ಇವೆ. ಸುಮಾರು 6 ಕೋಟಿ ರೂಪಾಯಿಗಳ ಬಂಡವಾಳ ಇವುಗಳ ಮೇಲಿದೆ. ಇವುಗಳಲ್ಲಿ ಅತಿ ಮುಖ್ಯವಾದವದ್ದು ಎಂದರೆ, ಭದ್ರಾವತಿ ಕಬ್ಬಿಣದ ಕಾರ್ಖಾನೆ, ಸರ್ಕಾರಿ ಎಲೆಕ್ಟ್ರಿಕ್ ಫ್ಯಾಕ್ಟರಿ, ಪೋರ್ಸ್ಲೇನ್ ಫ್ಯಾಕ್ಟರಿ; ಸೋಪ್ ಫ್ಯಾಕ್ಟರಿ ಮುಂತಾದುವು. ಇವುಗಳಲ್ಲಿ ಒಟ್ಟು 7 589 ಕಾರ್ಮಿಕರಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಒಂದೆರಡು ಕೈಗಾರಿಕೆಗಳನ್ನು ಬಿಟ್ಟರೆ, ಮಿಕ್ಕವೆಲ್ಲಾ ಚಾಲ್ತಿ ಸಾಲಿನಲ್ಲಿ ಸಮರ್ಪಕವಾಗಿ, ಜನರಲ್ ಡಿಪ್ರಿಸಿಯೇಷನ್ ಇದ್ದರೂ ಸರಿಯಾಗಿಯೇ ಕೆಲಸಮಾಡಿವೆಯೆಂದು ಹೇಳಬಹುದು.

ಆ ಮೇಲೆ, ಈ ಹತ್ತು ಕೈಗಾರಿಕೋದ್ಯಮಗಳಲ್ಲದೆ, ಸರ್ಕಾರದವರು 9% ನಿಂದ ಹಿಡಿದು 62% ವರೆಗೂ ಬಂಡವಾಳ ಹಾಕಿರುವ ಜಾಯಿಂಟ್ ಸ್ಟಾಕ್ ಕೈಗಾರಿಕೋದ್ಯಮಗಳು 24 ಇವೆ. ಅವುಗಳ ವಿಷಯದಲ್ಲಿ ಅಂಕಿಅಂಶಗಳೆಲ್ಲಾ ತಮ್ಮಲ್ಲೇ ಇರಬಹುದು. ಅಪೇಕ್ಷೆಪಟ್ಟರೆ, ನನ್ನಲ್ಲಿ ಪಟ್ಟಿಯಿದೆ, ಅದನ್ನು ಬೇಕಾದರೆ ಕೊಡುತ್ತೇನೆ. ಅವುಗಳ ಮೇಲೆ ಒಟ್ಟು 1,42,35,840 ರೂಪಾಯಿಗಳ ಬಂಡವಾಳವನ್ನು ಹಾಕಿದ್ದೇವೆ. ಇದಲ್ಲದೆ ಸರ್ಕಾರದವರು ರೇಡಿಯೋ ಅಂಡ್ ಎಲೆಕ್ಟ್ರಿಕಲ್ಸ್, ಸ್ಪನ್‌ಸಿಲ್ಕ್ ಮಿಲ್, ಮೈಸೂರು ಕ್ರೋಮ್ ಟ್ಯಾನಿಂಗ್ ಫ್ಯಾಕ್ಟರಿ, ಶಂಕರ್ ಟೆಕ್ಸ್‌ಟೈಲ್ ಮಿಲ್ಸ್, ಗಣೇಶ ಟೆಕ್ಸ್‌ಟೈಲ್ ಮಿಲ್ಸ್ ಮುಂತಾದ ಕೈಗಾರಿಕೋದ್ಯಮಗಳಿಗೆ ಸುಮಾರು 72 ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿದ್ದಾರೆ. ಕಪಿಲಾ ಟೆಕ್ಸ್‌ಟೈಲ್ಸ್ ಮಿಲ್ಲಿಗೆ ಜಾಯಿಂಟ್ ಆಗಿ ಸರ್ಕಾರದವರು ಸಹಾಯ ಮಾಡಿದ್ದಾರೆ. ಒಟ್ಟಿನಲ್ಲಿ ಈ ಸಂಸ್ಥೆಗಳು ಚಾಲ್ತಿಸಾಲಿನಲ್ಲಿ ಯಾವ ರೀತಿಯ ಹೆಚ್ಚು ಏರುಪೇರುಗಳೂ ಇಲ್ಲದೆ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಮುಖ್ಯವಾಗಿ ಈ ಸಂಸ್ಥೆಗಳಿಂದ ಸಾರ್ವಜನಿಕರು ಪ್ರಯೋಜನ ಪಡೆಯುವುದಕ್ಕೂ ಸಾರ್ವಜನಿಕರಿಗೆ ಈ ಕೈಗಾರಿಕೆಗಳು ಯಾವ ರೀತಿ ನಡೆಯುತ್ತವೆ ಎಂದು ತಿಳಿದುಕೊಳ್ಳುವುದಕ್ಕೂ ಅನುಕೂಲವಾಗಲೆಂದು ಇವುಗಳ ಮೇಲ್ವಿಚಾರಣೆಗೆ ಬೋರ್ಡುಗಳನ್ನು ಏರ್ಪಾಡು ಮಾಡಿದ್ದಾರೆ. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಒಂದು ಬೋರ್ಡು ಇದೆ. ಬಾಕಿ ಕೈಗಾರಿಕೆಗಳಿಗೂ ಇನ್ನೊಂದು ಬೋರ್ಡ್ ಇದೆ. ಈ ಬೋರ್ಡುಗಳು ಪದೇ ಪದೇ ಸೇರಿ ಆಯಾ ಕೈಗಾರಿಕೆಯ ಆಡಳಿತದ ವಿಚಾರವನ್ನು ನೋಡಿಕೊಳ್ಳುತ್ತಿವೆ. ಅಲ್ಲದೆ ವರ್ಕ್ಸ್ ಕಮಿಟಿಗಳನ್ನು ಮಾಡಿದ್ದಾರೆ. ಇದರಲ್ಲಿ ಲೇಬರ್ ಪ್ರತಿನಿಧಿಗಳೂ ಮ್ಯಾನೇಜ್‌ಮೆಂಟಿನ ಪ್ರತಿನಿಧಿಗಳೂ ಇದ್ದಾರೆ. ಕಾರ್ಮಿಕರಿಗಿರುವ ತೊಂದರೆಗಳನ್ನು ತಿಳಿದು ಅವುಗಳನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಬಾಕಿ ವ್ಯಾಪಾರೋದ್ಯಮ ಸಂಸ್ಥೆಗಳು ಯಾವ ರೀತಿಯಲ್ಲಿ ಪ್ರತಿವರ್ಷವೂ ತಮ್ಮ ಆಯವ್ಯಯದ ಪಟ್ಟಿಯನ್ನು ತಯಾರಿಸುತ್ತವೆಯೋ (balance sheet) ಅದೇ ರೀತಿ ಈ ಸಂಸ್ಥೆಗಳೂ ಪ್ರತಿವರ್ಷವೂ ಆಯವ್ಯಯದ ಪಟ್ಟಿಯನ್ನು ತಯಾರು ಮಾಡುತ್ತಿವೆ.

1951ನೆಯ ಇಸವಿಯಲ್ಲಿ ಶ್ರೀ ಕಸ್ತೂರಿಬಾಯ್ ಲಾಲ್‌ಬಾಯ್ ಅವರು ಇಲ್ಲಿಗೆ ಬಂದು ನಮ್ಮ ಎಲ್ಲಾ ಸರ್ಕಾರಿ ಮತ್ತು ಜಾಯಿಂಟ್‌ಸ್ಟಾಕ್ ಕೈಗಾರಿಕಾ ಸಂಸ್ಥೆಗಳನ್ನೂ ನೋಡಿ ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ತಮಗೇ ಗೊತ್ತಿರುವಂತೆ ಹಣದ ಉಬ್ಬರ ವಿಳಿತದಿಂದ ವ್ಯಾಪಾರ ಕಡಿಮೆ ಯಾಗಿದೆ. ಎಕ್ಸ್‌ಪೋರ್ಟ್ ಯೋಜನೆಗಳನ್ನು ಮಾಡುತ್ತಿದ್ದೇವೆ. ಪವರ್ ಒದಗಿಸಲು 70 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಖರ್ಚುಮಾಡಬೇಕಾಗಿದೆ. ಬಾರ್ಬ್ ಫ್ಯಾಕ್ಟರಿಯನ್ನು ಸ್ಥಾಪಿಸಬೇಕೆಂದು ಪ್ರಯತ್ನ ನಡೆಯುತ್ತಿದೆ. ಇನ್ನೂ ಇದು formative stage ನಲ್ಲಿದೆ. ಒಂದು ನಿರ್ದಿಷ್ಟವಾದ ರೂಪಕ್ಕೆ ಬಂದಿಲ್ಲ. ಆದಕಾರಣ ಈಗ ಹೆಚ್ಚು ಹೇಳುವುದು ಸರಿಯಲ್ಲ.

ಇನ್ನು ಗ್ರಾಮ ಮತ್ತು ಗೃಹಕೈಗಾರಿಕೆಗಳು ನಮ್ಮ ವೃದ್ಧಪಿತಾಮಹರಾದ ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ನಡೆಯುತ್ತಿವೆ. ಒಬ್ಬರು ಉನ್ನತ ಅಧಿಕಾರಿಗಳನ್ನು ಅವರಲ್ಲಿ ಕೆಲಸ ಮಾಡಲು ಬಿಟ್ಟಿದ್ದೇವೆ. ಖಾದಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಇದಕ್ಕಾಗಿ ಒಂದು ಲಕ್ಷ ರೂಪಾಯಿ ಒದಗಿಸಿದ್ದೇವೆ. ಮೊನ್ನೆ ತಾನೇ 53ಸಾವಿರ ರೂಪಾಯಿ ಬೇರೆ ಮಂಜೂರಾಗಿದೆ.

ಲಂಡನ್ನಿನಲ್ಲಿ ಒಬ್ಬರು ನಮ್ಮ ಟ್ರೇಡ್ ಏಜೆಂಟರು ಕೆಲಸ ಮಾಡುತ್ತಿದ್ದಾರೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಡೈರೆಕ್ಟರೇ ಕಂಟ್ರೋಲರ್ ಆಫ್ ಐರನ್ ಅಂಡ್ ಸ್ಟೀಲ್ ಆಗಿ ಕೆಲಸ ಮಾಡುತ್ತಿದ್ದಾರೆ. ಒಟ್ಟಿನಲ್ಲಿ, ಭದ್ರಾವತಿ ಕಾರ್ಖಾನೆ ಹೇಗೆ ಕೆಲಸ ಮಾಡುತ್ತಿದೆ ಎಂಬುದು ತಮಗೆಲ್ಲಾ ಗೊತ್ತಿದೆ. ನನ್ನ ಮಾತನ್ನು ಮುಕ್ತಾಯ ಮಾಡುತ್ತಾ ಇನ್ನು ಒಂದು ವಿಚಾರವನ್ನು ಮಾತ್ರ ಹೇಳಬೇಕಾಗಿದೆ. ನಮ್ಮ ಕೈಗಾರಿಕೆಗಳನ್ನು ಸರಿಯಾಗಿ ಅಭಿವೃದ್ಧಿಪಡಿಸಿ ನಮ್ಮ ಸಂಸ್ಥಾನದ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಬಹಳ ಮುಖ್ಯವಾದ ಕೆಲಸ. ಮೈಸೂರು ದೇಶ ಕೈಗಾರಿಕೆಗಳಿಗೆ ಬಹಳ ಮುಖ್ಯವಾದ ಸಂಸ್ಥಾನ ಎಂಬುದು ಎಲ್ಲರಿಗೂ ಗೊತ್ತಿರುವ ಅಂಶ. ಇದರ ಬೆಳವಣಿಗೆಯ ವಿಚಾರದಲ್ಲಿ ತಾವು ತಮ್ಮ ರಚನಾತ್ಮಕ ಸಲಹೆಗಳನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(Sri M. Linganna rose.)

Mr. SPEAKER.—Every Member will have seven minutes to speak.

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸ್ವಾಮಿ, ಮೈಸೂರು ಸರ್ಕಾರದವರು ಕೈಗಾರಿಕೆಗಳ ಬಗ್ಗೆ ಒಂದು ಸ್ಪಷ್ಟವಾದ ನೀತಿಯನ್ನು ನಮ್ಮ ಮುಂದಿಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅದರಲ್ಲಿಯೂ ಗೃಹಕೈಗಾರಿಕೆಗಳ ವಿಚಾರದಲ್ಲಿ ಅವರ ಸ್ಪಷ್ಟವಾದ ಅಭಿಪ್ರಾಯವೇನೆಂಬುದು ಕೂಡ ವ್ಯಕ್ತವಾಗಿಲ್ಲವೆಂಬುದನ್ನು ಹೇಳಬೇಕಾಗಿಲ್ಲ. ನನ್ನ ಈ ಅಭಿಪ್ರಾಯಕ್ಕೆ ಕಾರಣವೇನೆಂಬುದನ್ನು ನಾನು ಉದಾಹರಣೆಗಳ ಮೂಲಕ ಹೇಳಬೇಕಾಗಿದೆ. ಮೊದಲನೆಯ ಉದಾಹರಣೆಯಾಗಿ ನಂಜನಗೂಡಿನಲ್ಲಿರುವ ತೆಂಗಿನ ನಾರಿನ ಹಗ್ಗದ ಕೈಗಾರಿಕೆಯ ವಿಚಾರವನ್ನು ಹೇಳುತ್ತೇನೆ. ಇದರ ಉದ್ದೇಶ ತೆಂಗಿನ ನಾರಿನಿಂದ ಅಥವಾ ಮಟ್ಟೆಯಿಂದ ಹುರಿಹಗ್ಗ ಮುಂತಾದ ಉಪಯುಕ್ತವಾದ ಸಾಮಾನುಗಳನ್ನು ತಯಾರುಮಾಡಿ ಅವುಗಳನ್ನು ಮಾರುವುದು. ಇದು ಗೃಹಕೈಗಾರಿಕೆಗೆ ಸಂಬಂಧಪಟ್ಟದ್ದು. ಇದು ಇಡೀ ಮೈಸೂರು ಸಂಸ್ಥಾನ

ದಲ್ಲಿ ನಂಜನಗೂಡು ಒಂದರಲ್ಲೇ ಇರುವುದು. ಇದು ಯಾವ ಸ್ಥಿತಿಯಲ್ಲಿದೆ ಎಂಬ ಬಗ್ಗೆ ಹೋದ ಅಧಿವೇಶನದಲ್ಲಿ ಒಂದು ಪ್ರಶ್ನೆಯನ್ನು ಹಾಕಿ ಅನೇಕ ಅಂಶಗಳನ್ನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಹೇಳಿರುವಂತೆ, ಇದಕ್ಕೆ ಇನಿಷಿಯಲ್ ಸಿಬ್ಬಂದಿ ಖರ್ಚು ರೂ. 357-8-0, ವಾರ್ಷಿಕ ವೆಚ್ಚ ರೂ. 8,151-2-0. ಇದರಿಂದ ಆಗುವ ನಿವ್ವಳ ಲಾಭ ಮತ್ತು ನಷ್ಟವನ್ನು ಹೇಳಿದ್ದಾರೆ. ಸಿಬ್ಬಂದಿ ಖರ್ಚು, ಟಿ. ಎ. ಮುಂತಾದವು ಸೇರದೆ ರೂ. 606-1-0 ಲಾಭವಾಗಿದೆಯೆಂದು ಹೇಳಿದ್ದಾರೆ. ಈ ಗೃಹಕೈಗಾರಿಕೆ ಯಾವಸ್ಥಿತಿಯಲ್ಲಿದೆ ಎಂಬುದನ್ನು ಸಭೆಯ ಗಮನಕ್ಕೆ ತರಬೇಕೆಂಬುದು ನನ್ನ ಆಶಯ. ಈ ಕೈಗಾರಿಕೆ ಒಂದು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಒಟ್ಟು ರೂ. 5,936-3-4 ಕೈಗಾರಿಕೆಯಿಂದ ನಷ್ಟವಾಗುತ್ತಿದೆ. ಈ ಸಣ್ಣ ಕೈಗಾರಿಕೆಯನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಅಲ್ಲದೆ ಎಷ್ಟು ಬಾಡಿಗೆ ಕೊಡಬಹುದೋ ಅದಕ್ಕಿಂತ ಹೆಚ್ಚು ಬಾಡಿಗೆ ಕೊಡುತ್ತಿದ್ದಾರೆ. ಅಲ್ಲದೆ ಬಾಡಿಗೆ ವಿಚಾರದಲ್ಲಿ ಸರ್ಕಾರಕ್ಕೂ ಆ ಮನೆಯ ಮಾಲೀಕರಿಗೂ ವ್ಯವಹಾರ ನಡೆದು, ಅದು ಯಾವ ಸ್ಥಿತಿಯಲ್ಲಿದೆಯೋ ಗೊತ್ತಿಲ್ಲ. ಹೀಗೆಲ್ಲಾ ಮಾಡುವುದಕ್ಕೆ ಬದಲು ಅದೇ ಮನೆಯನ್ನು ಕೊಂಡುಕೊಂಡು ಈ ಕೈಗಾರಿಕೆಯನ್ನು ಯಾವ ರೀತಿ ಅಭಿವೃದ್ಧಿಮಾಡಬೇಕೆಂಬ ವಿಷಯದಲ್ಲಿ ಎಷ್ಟು ನಿಗಾ ಕೊಡಬೇಕೋ ಅಷ್ಟನ್ನು ಕೊಟ್ಟಿದ್ದರೆ ಹೀಗೆ ನಷ್ಟಕ್ಕೆ ಕಾರಣವಿರುತ್ತಿರಲಿಲ್ಲ, ಕೈಗಾರಿಕೆಯೂ ಮುಂದೆ ಬರುತ್ತಿತ್ತು. ಈಗ ಗೃಹ ಕೈಗಾರಿಕೆಯನ್ನು ಇಲ್ಲಿ ಮಾತ್ರವಲ್ಲ, ಬೆಂಗಳೂರು ಜಿಲ್ಲೆಯಲ್ಲಿಯೂ, ತುಮಕೂರು ಜಿಲ್ಲೆಯಲ್ಲಿಯೂ ಹೆಚ್ಚು ಅಭಿವೃದ್ಧಿಪಡಿಸಬೇಕೆಂಬುದು ನನ್ನ ಆಶೆ. ನನ್ನ ಮಿತ್ರರು ಆಗಲೆ ಹೇಳಿದ ಹಾಗೆ, ಗ್ರಾಮಾಂತರ ಪ್ರದೇಶದ ಜನರ ಆರ್ಥಿಕ ಮಟ್ಟ ಹೆಚ್ಚದೇ ಇರಲು ಮುಖ್ಯಕಾರಣಗಳಲ್ಲಿ ಗೃಹ ಕೈಗಾರಿಕೆಯ ಅಭಿವೃದ್ಧಿಯಾಗದಿರುವುದೂ ಒಂದು. ಹಿಂದಿನಿಂದಲೂ ನಮ್ಮ ಸಮಾಜದಲ್ಲಿ ಜನರು ವ್ಯವಸಾಯ ಕಸಬೊಂದರ ಮೇಲೆಯೇ ನಿಂತು ಗೃಹ ಕೈಗಾರಿಕೆಗಳ ಉಪಕಸಬಿನ ಕಡೆಗೆ ಗಮನಕೊಡದಿರುವುದೇ ನಮ್ಮ ಹಳ್ಳಿಯವರ ದುಸ್ಥಿತಿಗೆ ಕಾರಣ. ಸರ್ಕಾರದವರು ಈ ಉಪಕಸಬಾದ ಗೃಹ ಕೈಗಾರಿಕೆಗಳನ್ನು ಹೆಚ್ಚಿನ ಖರ್ಚಿಲ್ಲದೆ ಸಂಸ್ಥಾನದ ನಾನಾ ಕಡೆಗಳಲ್ಲಿ ಜಾರಿಗೆ ತರಬಹುದು. ಇನ್ನು ಅನೇಕ ವಿಚಾರಗಳನ್ನು ಪ್ರಸ್ತಾಪಮಾಡುವುದಕ್ಕೆ ನನಗೆ ಇಚ್ಛೆ, ಆದರೆ ಸಾಕಷ್ಟು ಕಾಲವಿಲ್ಲ.

ಮತ್ತೊಂದು ಉದಾಹರಣೆ ಕೊಡಬೇಕೆಂದರೆ ಖಾದಿಯ ವಿಷಯ. ಖಾದಿಯ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದೂ ಒಂದು ಗೃಹ ಕೈಗಾರಿಕೆಯೆಂದು ಪರಿಗಣಿಸಲ್ಪಟ್ಟಿದೆ. ನಮ್ಮ ಮೈಸೂರು ಸರ್ಕಾರವಲ್ಲದೆ ಇತರ ಎಲ್ಲ ಸಂಸ್ಥಾನಗಳ ಸರ್ಕಾರಗಳೂ ಇದನ್ನೊಪ್ಪಿದೆ. 1927ನೆಯ ಇಸವಿಯಲ್ಲಿ ಮೊಟ್ಟಮೊದಲು ಬದನವಾಳಿನಲ್ಲಿ ಮಹಾತ್ಮಾಗಾಂಧಿಯವರು ಒಂದು ಖಾದಿ ಸಂಸ್ಥೆಯನ್ನು ಪ್ರಾರಂಭಮಾಡಿದರು. 1927 ರಿಂದ ಇಲ್ಲಿಯವರೆಗೆ ಈ ಸಂಸ್ಥೆಯ ಚರಿತ್ರೆಯನ್ನು ನೋಡಿದರೆ, ನಿಜವಾಗಿ ಇದಕ್ಕೆ ಯಾವ ರೀತಿಯ ಸಹಾಯ ಕೊಡಬೇಕೋ, ಗೃಹಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಮತ್ತು ರಾಷ್ಟ್ರದ ಹಿತ ದೃಷ್ಟಿಯಿಂದ, ಆ ರೀತಿಯಲ್ಲಿ ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಇದಕ್ಕೆ step motherly treatement ದೊರಕುತ್ತಿದೆ. ಸರ್ಕಾರದವರು ಒಂದು ಸಮಿತಿಯನ್ನು ರಚನೆ ಮಾಡಿದರು, ಆ ಸಮಿತಿ ಈ ವಿಷಯದಲ್ಲಿ ವರದಿಮಾಡಿದೆ ಆ ವರದಿ ಸರ್ಕಾರದ ಮುಂದಿದೆ. ಆದರೆ ಅದನ್ನು ಸರ್ಕಾರದವರು ಪರಿಶೀಲನೆಮಾಡಿ ಅವರ ಶಿಫಾರಸುಗಳನ್ನು ಕಾರ್ಯಗತಮಾಡಿದರೋ ಇಲ್ಲವೋ ಎಂಬುದು ಇನ್ನೂ ಗೊತ್ತಿಲ್ಲ. ಹೀಗೆಯೇ ನಾನಾ ವರದಿಗಳು ಸರ್ಕಾರದ ಮುಂದೆ ಬರುತ್ತಿವೆ. ವಿದ್ಯಾಭ್ಯಾಸದ ಸುಧಾರಣೆ ಸಮಿತಿಯ ವರದಿಯೂ ಬಂದಿದೆ. ಹಿಂದೆ ಸಹಕಾರದ ವಿಷಯದಲ್ಲಿ ಸುಧಾರಣೆಗಳನ್ನು ಸಲಹೆ ಮಾಡಲು ಒಂದು ಸಮಿತಿಯು ನೇಮಕವಾಗಿತ್ತು. ಅದರ ವರದಿಯನ್ನು ಸುಮಾರು 400—500 ಪುಟಗಳ ಪುಸ್ತಕರೂಪದಲ್ಲಿ ಅಚ್ಚುಮಾಡಿಸಿದ್ದಾರೆ. ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರವನ್ನು ಕೂಲಂಕುಷವಾಗಿ ಪರಿಶೀಲನೆಮಾಡಿ, ಯಾವ ಯಾವ ರೀತಿ ಮಾಡಬೇಕು ಎಂಬುದನ್ನು ಅಗ್ರಿಕಲ್‌ಚರಲ್ ಕ್ರೆಡಿಟ್ ಸಂಘಗಳ ವಿಚಾರವೆಲ್ಲವನ್ನೂ ಕೂಲಂಕಷವಾಗಿ ಚರ್ಚೆಮಾಡಿ ಅವರ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಆದರೆ ಅಂಥ ವರದಿ ಬಂದ ಮೇಲೆ ಅದು ಮೂಲೆಗೆ ಹೋಗುತ್ತದೆಯೇನೋ ತಿಳಿಯದಾಗಿದೆ. ಖಾದಿಯ ವಿಚಾರವನ್ನು ನೋಡಿದರೆ 1927ನೆಯ ಇಸವಿಯಲ್ಲಿ ಬದನವಾಳು ಖಾದಿ ಕೇಂದ್ರ ಯಾವ ಮಟ್ಟದಲ್ಲಿ ಕೆಲಸಮಾಡುತ್ತಿತ್ತೋ ಈಗ ಕೂಡ ಅದೇ ರೀತಿ ಕೆಲಸಮಾಡುತ್ತಿದೆ. ಚರಕವನ್ನು ಈಗ ಬಿಟ್ಟು ಬಿಡುವ ಪರಿಸ್ಥಿತಿ ಬಂದಿದೆ. ಏಕೆಂದರೆ, ಇದಕ್ಕೆ ಸಾಕಷ್ಟು ಉತ್ತೇಜನ ಕೊಡುತ್ತಿಲ್ಲ. ಮೈಸೂರು ದೇಶಕ್ಕೆಲ್ಲಾ ಬೇಕಾದ ಖಾದಿಯನ್ನು ಬದನವಾಳಿನಲ್ಲೇ ಮಾಡಬಹುದು. ಅಲ್ಲಿ ಇನ್ನೊಂದು ಕಷ್ಟವಿದೆ. ಅದು ಟೆಕ್ಸ್‌ಟೈಲ್ ಇಲಾಖೆಗೆ ಸಂಬಂಧಪಟ್ಟದ್ದು. ಅಲ್ಲಿ ಕೆಲಸಮಾಡುವವರಿಗೆ ಒಂದು ಸರ್ಕಲ್‌ನಿಂದ ಇನ್ನೊಂದು ಸರ್ಕಲ್ಲಿಗೆ ವರ್ಗವಿಲ್ಲದೆ ಕಷ್ಟವಾಗಿದೆ. ಖಾದಿ ಹೀನಸ್ಥಿತಿಗೆ ಬರಲು ಇದೂ ಒಂದು ಕಾರಣವಾಗಿದೆ. ಅನೇಕ ಕಡೆ ಖಾದಿ ಕೇಂದ್ರಗಳನ್ನು ತೆಗೆದರೂ ಕೂಡ ಯಾವ ಕಡೆ ಮೊದಲು ಪ್ರಾರಂಭಮಾಡಿದೆವೋ ಆ ಕೇಂದ್ರದಲ್ಲೇ ಕೆಲಸ ಉತ್ತಮ ಮಟ್ಟದಲ್ಲಿ ಮತ್ತು ಲಾಭದಾಯಕವಾಗಿ ನಡೆಯುತ್ತಿಲ್ಲ. ಒಟ್ಟಿನಲ್ಲಿ ಈ ವಿಷಯದಲ್ಲಿ ಹೇಳುವುದಾದರೆ, ಮೈಸೂರು ಸರ್ಕಾರದವರು ಗೃಹ ಕೈಗಾರಿಕೆಗಳಿಗೆ ಯಾವ ಸ್ಥಾನವನ್ನೂ ಇನ್ನೂ ಕೊಟ್ಟಿಲ್ಲ. ಗ್ರಾಮಾಂತರ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು, ಅಭಿವೃದ್ಧಿಮಾಡಬೇಕು ಎಂಬ ಒಂದು ಉದಾತ್ತ ಧ್ಯೇಯವನ್ನು ಸಾಧಿಸುವ ದೃಷ್ಟಿಯಿಂದ ನಾನು ಹೇಳುವುದಾದರೆ, ಗೃಹ ಕೈಗಾರಿಕೆಗಳು ಅಂದರೆ ನಾರಿನ ಕೈಗಾರಿಕೆ, ಖಾದಿ ಕೈಗಾರಿಕೆ ಮುಂತಾದ ಕೈಗಾರಿಕೆಗಳಿಗೆ ಸರ್ಕಾರ ಹೆಚ್ಚು ನಿಗಾಕೊಟ್ಟು, ನ್ಯೂನಾತಿರಿಕ್ತಗಳಿದ್ದರೆ ಸರಿಪಡಿಸಬೇಕು. ಇದನ್ನು ಪರಿಶೀಲನೆಮಾಡಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು ಗೃಹ ಕೈಗಾರಿಕೆಗಳನ್ನು ಸಂಸ್ಥಾನದಲ್ಲಿ ಬೆಳೆಸಬೇಕೆಂದು ಹೇಳಿ ನನ್ನ ಖೋತಾ ನಿರ್ಣಯವನ್ನು ಮಂಡಿಸುತ್ತೇನೆ.

2-30 P.M.

ಶ್ರೀಮತಿ ಬಿ. ಎರ್. ಸುಬ್ಬಮ್ಮ (ಚಿಕ್ಕಮಗಳೂರು-ಕಂ. ಮೂಡಿಗೆರೆ).—ಸ್ವಾಮಿ, ನಮ್ಮ ದೇಶದಲ್ಲಿರುವ ಕೈಗಾರಿಕೆಗಳ ವಿಷಯವಾಗಿ ನಾನು ಒಂದೆರಡು ಮಾತುಗಳನ್ನಾಡಬೇಕೆಂದು ಇಚ್ಛಿಸಿದ್ದೇನೆ. ಪಿತಾಮಹ ವಿಶ್ವೇಶ್ವರಯ್ಯನವರ ಯೋಜನೆಗನುಸಾರವಾಗಿ ನಮ್ಮ ದೇಶದಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪನೆಯಾಗಿ ಅವು ಕೆಲಸವನ್ನು ನಡೆಸುತ್ತಿವೆ. ಆದರೆ ಈ ದಿವಸ ಅವುಗಳ ಸ್ಥಾನಮಾನವೇನಾಗಿದೆ, ಅವುಗಳ ಸ್ಥಿತಿ ಯಾವ ರೀತಿಯಾಗಿದೆ ಎಂಬ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

(ಶ್ರೀಮತಿ ಬಿ. ಎಲ್‌. ಸುಬ್ಬಮ್ಮ.)

ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲೊಂದು ಕೈಗಾರಿಕಾ ಪಾಠಶಾಲೆಯಿದೆ. ಆ ಪಾಠಶಾಲೆಗೆ ಸರಿಯಾದ ಕಟ್ಟಡವಿಲ್ಲ, ಶಾಲಾ ಸಲಕರಣೆಗಳಿಲ್ಲ, ಅದಕ್ಕೆ ವಿದ್ಯುಚ್ಛಕ್ತಿ ದೀಪವಿಲ್ಲ. ಹೀಗೆ ಯಾವ ಒಂದು ಅನುಕೂಲವನ್ನಾಗಲಿ ಆ ಪಾಠಶಾಲೆಗೆ ತಾವು ಒದಗಿಸಿಲ್ಲ. ಒಬ್ಬ ಮಹನೀಯರು ಆ ಪಾಠಶಾಲೆಯ ಕಟ್ಟಡಕ್ಕಾಗಿ ಹಣವನ್ನು ಕೊಟ್ಟಿದ್ದಾರೆ. ಆ ಬಗ್ಗೆ ಕೂಡ ತಾವು ಸರಿಯಾದ ನಿಗಾ ತೆಗೆದುಕೊಂಡಿಲ್ಲ. ಇಂಥ ಅಶ್ರದ್ಧೆಯ ಮನೋಭಾವವನ್ನು ತಾವು ಬೇಗ ಕೊನೆಗಾಣಿಸಿ ಮಲೆನಾಡಿನ ಜನರ ಕಷ್ಟ ಸುಖಗಳೇನೆಂಬುದನ್ನು ತಿಳಿದುಕೊಂಡು ಅವರ ಅಭಿವೃದ್ಧಿಗೆ ಹೆಚ್ಚಿನ ಗಮನಕೊಡಬೇಕು.

ನಾನಾಗಲೇ ತಿಳಿಸಿದಂತೆ ನಮ್ಮ ದೇಶದಲ್ಲಿ ಅನೇಕ ಚಿಕ್ಕ ಮತ್ತು ದೊಡ್ಡ ಕೈಗಾರಿಕೆಗಳು ಸ್ಥಾಪಿತವಾಗಿರುವುದರಲ್ಲಿ ಕೆಲವು ಗೃಹ ಕೈಗಾರಿಕೆಗಳನ್ನು ಸಹ ಪೂಜ್ಯ ಪಿತಾಮಹ ಸರ್‌ ಎಂ. ವಿಶ್ವೇಶ್ವರಯ್ಯನವರ ಯೋಜನೆಗನುಸಾರವಾಗಿ ಪ್ರಾರಂಭಿಸಿದ್ದಾರೆ, ಹಾಗೆಯೆ ತಾವು ಈ ಗೃಹ ಕೈಗಾರಿಕೆಗಳಿಗೆ ಉತ್ತೇಜನ ನೀಡತಕ್ಕ ಸಂದರ್ಭದಲ್ಲಿ ನಾನಾ ಗೃಹ ಕೈಗಾರಿಕೆಗಳಿಗೆ ಎಲ್ಲೆಲ್ಲಿ ಕಚ್ಚಾ ಮಾಲುಗಳು ದೊರೆಯುತ್ತಿವೆಯೋ, ಯಾವ ಪ್ರದೇಶದಲ್ಲಿ ಶ್ರೀಗಂಧ, ಜೊಂಡು, ಬೆತ್ತ ಮತ್ತು ಬಿದಿರು, ಬೆಂಡು ಇತ್ಯಾದಿ ವಸ್ತುಗಳು ದೊರೆಯುತ್ತಿವೆಯೋ ಅಂಥ ಮಲೆನಾಡು ಪ್ರದೇಶದಲ್ಲಿ ಈ ಗೃಹ ಕೈಗಾರಿಕೆಗಳನ್ನು ಪ್ರಾರಂಭಮಾಡಲು ತಾವು ಮನಸ್ಸು ಕೊಡದಿರುವುದು ತುಂಬಾ ಶೋಚನೀಯವಾದ ವಿಚಾರ. ಆ ಪ್ರದೇಶದ ಜನರಿಗೆ ಸಾಕಷ್ಟು ಕೆಲಸವಿಲ್ಲದೆ ಕಾಲಹರಣ ಮಾಡುತ್ತಿದ್ದಾರೆ. ಜನರಿಗೊಂದು ಉಪಜೀವನ ನಡೆಸಿಕೊಳ್ಳಲು ಅವಕಾಶವನ್ನು ತಾವು ಕಲ್ಪಿಸಿಲ್ಲ. ಅದರಿಂದ ಅವರಿಗೆ ಬಡತನ ಹೆಚ್ಚಾಗುತ್ತದೆ. ಅದೇ ರೀತಿಯಾಗಿ ಮಲೆನಾಡಿನಲ್ಲಿರತಕ್ಕ ಸ್ತ್ರೀಯರಿಗೂ ಸಹ ಮಾಡಲು ಸಾಕಷ್ಟು ಕೆಲಸವಿಲ್ಲದೆ ಅವರು ಸೋಮಾರಿಗಳಾಗಿ ಕುಳಿತಿರಬೇಕಾಗಿದೆ.

ಈ ಸಭೆಯಲ್ಲಿ ಪ್ರತಿಯೊಬ್ಬ ಸದಸ್ಯರೂ ಅವರವರ ವಿಚಾರಗಳನ್ನು ಮಾತ್ರ ಅವರವರು ಹೇಳಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಈ ಸಭೆಯಲ್ಲಿರತಕ್ಕ ಹರಿಜನ ಪ್ರತಿನಿಧಿಗಳು ಯಾವಾಗಲೂ ಅವರ ಜನಗಳಿಗಿರತಕ್ಕ ಕಷ್ಟಗಳನ್ನು ಹೇಳುತ್ತಾ ಅವರಿಗೆ ಸ್ಥಾನಗಳನ್ನು ರಿಸರ್ವ್‌ಮಾಡಬೇಕು, ಅನುಕೂಲಪಡಿಸಬೇಕು ಎಂಬ ಇತ್ಯಾದಿ ವಿಚಾರಗಳನ್ನೇ ಹೇಗೆ ಅವರು ಪ್ರತಿಪಾದನೆ ಮಾಡುತ್ತಿದ್ದಾರೋ, ಹಾಗೆಯೆ ನಾನು ಸಹ ನಮ್ಮ ಸ್ತ್ರೀಯರ ವಿಚಾರದಲ್ಲಿ, ಯಾರೂ ಹೆಚ್ಚಿನ ನಿಗಾ ಕೊಡದಿರುವುದರಿಂದ, ನಮ್ಮ ಸ್ತ್ರೀಯರ ನಿಜವಾದ ಕಷ್ಟಗಳೇನಿರುತ್ತವೆಂಬುದನ್ನು ತಿಳಿಸಿ, ಆ ಬಗ್ಗೆ ಅವರ ತೊಂದರೆಗಳನ್ನು ಹೋಗಲಾಡಿಸಿಕೊಳ್ಳತಕ್ಕ ಬಗ್ಗೆ ಅವರಿಗಾಗಿ ತಾವು ಈ ಗೃಹ ಕೈಗಾರಿಕೆಗಳನ್ನು ಎಲ್ಲ ಕಡೆಗಳಲ್ಲೂ ಪ್ರಾರಂಭಿಸಬೇಕೆಂದೂ ತಿಳಿಸಬಯಸುತ್ತೇನೆ.

[Mr. DEPUTY SPEAKER in the Chair.]

ಇನ್ನು ಖಾದೀ ಕೈಗಾರಿಕೆಯ ವಿಚಾರವಾಗಿ ಮಾನ್ಯ ಶ್ರೀ ಎಂ. ಲಿಂಗಣ್ಣನವರು ಬಹಳ ಚೆನ್ನಾಗಿ ಎಲ್ಲ ವಿಷಯಗಳನ್ನು ವಿವರಿಸಿದ್ದಾರೆ. ಮೊನ್ನೆ ಸರ್ವೋದಯದ ದಿವಸ ನಮ್ಮ ಪೂಜ್ಯ ಶ್ರೀ ಪಟ್ಟಾಭಿರಾಮಯ್ಯರವರು ಭಾಷಣಮಾಡುತ್ತಿದ್ದ ಕಾಲದಲ್ಲಿ ಅವರು ಒಂದು ಅಂಶ ತಿಳಿಸಿದ್ದಾರೆ. ಜಾರ್ಜ್ ದಿ ಫಿಫ್ತ್ ಕಾಲದಲ್ಲಿ ಇಂಗ್ಲೆಂಡಿನ ತಯಾರಿಕೆ ಬಟ್ಟೆ ಹಾಕದವರು ರಾಜ ಸಭೆಗೆ ಬರಬಾರದೆಂದು ಆಜ್ಞೆಮಾಡಿದ್ದಾರೆ. ಆದರೆ, ನಮ್ಮವರು ಯಾತಕ್ಕೆ ಈ ಚರಿತ್ರೆಗಳನ್ನು ಓದುತ್ತಾ ಬಂದಿದ್ದಾರೆ. ಎಂದು ಇಂಗ್ಲೆಂಡ್‌ ದೇಶದಲ್ಲಿ ತಯಾರಾದ ಬಟ್ಟೆಗಳ ಮೇಲಿನ ವ್ಯಾಮೋಹವನ್ನೂ ಮತ್ತು ಅವುಗಳಿಗೆ ನಮ್ಮ ಜನರು ನೀಡುತ್ತಿರುವ ಪ್ರೋತ್ಸಾಹವನ್ನು ನಿಲ್ಲಿಸುತ್ತಾರೋ ಅಂದೇ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಅಭಿವೃದ್ಧಿಯಾಗಲು ಅವಕಾಶವಿರುತ್ತದೆಂದು ಅವರು ತಿಳಿಸಿದ್ದಾರೆ. ಆದರೆ ಹೀಗೆ ಜನರೂ ಮತ್ತು ಸರ್ಕಾರ ಕೇವಲ ಬಟ್ಟೆಗೊಂದಕ್ಕೇ ಅಲ್ಲ ನಮ್ಮಲ್ಲಿ ತಯಾರಾಗತಕ್ಕ ಪ್ರತಿಯೊಂದು ಸ್ವದೇಶಿ ಮಾಲಿಗೂ ಪ್ರೋತ್ಸಾಹ ನೀಡಬೇಕಾದದ್ದು ತುಂಬ ಅಗತ್ಯವೆಂದು ಹೇಳುತ್ತೇನೆ. ಈ ದಿವಸ ಒಂದು ಕೋಟಿ ರೂಪಾಯಿನ ಖಾದಿ ಹಾಗೆಯೇ ಮುಲ್ಕಿ ಬಿದ್ದಿದೆಯೆಂದು ತಿಳಿದು ಬಂದಿದೆ. ಇದನ್ನು ನೋಡಿದರೆ ನಮ್ಮ ಜನರ ಮನೋಭಾವ ಹೇಗಿರುತ್ತದೆಯೆಂಬುದು ಗೊತ್ತಾಗುತ್ತದೆ. ಇದನ್ನು ನೋಡಿದರೆ, ನಮ್ಮ ದೇಶದ ಜನರು ನಮ್ಮ ದೇಶದಲ್ಲೇ ತಯಾರಾದ ಪ್ರತಿಯೊಂದು ಮಾಲನ್ನೂ ಉಪಯೋಗಿಸುವಂತೆ ಅವರಿಗೆ ಪ್ರೋತ್ಸಾಹ ಹುಟ್ಟಿಸತಕ್ಕ ಬಗ್ಗೆ ಸರ್ಕಾರದವರ ಒಂದು ಆಜ್ಞೆಯೇನಾದರೂ ಈ ಸಂಬಂಧವಾಗಿ ಅಗತ್ಯವಿದೆಯೇನೋ ಎಂಬಂತೆ ನನಗೆ ಎನ್ನಿಸುತ್ತದೆ. ಮಲೆನಾಡಿನ ಜನರಿಗೆ ತಾವು ಲೇಶಾಂಶವೂ ಈ ಗೃಹ ಕೈಗಾರಿಕೆಗಳಬಗ್ಗೆ ಸಹಾಯನೀಡಿಲ್ಲ. ಆ ಪ್ರದೇಶದ ಜನರ ಕಡೆಗೆ ತಮ್ಮ ನಿಗಾಬಿದ್ದಿಲ್ಲ. ಹೀಗೆ ಮಾಡತಕ್ಕದ್ದು ಖಂಡಿತ ಸರಿಯಾದುದಲ್ಲ.

ಇನ್ನು ಆ ಚಿಕ್ಕಮಗಳೂರು ಶಾಲೆಯ ವಿಚಾರದಲ್ಲಿ ತಾವು ಮನಸ್ಸಿದ್ದರೆ ಅದನ್ನು ಚೆನ್ನಾಗಿ ನಡೆಸಿ, ಅದು ಸಜೀವವಾಗಿರುವಂತೆ ಮಾಡಿ. ಇಲ್ಲವಾದರೆ ಅದನ್ನು ಸಂಪೂರ್ಣವಾಗಿ ಮುಚ್ಚಿಯಾದರೂ ಮುಚ್ಚಿಬಿಡಿ. ಕಚ್ಚಾಮಾಲುಗಳು ವಿಶೇಷವಾಗಿ ದೊರೆಯುವ ಕಡೆಗಳಲ್ಲಿ ಹೆಚ್ಚು ಹೆಚ್ಚು ಗೃಹ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಅನುಕೂಲಪಡಿಸಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಆ ಕೈಗಾರಿಕೆ ಪಾಠಶಾಲೆ ಚೆನ್ನಾಗಿ ಕೆಲಸಮಾಡುತ್ತಾ ಅದು ಅಭಿವೃದ್ಧಿಗೆ ಬರುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇದರಿಂದ ಮಲೆನಾಡು ಜನರಿಗೆ ತುಂಬ ಅನುಕೂಲವಿದೆ. ಎಲ್ಲಿ ಗಂಧ, ಬಿದಿರು, ಬೆತ್ತ, ಜೊಂಡು, ಬೆಂಡು, ಇತ್ಯಾದಿ ಕಚ್ಚಾಮಾಲುಗಳು ಹೇರಳವಾಗಿ ದೊರೆಯುತ್ತಿವೆಯೋ ಅಂಥ ಮಲೆನಾಡಿನಲ್ಲಿ ಹೆಂಗಸರಿಗೆ ಒಂದು ಉಪಜೀವನ ಕಲ್ಪಿಸಿಕೊಳ್ಳುವುದಕ್ಕೆ ಈ ದಿವಸ ಅವಕಾಶವಿಲ್ಲದಂತಾಗಿದೆ. ಇದರಿಂದ ಅವರೆಲ್ಲಾ ಸೋಮಾರಿಗಳಾಗಿದ್ದಾರೆ. ಆ ಪ್ರದೇಶದಲ್ಲಿ ತಾವು ಹೆಚ್ಚಿನ ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ಅವರಿಗೆ ಅನುಕೂಲಪಡಿಸಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಂಡು ನನ್ನ ಮಾತುಗಳನ್ನು ಪೂರೈಸುತ್ತೇನೆ.

Sri V. M. MASCARENHAS (St. John's Hill).—Mr. Speaker, Sir, my intention is to bring to the notice of the Government two important things. The first is to tell them that their industrial concerns are not being run on business lines and in an efficient manner; secondly, to tell them that their supervisory system is defective. As early as 1950, in making my Budget speech, I pointed out that

Mysore was fortunate enough to develop a large number of industries, big and small, and what was needed was not so much the starting of new industries but the consolidation or the stabilisation of the industries that were already existing. In other words, Government had to devote great care, attention and patronage on the industries that were already existing in the country and on which money had been spent and on the running of which experience had been gained. Not that Government were not aware of the situation as is evident from the Rajpramukh's speech last March when he said that "for the efficient running of these industrial concerns my Government is contemplating to establish a High Power Directorate." I presume that this committee, established for the purpose, has submitted its report and that the report is before the Government for their consideration. What action is being taken by them, I will not presume. From 1952 till to-day, things have however gone from bad to worse.

As is evident from the budget figures, Government Industrial concerns, like all other industrial concerns, are showing poorer and poorer revenues so much so I am inclined to say that if the industrial house is not put in order as early as possible, it will be too late to do so to-morrow. I will illustrate. A few days ago Hon'ble Members of this House must have seen in a local English daily newspaper a tender notice from the Government Electric Factory. It called for tenders for the purchase of one thousand and odd bakelite articles of one kind, one thousand and odd of another kind, and one thousand and odd of a third kind. We are familiar with tenders for the supply of articles. We are familiar with tenders for the construction of works. Certainly we are not familiar with tenders for the purchase of manufactured articles except from disposals. What is the reason for the accumulation of the large number of things in the Electric Factory? Evidently they must have been lying unsold for all these years. What was the cause that conducted to this? It would be interesting to know. Was it the sole responsibility of the General Manager or of the Director in charge or was the Minister for Industries cognisant of this kind of affairs and what action did he take to put a stop to this gruesome state of affairs? How are we sure that in many other industrial concerns similar stories are not being told.

I now come to the second which is closely connected with the first, namely, that we have not the correct managerial personnel to look after our concerns. I say without fear of being contradicted that for the last 15 or 20 years Government of Mysore have not bestowed attention on the training of the managerial personnel. If they had only shown half the zeal in training managerial personnel at the top level as they had shown in starting new industries, our plight would not have been so pitiable to-day. The term of a person is extended because technical personnel are not forthcoming. The Hon'ble Minister for Industries has already made a reference to it.

Let me illustrate: The Director of Industries is, as you know, the head of a department with varied kinds of work. He is also the Commissioner for Development and Economic Planning. Two important departments have been entrusted to one man which makes him a member of number of committees appointed by the Centre which necessitate his going away from the State itself for long periods to attend these committee meetings. This gentleman is also put in charge of eight Government industrial concerns, more important of which are the Sandalwood Factory, the Porcelain Factory, the Soap Factory and the Electric Factory. In addition, he is the Chairman and Managing Director of three Joint Stock Companies and Chairman of three other Joint Stock Companies. In other words, he is directly responsible for the management and supervision of 14 industrial concerns. Ordinarily for any single individual it

(SRI V. M. MASCARENHAS.)

would be a crushing burden but there is something more to tell. This unfortunate individual is also a Director of five other Joint Stock Companies. He also represents the Government of Mysore on the Hindustan Aircraft Limited, and the Indian Telephone Industries, Ltd. In my own opinion he is either a super human being or the supervision he is exercising is not worthwhile to be considered. I have the knowledge of industrial concerns and their running for over a quarter of a century; I can tell you what demand it makes on one's time to run one single concern. How this gentleman is able to run two important departments of Government with varied kinds of work is hard to guess. It is my firm conviction that until and unless the concerns are put in the hands of individuals who are able to devote their whole attention to one concern only and follow the day to day progress, the future of our industrial concerns is, I must say, gloomy.

There is another thing that has been stated by the Hon'ble Minister and that is economy. Let me tell you that under the bogey of economy and retrenchment let not this policy be sustained. Your Industrial concerns are really revenue earning departments. Spending a few rupees for the managerial side or for top men is the right thing because these are the people that will help to bring you good revenue. I earnestly appeal to the Government to put a stop to this sad state of affairs and to see that their whole structure is put on new lines so that at least in the year to come we may see their fruitfulness.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಶ್ರೀ ಮಾಸ್ಕರನ್‌ಹ್ಯಾಸ್‌ರವರು ತಿಳಿಸಿದಂತೆ ನಿಜವಾಗಿಯೂ ಕೂಡ ನಮ್ಮ ಮೈಸೂರು ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳು, ಚಿಕ್ಕಪುಟ್ಟ ಕೈಗಾರಿಕೆಗಳೂ ಇರುತ್ತವೆ. ಇವುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಆದರೆ ಕೆಲಕೆಲವು ದೊಡ್ಡ ಕೈಗಾರಿಕೆಗಳಿಂದ ಅಲ್ಪ ಸ್ವಲ್ಪ ಲಾಭ ಬರುತ್ತಿದ್ದರೂ, ಈಗ ಗೃಹ ಕೈಗಾರಿಕೆಗಳಿಂದ ಬರುವ ಉತ್ಪತ್ತಿ ದಿನೇ ದಿನೇ ಕಡಿಮೆಯಾಗುತ್ತಿದೆ. ಕಾರಣ, ದೊಡ್ಡ ದೊಡ್ಡ ಕೈಗಾರಿಕೆಗಳಿರುವಂಥ ಉತ್ತೇಜನ ಈ ಗೃಹ ಕೈಗಾರಿಕೆಗಳಿರುವುದಿಲ್ಲ. ಇದನ್ನು ನೋಡಿದರೆ ಸರ್ಕಾರದವರು ಸಂಪೂರ್ಣವಾಗಿ ಈ ಗೃಹ ಕೈಗಾರಿಕೆಗಳನ್ನೆಲ್ಲಾ ಕೈಬಿಟ್ಟಿರುವಂತೆ ಕಂಡು ಬರುತ್ತದೆ.

ನಮ್ಮ ದೇಶದಲ್ಲಿ ಅನೇಕರು ತಮ್ಮ ವ್ಯವಸಾಯದ ಕಸುಬಿನ ಜೊತೆಗೆ, ಅವರಿಗೆ ವಿರಾಮವಿರತಕ್ಕ ಕಾಲದಲ್ಲಿ ಅನೇಕ ಸಣ್ಣ ಪುಟ್ಟ ಕೈಗಾರಿಕೆಗಳನ್ನು ನಡೆಸಿಕೊಂಡು, ಅವರು ತಯಾರಿಸಿದ, ಚಾಪೆ, ಇತ್ಯಾದಿ ಸಾಮಾನುಗಳನ್ನು ಸಂತೆ ಸಾರಿಗೆಗಳಲ್ಲಿ ತಂದು ಮಾರಾಟಮಾಡಿ, ಅದರಿಂದ ಬರತಕ್ಕ ವರಮಾನದಿಂದ ತಮ್ಮ ಜೀವನೋಪಾಯವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಹೀಗೆ ಈಗಲೂ ಕೂಡ ಪ್ರತಿಯೊಂದು ಸಂತೆಸಾರಿಗೆಗಳಲ್ಲಿ ಈ ಜನರು ತಯಾರಿಸಿದ ಈಚಲು ಚಾಪೆ, ಕಂಬಳಿ, ಹಗ್ಗ, ಹುರಿ ಇತ್ಯಾದಿ ವಸ್ತುಗಳನ್ನು ತಂದು ಮಾರಾಟಮಾಡಿ ಜೀವನಮಾಡುತ್ತಿರುವ ವಿಚಾರ ತಮಗೆಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಆದರೆ ಇತ್ತೀಚೆಗೆ ಜನರು ಆ ಕೈಗಾರಿಕೆಗಳನ್ನು ಪರದೇಶಿ ವಸ್ತುಗಳ ಪೈಪೋಟಿಯಿಂದ ಸಂಪೂರ್ಣವಾಗಿ ಕೈಬಿಟ್ಟು ಬಿಟ್ಟು ಅವರೆಲ್ಲಾ ಈ ದಿವಸ ನಿರ್ಗತಿಕರಾಗಿದ್ದಾರೆ. ಇದರಿಂದ ತತ್ರಾಪಿ ಹರಿಜನರಿಗೊಬ್ಬರಿಗೆ ತೊಂದರೆಯಾಗಿದೆಯೆಂದು ನಾನು ಹೇಳಲಾರೆ. ಇದರಿಂದ ಯಾರು ಯಾರು ತಮ್ಮ ಹೊಟ್ಟೆ ಪಾಡನ್ನು ಜರುಗಿಸಿಕೊಳ್ಳುತ್ತಿದ್ದಾರೊ, ಅವರೆಲ್ಲರಿಗೂ ತುಂಬ ಧಕ್ಕೆ ಬಂದಿದೆ. ಆದರೆ ದೇಶದಲ್ಲಿ ಈಗ ಸ್ವರಾಜ್ಯ ಬಂದಿದೆ. ದೇಶದ ಹಿತವನ್ನು ಗಮನಿಸಬೇಕಾದ ಕಾಲ ಈಗ ಒದಗಿದೆ. ನಮ್ಮ ದೇಶ ಅಭಿವೃದ್ಧಿ ಹೊಂದಬೇಕಾದರೆ, ನಮ್ಮ ಕೈಗಾರಿಕೆಗಳು ಅಭಿವೃದ್ಧಿ ಹೊಂದಬೇಕು. ಈಗ ದೇಶದಲ್ಲಿರತಕ್ಕ ಕೈಗಾರಿಕೆಗಳು ನಮ್ಮ ದೇಶದ ರೈತರಿಗೆ ಹೊಂದಿಕೊಂಡು ಹೋಗುವಂತೆ ಮತ್ತು ಈ ಚಿಕ್ಕ ಪುಟ್ಟ ಕೈಗಾರಿಕೆಗಳನ್ನೆಲ್ಲಾ ಒಂದು ಸಂಘಟನೆಗೆ ತಂದು ಅವುಗಳನ್ನು ಅಭಿವೃದ್ಧಿ ಪಡಿಸಲು ಅವಕಾಶವಾಗತಕ್ಕಂಥ ಒಂದು ನೀತಿಯನ್ನು ಕಂಡುಹಿಡಿಯಲು ತಾವು ಆಲೋಚನೆಮಾಡಬೇಕಾಗಿದೆ. ದೇಶಾಭಿವೃದ್ಧಿಗೆ ಕೈಗಾರಿಕೆಗಳೇ ಮೂಲ. ಈ ಕೈಗಾರಿಕೆಗಳಿಂದ ಹೆಚ್ಚು ಹೆಚ್ಚು ಉತ್ಪತ್ತಿ ಬರುವಂತೆ ಮಾಡಬೇಕಾದದ್ದು ಅತಿ ಮುಖ್ಯವಾದ ವಿಷಯ. ಇಂಗ್ಲೆಂಡ್ ದೇಶ ಅಷ್ಟು ಚಿಕ್ಕ ರಾಜ್ಯವಾಗಿದ್ದರೂ ಅದು ಪ್ರಪಂಚಕ್ಕೆ ಒಂದನೆಯದಾಗಿರುವುದಕ್ಕೆ ಅಲ್ಲಿ ಕೈಗಾರಿಕೆಗಳು ಬಹಳವಾಗಿ ಅಭಿವೃದ್ಧಿ ಹೊಂದಿರುವುದೇ ಮುಖ್ಯ ಕಾರಣ. ಕೈಗಾರಿಕೆಯ ಮಹತ್ತಿನಿಂದ ಆ ದೇಶ ಇಂದು ಪ್ರಪಂಚಕ್ಕೇ ಮಾದರಿಯ ದೇಶವಾಗಿದೆ.

ನಮ್ಮ ದೇಶದಲ್ಲಾದರೋ ಹಿಂದೆ ಅವರೇನು ಮಾಡುತ್ತಿದ್ದರು ? ಇಲ್ಲಿಂದಲೇ ಕಚ್ಚಾ ವಸ್ತುಗಳನ್ನು ತೆಗೆದುಕೊಂಡು ಹೋಗಿ ಅದಕ್ಕೆ ಡ್ಯೂಟಿ ಹಾಕಿ ಅಲ್ಲಿಂದ manufactured goods ತಯಾರುಮಾಡಿದ್ದರ ಮೇಲೆಯೂ ಡ್ಯೂಟಿ ಹಾಕಿ ಇಲ್ಲಿಗೆ ಆಮದುಮಾಡುತ್ತಿದ್ದರು. ಇವುಗಳನ್ನು ಪ್ರತಿಯೊಬ್ಬರೂ ಕೊಂಡುಕೊಳ್ಳುತ್ತಿದ್ದೆವು. ಅದರಿಂದ ಖಾದಿ ಎಂಬುದನ್ನು ಮಹಾತ್ಮಾಗಾಂಧಿಯವರು ನಮ್ಮ ದೇಶದಲ್ಲಿ ಜಾರಿಗೆ ತಂದಾಗ ಒಂದು ವಿಧದಲ್ಲಿ ದೊಡ್ಡ ಉದ್ದೇಶದಿಂದಲೇ ಅವರು ಮಾಡಿದರೆಂಬುದನ್ನು ನಾವು ಮರೆಯಬಾರದು. ಏಕೆಂದರೆ, ನಮ್ಮ ದೇಶದಲ್ಲಿ ಖಾದಿಯು ಒಂದು ಮುಖ್ಯವಾದ ಕೈಗಾರಿಕೆ. ಖಾದಿಯೇ ನಮಗೆ ಸ್ವರಾಜ್ಯಕ್ಕೆ ಹಾದಿ ; ಅದನ್ನು ಆದಕ್ಕಾಗಿ ಅಭಿವೃದ್ಧಿಗೆ ತರಬೇಕೆಂದು ಪ್ರಯತ್ನಪಟ್ಟರು.

ಒಬ್ಬ ಸದಸ್ಯರು.—ನೀವೀಗ ಖಾದಿಯನ್ನೇ ಹಾಕಿದ್ದೀರಲ್ಲವೇ?

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು 1923ರಲ್ಲಿ ಖಾದಿ ಹಾಕುವುದನ್ನು ಬಿಟ್ಟು ಬಿಟ್ಟೆ. ಕಾರಣ, ಪ್ರೋತ್ಸಾಹ ಸಿಕ್ಕದಿರುವುದರಿಂದ.

ಆದರೆ ನಮ್ಮ ಕಾಂಗ್ರೆಸ್ ಸ್ನೇಹಿತರಾದರೂ ಮೊದಲಿನಿಂದಲೂ ಖಾದಿ ಹಾಕುತ್ತಿದ್ದವರು, ಇತ್ತೀಚೆಗೆ ಖಾದಿ ಹಾಕುವುದನ್ನು ಬಿಟ್ಟು ಅದಕ್ಕೆ ಬದಲು ಪರದೇಶದಿಂದ ಬರತಕ್ಕ ಸಿಲ್ಕ್ ಬಟ್ಟೆಗೆ ಉತ್ತೇಜನಕೊಡುತ್ತಾ ಖಾದಿ ಬಟ್ಟೆಯನ್ನು ನಿರಾಕರಿಸುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಇದು ಹೇಗಿದೆಯೆಂದರೆ, 'ಪುರಾಣ ಹೇಳಲಿಕ್ಕೆ ಬದನೆಕಾಯಿ ತಿನ್ನಲಿಕ್ಕೆ' ಎಂಬಂತೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದ್ದರಿಂದ ಖಾದಿಗೆ ಉತ್ತೇಜನ ಕೊಡುವುದು ಒಂದು ಮುಖ್ಯವಾದ ಅಂಶವಾಗಿದೆ.

ಎರಡನೆಯದಾಗಿ, ಗ್ರಾಮಾಂತರಗಳಲ್ಲಿರುವ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಉತ್ತೇಜನಕೊಡಬೇಕು. ಪೂರ್ವದಿಂದಲೂ ಗ್ರಾಮಗಳಲ್ಲಿ ಕಮ್ಮಾರನ ಕೆಲಸವೆಂಬುದು ರೂಢಿಯಲ್ಲಿದ್ದು, ಅವರು ಆಯಾ ಗ್ರಾಮಗಳಿಗೆ ಬೇಕಾದ ನೇಗಿಲು, ಗುಳ, ಗುದ್ದಲಿ, ಕುಡುಗೋಲು ಮುಂತಾದವುಗಳನ್ನು ಮಾಡಿ ಸಕಾಲದಲ್ಲಿ ರೈತರಿಗೆ ಸಹಾಯಮಾಡಿ ಜೀವನಮಾಡುವುದು ಅವರ ದಿನಚರಿ ಕಸಬಾಗಿತ್ತು. ಆದರೆ ಇತ್ತೀಚೆಗೆ ಕಬ್ಬಿಣದ ಹತೋಟಿ ಬಂದಮೇಲೆ, ಒಂದು ಗುಳ, ಗುದ್ದಲಿ ಮುಂತಾದುವೆಲ್ಲಾ ಭದ್ರಾವತಿಯಿಂದಲೇ ಬರಲಿಕ್ಕೆ ಪ್ರಾರಂಭವಾಯಿತು. ಇದರಿಂದಾಗಿ ಇತ್ತ ಈ ಕಮ್ಮಾರರ ಜೀವನ ಹೋಯಿತು. ರೈತರ ಕಷ್ಟವೂ ಹೇಳತೀರದು. ಇದನ್ನು ನಾನೀಗ ಹೆಚ್ಚಿಗೆ ಹೇಳಬೇಕಾದ್ದಿಲ್ಲ. ಪ್ರತಿಯೊಂದು ಅಧಿವೇಶನದಲ್ಲೂ ಇದೇ ವಿಷಯದ ಮೇಲೆ ಕತ್ತರಿ ನಿರ್ಣಯಗಳು ಬರುತ್ತಲೇ ಇವೆ. ಆದರೂ ಅವರಿಗೆ ಸರಿಯಾಗಿ ಕಬ್ಬಿಣ ಸಿಕ್ಕುತ್ತಿಲ್ಲ. ಹರಿಜನರಿಗೆ ಮೊದಲೇ ಜಮೀನಿಲ್ಲ. ಇಂಥ ಯಾವುದಾದರೂ ಕೈಗಾರಿಕೆಯನ್ನಾದರೂ ಅವಲಂಬಿಸಿಕೊಂಡು ಜೀವನ ಮಾಡೋಣವೆಂದರೆ, ಅವರಿಗೆ ಆರು ತಿಂಗಳೋ ಒಂದು ವರ್ಷವೋ ಟ್ರೈನಿಂಗ್ ಕೊಟ್ಟು, ಒಂದೆರಡು ಸಾವಿರ ರೂಪಾಯಿಗಳನ್ನು ಸಬ್‌ವೆನ್ಷನ್ ಕೊಟ್ಟು ಹಿಂದೆ ಜೀವನಕ್ಕೆ ಒಂದು ದಾರಿ ತೋರಿಸುತ್ತಿದ್ದುದನ್ನು ಈಗ ಬಿಟ್ಟು ಬಿಟ್ಟಿರಿ. ಹೀಗಾಗಿ ಅವರ ಜೀವನ ನಿಜವಾಗಿಯೂ ಬಹಳ ಕಷ್ಟವಾಗಿದೆ. ಇವರುಗಳ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲಿಕ್ಕೆ ಸರಿಯಾದ ಯೋಜನೆಗಳನ್ನಿಟ್ಟುಕೊಂಡು ಪ್ರಯತ್ನಪಡುತ್ತಿಲ್ಲವೆಂದು ಹೇಳಬೇಕಾಗಿದೆ. ಎಲ್ಲಿ ಹೋದರೂ ಪೋರ್ಸ್‌ಲೇನ್ ಮುಂತಾದ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಹೆಚ್ಚು ಮಾಡುತ್ತಿದ್ದೀರೇ ವಿನಾ ಸಣ್ಣ ಸಣ್ಣ ಕೈಗಾರಿಕೆಗಳನ್ನು ರೂಢಿಸುವ ಕಡೆ ಗಮನಕೊಡುತ್ತಿಲ್ಲ. ಉದಾಹರಣೆಗೆ, ಕುಂಬಾರರು 365ದಿನವೂ ಮಡಕೆಮಾಡಿಕೊಂಡು ಜೀವನಮಾಡುವವರು. ಅವರು ಒಂದೆಕರೆ ಜಮೀನು ಕೊಡಿ, ಅದರ ಮಣ್ಣಿನಿಂದ ಮಡಕೆಮಾಡಿಕೊಂಡ ಜೀವನಮಾಡುತ್ತೇವೆಂದರೆ ಅದನ್ನೂ ಕೊಡುತ್ತಿಲ್ಲ. ನಮ್ಮ ಮಳವಳ್ಳಿ ತಾಲ್ಲೂಕಿನಲ್ಲಿ ಹೀಗೆ ಒಂದೆಕರೆ ಕೊಟ್ಟಿದ್ದ ಜಮೀನನ್ನೂ ಕಿತ್ತುಕೊಂಡು ಬೇರೆಯವರಿಗೆ ವ್ಯವಸಾಯಕ್ಕೆ ಕೊಟ್ಟಿರುವ ನಿದರ್ಶನವೂ ಇದೆ. ಹೀಗೆ ಅವನಿಗೆ ಒಂದೆಕರೆ, ಅರ್ಧೆಕರೆ ಜಮೀನನ್ನೂ ಕೊಡದೆ ಹೋದರೆ ಅವನು ಹೇಗೆ ಕುಂಬಾರನಾಗಿದ್ದುಕೊಂಡು ಜೀವನಮಾಡಬೇಕು? ಕುಂಬಾರರ ಮಡಕೆ ಬಹಳ ತಂಪಾಗಿರುತ್ತದೆ, ಖಾಯಿಲೆ ಕಸಾಲೆ ಬರುವುದಕ್ಕೆ ಅವಕಾಶವಿರುವುದಿಲ್ಲವೆಂದು ನೀವೇ ಹೇಳುತ್ತೀರಿ. ಅಷ್ಟಾದರೂ ಪೋರ್ಸ್‌ಲೇನ್ ಮುಂತಾದುವುಗಳಿಗೆ ಉತ್ತೇಜನಕೊಡುತ್ತೀರೇ ಹೊರತು ಖಂಡಿತವಾಗಿಯೂ ಮಡಕೆಗಳನ್ನು ಮಾಡುವ ಕುಂಬಾರರಿಗೆ ಕೊಡುತ್ತಿಲ್ಲ.

ಇನ್ನೊಂದು ವಿಚಿತ್ರವೇನೆಂದರೆ, ಹಿಂದೊಮ್ಮೆ ಮಳವಳ್ಳಿ ತಾಲ್ಲೂಕಿನಲ್ಲಿ ಒಂದು ಸ್ಮಿತಿ-ಸೆಂಟರ್ ಏರ್ಪಡಿಸಿದ್ದರು. ಆದರೆ ಅವರಿಗೆ ಆಯಾ ತಾಲ್ಲೂಕುಗಳಿಗೆ ಬೇಕಾದ ಸಾಮಾನುಗಳನ್ನು ಮಾಡುವುದಕ್ಕೆ ಅವಕಾಶ ಕೊಡಲಿಲ್ಲ! ಅಲ್ಲಿನ ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಕೊಡಲಿಲ್ಲ! ಜನರಿಗೆ ಪರದೇಶದ ಸಾಮಾನುಗಳ ಮೇಲೆ ಮೋಹ ಬಂದಿದೆ, ಆದ್ದರಿಂದ ಪರದೇಶದ ವಸ್ತುಗಳನ್ನು ತಯಾರಿಸಲಿಕ್ಕೆ ಉತ್ತೇಜನಕೊಡುತ್ತೇವೆಯೇ ಹೊರತು ಸ್ಥಳೀಯ ವಸ್ತುಗಳ ತಯಾರಿಕೆಗೆ ಹಣ ಖರ್ಚುಮಾಡುವುಕ್ಕೆ ಹಿಂದು ಮುಂದೆ ನೋಡಬೇಕಾಗುತ್ತದೆಂದು ಸರ್ಕಾರದವರು ತಿಳಿಸಿದ್ದರು. ಸರ್ಕಾರದವರ ದೃಷ್ಟಿ ಈ ರೀತಿಯಿದ್ದ ಮೇಲೆ, ಇನ್ನು ನಮ್ಮ ಜನಗಳ ಹಳ್ಳಿಯ ಕೈಗಾರಿಕೆಗಳು ಯಾವ ರೀತಿ ಫಲಕಾರಿಯಾದಾವೆಂಬುದನ್ನು ನೀವೇ ಯೋಚನೆಮಾಡಬಹುದು. ಮುಂದಾದರೂ ಸರ್ಕಾರದವರು ಸಣ್ಣ ಪುಟ್ಟ ಸೊಸೈಟಿಗಳ ಮೂಲಕವಾಗಿಯಾಗಲಿ, ಅಥವಾ ಆಯಾ ಗ್ರಾಮಗಳಲ್ಲೇ ಒಂದೊಂದು ಕೇಂದ್ರವನ್ನು ಸ್ಥಾಪಿಸಿ ಅದಕ್ಕೊಂದು ಸರ್ಕಲ್ ಏರ್ಪಡಿಸಿ, ಆ ಸರ್ಕಲ್ಲಿಗೆ ಯಾವ ರೀತಿ ವಿಶ್ವೇಶ್ವರಯ್ಯ ಕೈಗಾರಿಕಾ ಯೋಜನೆಯಲ್ಲಿ ಮಾಡಿರುವಂತೆ ಗ್ರೂಪ್ ಕಮಿಟಿಗಳನ್ನು ಮಾಡುವುದರಿಂದಲಾಗಲೀ, ಆಯಾ ಸ್ಥಳಗಳಲ್ಲಿ ಏನೇನು ಕೈಗಾರಿಕೆಗಳಿವೆಯೋ ಅವನ್ನು ಅಭಿವೃದ್ಧಿಮಾಡಬೇಕೆಂದು ಹೇಳುತ್ತೇನೆ. ಈ ರೀತಿಯ ಒಂದು ಧ್ಯೇಯವನ್ನಿಟ್ಟುಕೊಂಡು ಹಳ್ಳಿಯ ಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟು ತನ್ಮೂಲಕ ದೇಶದ ಆರ್ಥಿಕ ಮಟ್ಟವನ್ನು ಅಭಿವೃದ್ಧಿ ಪಡಿಸುತ್ತೀರೆಂದು ನಂಬಿ, ಈ ಖೋತಾನಿರ್ಣಯವನ್ನು ಸಮರ್ಥಿಸುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಅಧ್ಯಕ್ಷರೇ, ಕೈಗಾರಿಕೆಯ ವಿಚಾರದಲ್ಲಿ ಅನೇಕ ಸ್ನೇಹಿತರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಆದರೆ ಮುಖ್ಯವಾಗಿ ನಮ್ಮ ಮೈಸೂರು ದೇಶದಲ್ಲಿ ನಿಜವಾದ ಕೈಗಾರಿಕಾಭಿವೃದ್ಧಿಯಾಗಬೇಕಾದರೆ ಹಳ್ಳಿಗಾಡಿನ ಕಡೆ ಕೈಗಾರಿಕೆಗಳು ಬೆಳೆಯಬೇಕು. ಎಲ್ಲಿಯವರೆಗೆ ಸಿಟಿಗಳಲ್ಲಿ ಕೈಗಾರಿಕಾ ಸಾಮಾನುಗಳ ತಯಾರಿಕೆಗೆ ಅವಕಾಶಮಾಡಿ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತೀರೋ ಅಲ್ಲಿಯವರೆಗೆ ಹಳ್ಳಿಯ ಕೈಗಾರಿಕೆಗಳು ಹಾಳಾಗುವುದಲ್ಲದೆ, ಹಳ್ಳಿಗಳು ಕ್ಷೀಣಸ್ಥಿತಿಗೆ ಬರುತ್ತವೆ. ಏಕೆಂದರೆ, ಹಳ್ಳಿಯ ಜನರು ಪಟ್ಟಣದ ಕಡೆಗೆ ವಲಸೆ ಬರುವುದಕ್ಕೆ ಪ್ರಾರಂಭಮಾಡುತ್ತಾರೆ. ಹಿಂದಿನ ಸರ್ಕಾರವು ಯಾವಾಗಲೂ ಪಟ್ಟಣಗಳಲ್ಲಿಯೇ ಕೈಗಾರಿಕೆಗಳನ್ನು ಹೆಚ್ಚುಹೆಚ್ಚಿಗೆ ಪ್ರಾರಂಭಿಸಲು ಅವಕಾಶ ಕೊಡುತ್ತಿದ್ದರು. ಈಗಿನ ಸರ್ಕಾರವೂ ಆ ಮನೋಭಾವನೆಯನ್ನು ಬಿಟ್ಟಿಲ್ಲ. ಇವರೂ ಸಿಟಿಯೊಳಗೇ ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಉತ್ತೇಜನ ಕೊಡುತ್ತಿದ್ದಾರೆ.

ಉದಾಹರಣೆಗೆ ಹೇಳುವುದಾದರೆ, ಈಗಾಗಲೇ ನಾವು ನೋಡುತ್ತಿರುವಂತೆ ಹಳ್ಳಿಗಳ ಕಡೆ ಅನೇಕ ಜಮೀನು ಹಾಳುಬಿದ್ದಿವೆ. ರೈತರೇ ಇಲ್ಲ. ಬೆಂಗಳೂರು ಸಿಟಿಯಲ್ಲಾದರೋ ಆರು ಲಕ್ಷ ಪ್ರಜಾಸಂಖ್ಯೆಯಿದ್ದುದು ಎಂಟು ಲಕ್ಷವಾಗಿ 16 ಲಕ್ಷಕ್ಕೂ ಬರುತ್ತದೆಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣ, ಇಲ್ಲಿ ಜೀವನಕ್ಕೆ ನಾನಾ ರೀತಿಯಲ್ಲಿ ಸೌಕರ್ಯಗಳನ್ನು ಮಾಡಿಕೊಡುತ್ತಿದ್ದೀರಿ. ಹಳ್ಳಿಗಳಲ್ಲಿ ನೀರು ಬೇಕಾದರೆ ದೂರದಭಾವಿಗೆ ಹೋಗ

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಬೇಕು. ಪಟ್ಟಣಗಳಲ್ಲಿ ಮನೆಯ ಬಾಗಿಲನಲ್ಲಿ ನಲ್ಲಿ, ಮನೆಯೊಳಗೆ ನಲ್ಲಿ, ಬೇಕಾದಹಾಗೆ ಲೈಟ್, ಈ ಎಲ್ಲಾ ಅನುಕೂಲಗಳಿರುವಾಗ, ಇವುಗಳನ್ನು ನೋಡಿದವರು ಹಳ್ಳಿಗಳ ಕಡೆ ಹೇಗೆ ಹೋದಾರು? ಇದನ್ನು ನೋಡಿಯೇ ಈಗ ಹೊಸದಾಗಿ ಬರಲಿರುವ ವಿದ್ಯಾಭ್ಯಾಸ ಸುಧಾರಣೆಗಳಲ್ಲಿ ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಂತೆ ಹಳ್ಳಿಗಳಲ್ಲೇ ವಿದ್ಯಾಭ್ಯಾಸದ ಶಾಲೆಗಳನ್ನು ಜಾಸ್ತಿಮಾಡಬೇಕೆಂದು ಹೇಳುತ್ತೇನೆ ಈಗಲೂ ತಾವು ಬಡ್ಜೆಟ್ಟಿನಲ್ಲಿ ಹಣ ಒದಗಿಸುತ್ತಿರುವುದನ್ನು ನೋಡಿದರೆ, ಎಲ್ಲವನ್ನೂ ಡಿಸ್ಟ್ರಿಕ್ಟ್‌ಗಳಲ್ಲಿ, ತಾಲ್ಲೂಕುಗಳಲ್ಲಿ ಖರ್ಚುಮಾಡುತ್ತಿದ್ದೀರೇ ಹೊರತು ಇನ್ನೂ ಹಳ್ಳಿಗಳ ಕಡೆ ತಮ್ಮ ದೃಷ್ಟಿ ತಿರುಗಿಲ್ಲ. ಅದೇ ರೀತಿಯಲ್ಲಿ ಕೈಗಾರಿಕೆಗಳಲ್ಲಿಯೂ ಕೂಡ ನೋಡುತ್ತಿದ್ದೇವೆ. ಮಹಾತ್ಮಾ ಗಾಂಧಿಯವರು ಒಂದು ಮಾತು ಹೇಳುತ್ತಿದ್ದರು, ನಮ್ಮ ದೇಶದಿಂದ ಕೋಟ್ಯಾಂತರ ರೂಪಾಯಿಗಳನ್ನು ಬಟ್ಟೆಗಾಗಿ ಪರದೇಶಗಳಿಗೆ ಕಳುಹಿಸುತ್ತಿದ್ದೇವೆ, ಒಬ್ಬ ಮನುಷ್ಯ ಒಂದು ದಿವಸಕ್ಕೆ ಒಂದು ಕಾಸಿನ ನೂಲು ತೆಗೆದರೆ ಸಾಕು, ಅವನ ಸಂಸಾರದಲ್ಲಿ ಗಂಡ–ಹೆಂಡತಿ ಎಲ್ಲರಿಗೂ ಒಂದು ವರ್ಷಕ್ಕಾಗುವಷ್ಟು ಬಟ್ಟೆಬರೆ ಆಗುತ್ತದೆ ಎಂದು. ಇದರಿಂದ ಕೋಟ್ಯಾಂತರ ರೂಪಾಯಿಗಳನ್ನು ನಾವು ಹೊರಕ್ಕೆ ಕಳುಹಿಸುತ್ತಿರುವುದನ್ನು ಉಳಿಸಿಕೊಳ್ಳಬಹುದು, ಆದ್ದರಿಂದ ಖಾದಿ ತಯಾರಿಕೆ ಕೈಕೊಳ್ಳಿ, ಎಂದು ಸಹ ಹೇಳುತ್ತಿದ್ದರು. ಪ್ರತಿ ಹಳ್ಳಿಯಲ್ಲೂ ಇದನ್ನು ಮಾಡಬಹುದು. ಈಗ ಅದನ್ನು ಮಾಡದೆ. ಪಟ್ಟಣಗಳಲ್ಲೂ ಸಿಟಿಗಳಲ್ಲೂ ದೊಡ್ಡ ದೊಡ್ಡ ಗಿರಣಿಗಳನ್ನೇರ್ಪಡಿಸಿ ವಾಸಕ್ಕೆ ಮನೆ, ದೀಪ, ನೀರು ಮುಂತಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಟ್ಟರೆ ಹಳ್ಳಿಗಳಲ್ಲಿ ಯಾರು ಕುಳಿತುಕೊಂಡಿರುತ್ತಾರೆ? ಪಟ್ಟಣಕ್ಕೆ ಬಂದವರು ಹಳ್ಳಿಗೆ ಹೇಗೆ ವಾಪಸು ಹೋದಾರು! ಅಷ್ಟೇಕೆ, ನಾವೇ ಮೆಂಬರುಗಳು ಇಲ್ಲಿ ಅಸೆಂಬ್ಲಿಗೆ ಬಂದು ಇಲ್ಲಿಯ ಲೈಟು ಬೆಳಕು, ಸೊಗಸು, ಸೋಜಿಗ ನೋಡಿಕೊಂಡ ಮೇಲೆ, ನಮಗೆ ಊರಿಗೆತಾನೆ ಹೋಗುವುದಕ್ಕೆ ಮನಸ್ಸಾಗುತ್ತದೆಯೇ!

ಉಪಾಧ್ಯಕ್ಷರು.—ಯಾವುದಾದರೂ ಫ್ಯಾಕ್ಟರಿಯ ಹೆಸರನ್ನು ಹೇಳಿ, ಈ ಐದು ವರ್ಷಗಳಿಂದೀಚೆಗೆ ಹೊಸದಾಗಿ ಸಿಟಿಯಲ್ಲಿ ತೆರೆದಿರುವಂಥಾದ್ದನ್ನು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಯಾವುದೊಂದು ಕೈಗಾರಿಕೆಯನ್ನಾಗಲಿ, ಯಾವುದೊಂದು ಕೈಗಾರಿಕಾ ಶಾಲೆಯನ್ನಾಗಲಿ ಸಿಟಿಗಳೊಳಗೇ, ಇಲ್ಲವೆ ತಾಲ್ಲೂಕು ಹೆಡ್‌ಕ್ವಾರ್ಟರುಗಳೊಳಗೇ ಮಾಡುತ್ತಿದ್ದೀರೇ ಹೊರತು ಒಂದು ದೊಡ್ಡ ಗ್ರಾಮದಲ್ಲಾದರೂ ಒಂದು ಕೈಗಾರಿಕಾ ಪಾಠಶಾಲೆಯನ್ನಾಗಲಿ ಇದುವರೆಗೂ ತೆರೆದಿದ್ದೀರಾ? ಅನೇಕ ಸಂದರ್ಭಗಳಲ್ಲಿ ನಮ್ಮ ಬೀರೂರಿನಂಥ ಒಂದು ದೊಡ್ಡ ಊರಿಗಾದರೂ ಒಂದು ಕೈಗಾರಿಕಾ ಪಾಠಶಾಲೆಯನ್ನು ಮಾಡಿಕೊಡಬೇಕೆಂದು ಕೇಳಿದ್ದೇವೆ. ಅಲ್ಲಿನ ಡಿಸ್ಟ್ರಿಕ್ಟ್ ಬೋರ್ಡಿನವರು ಕೂಡ 25,000 ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಜೊತೆಗೆ ಬೀರೂರು ಜಿಲ್ಲೆಯವರು 25,0.10 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸರ್ಕಾರದವರು ಅದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಹಾಕಿದರೆ ಸಾಕು, ಅನೇಕರಿಗೆ ನಿರುದ್ಯೋಗ ಹೋಗುತ್ತದೆ. ಬಿ.ಎ., ಎಂ.ಎ. ಮಾಡಿದವರು ಹಳ್ಳಿಗಳಿಗೆ ಹೋಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಕಡೆಯಲ್ಲೂ ಕೈಗಾರಿಕಾ ಶಾಲೆಗಳನ್ನೇರ್ಪಡಿಸಿದರೆ, ಆ ಹುಡುಗರು ಹಳ್ಳಿಗಳಲ್ಲೇ ಯಾವುದಾದರೂ ಉದ್ಯೋಗವನ್ನು ಕಲ್ಪಿಸಿಕೊಂಡು ಜೀವನ ಮಾಡುತ್ತಾರೆ. ಯಾವ ದೇಶದ ಚರಿತ್ರೆಯನ್ನೇ ತಾವು ನೋಡಿ, ಅದು ಮುಖ್ಯವಾಗಿ ಕೈಗಾರಿಕೆಗಳಿಂದಲೇ ಮುಂದಕ್ಕೆ ಬಂದಿದೆ. ಆದ್ದರಿಂದ ಹಳ್ಳಿಗಳಿಗೆ ಹೆಚ್ಚಿಗೆ ಕೈಗಾರಿಕಾ ಪಾಠಶಾಲೆಗಳನ್ನು ಕೊಟ್ಟು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗತಾನೆ ಸರ್ಕಾರದವರು ಬೆಂಗಳೂರಿನ ಹತ್ತಿರ ಒಂದು ಟೂರ್ ಫ್ಯಾಕ್ಟರಿಗೆ ಅವಕಾಶಮಾಡಿಕೊಡಬೇಕೆಂದಿದ್ದೇವೆಂದು ಹೇಳಿದ್ದಾರೆ. ಇದೂ ಬೆಂಗಳೂರಿಗೆ ಬಹಳ ಸಮೀಪದಲ್ಲೇ ಆಗುವುದಾಗಿದೆ. ನಾವು ಹೇಳುತ್ತಾ, ಹೇಳುತ್ತಾ ಹೀಗೆ ಮಾಡಿದರೆ ಹಳ್ಳಿಗಳು ಹಾಳಾಗುವುದಿಲ್ಲವೇ! ಈ ಫ್ಯಾಕ್ಟರಿಗೆ ಬೇರೆ ಹತ್ತಾರು ಸಾವಿರ ಜನಗಳು ಬೇಕಾಗುತ್ತಾರೆ. ಇವರೆಲ್ಲರೂ ಹಳ್ಳಿಗಳ ಕಡೆಯಿಂದ ವಲಸೆ ಬಂದು ಹಳ್ಳಿಗಳನ್ನು ಬರಿದು ಮಾಡುತ್ತಾರೆ.

ಉಪಾಧ್ಯಕ್ಷರು.—ಅದನ್ನು ಇಂಡಿಯಾ ಸರ್ಕಾರದವರು ಮಾಡುತ್ತಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಂಡಿಯಾ ಸರ್ಕಾರದವರೇ ಮಾಡಲಿ, ಯಾರೇ ಮಾಡಲಿ ಇದರಿಂದ ಈ ಸಿಟಿ ಮತ್ತೆ ಬೆಳೆಯುವುದಕ್ಕೆ ಅವಕಾಶವಾಯಿತು. ಇದರಿಂದ ಹಳ್ಳಿಗಳು ಹಾಳಾಗುತ್ತವೆ.

ಉಪಾಧ್ಯಕ್ಷರು.—ಬೇರೆ ಸರ್ಕಾರದ ವಿಚಾರದಲ್ಲಿ ಈ ಅಸೆಂಬ್ಲಿಯಲ್ಲಿ ಮಾತನಾಡಿದರೆ ಏನು ಪ್ರಯೋಜನ?

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಆದ್ದರಿಂದ ಕೈಗಾರಿಕಾ ಪಾಠಶಾಲೆಗಳನ್ನು ಮಾಡಬೇಕಾದರೆ ಹಳ್ಳಿಗಳಲ್ಲಿ ನಮಗೆ ಅನುಕೂಲವಾದಂಥ ಜಾಗದಲ್ಲಿ ಏರ್ಪಡಿಸಿ ಎಲ್ಲರಿಗೂ ಉದ್ಯೋಗ ಕಲ್ಪಿಸುವಂತೆ ಮಾಡಬೇಕೆಂದು ಒತ್ತಿ ಹೇಳುತ್ತೇನೆ.

ಶ್ರೀ ಟಿ. ಮಾಧವಾಚಾರ್ (ಭದ್ರಾವತಿ).—ಅಧ್ಯಕ್ಷರೇ, ಸಂಸ್ಥಾನದ ಕಾರ್ಖಾನೆಯ ಆಡಳಿತದ ಅಭಿವೃದ್ಧಿಯ ಬಗ್ಗೆ ಅನುಭವಸ್ಥರಾದ ಶ್ರೀ ಮ್ಯಾಸ್‌ಕರ್ನ್‌ಹ್ಯಾಸ್‌ರವರು ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮತಿ ಸುಬ್ಬಮ್ಮನವರು ಮಲೆನಾಡಿನ ಜಿಲ್ಲೆಗಳಲ್ಲಿ ಗ್ರಾಮ ಕೈಗಾರಿಕೆಗಳನ್ನು ಹೆಚ್ಚಾಗಿ ವಿಸ್ತರಿಸುವ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟರು. ಅವು ಬಹಳ ಅಗತ್ಯ. ಮಲೆನಾಡಿನ ಅಭಿವೃದ್ಧಿಗೆ ನಾನಾ ಯೋಜನೆಗಳು ಅನೇಕ ವರ್ಷಗಳಿಂದ ಚರ್ಚಿಸಲ್ಪಡುತ್ತಿದ್ದರೂ, ಆಗಾಗ್ಗೆ ಸಮಿತಿಗಳು ನೇಮಕವಾಗುತ್ತಿದ್ದರೂ ಇದುವರೆಗೂ ಯಾವ ಕೆಲಸವೂ ಕಾರ್ಯರೂಪದಲ್ಲಿ ಕಂಡು ಬಂದಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರೂ ಕೂಡ ತಮ್ಮ ಗ್ರಾಮಕೈಗಾರಿಕೆಯ ಯೋಜನೆಯನ್ನು ಮಲೆನಾಡು ಪ್ರಾಂತ್ಯಗಳಿಗೆ, ನರಸಿಂಹರಾಜಪುರ ಮುಂತಾದ ಕಡೆಗಳಿಗೆ ವಿಸ್ತರಿಸುವುದರಿಂದ ಪ್ರಯೋಜನವುಂಟು ಎಂದು ಹೇಳಿದ್ದಾರೆ. ಇದನ್ನಾದರೂ ಕೈಕೊಳ್ಳುತ್ತೀರೆಂದು ನಂಬಿದ್ದೇನೆ.

ಇನ್ನು ಕಾರ್ಖಾನೆಯ ಆಡಳಿತದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿಚ್ಛಿಸುತ್ತೇನೆ. ಅಲ್ಲಿ ಮುಖ್ಯವಾಗಿ ದುಡಿಯತಕ್ಕಂಥ ಕಾರ್ಮಿಕರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದದ್ದು ಅಗತ್ಯ. ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಉದಾಹರಣೆಯನ್ನೇ ತೆಗೆದುಕೊಂಡರೆ, ಕಳೆದ ವರ್ಷ ಹೊಸ ಮಂತ್ರಿಮಂಡಲ ಬಂದನಂತರ profit bonus ಕೊಡುವ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದಾಗಿ ಇವೊತ್ತಿನ ದಿವಸ ನಾವು ಹೆಚ್ಚಿನ ಆದಾಯವನ್ನು ಕಾಣುತ್ತಿದ್ದೇವೆ. ಕಳೆದ ಸಾಲಿನಲ್ಲಿ 30 ಲಕ್ಷ ರೂಪಾಯಿಗಳ ಆದಾಯವನ್ನು

ಮಾತ್ರ ಕಂಡರೂ ಸಹ, ಈ ಸಾರಿ ಏನಿಲ್ಲವೆಂದರೂ ಅರ್ಧ ಕೋಟಿ ರೂಪಾಯಿಗಳಿಗೆ ಜಾಸ್ತಿ ಆದಾಯ ಬರುವ ನಿರೀಕ್ಷೆಯಿದೆ.

ಅಲ್ಲಿನ ಕೂಲಿಗಾರರಲ್ಲಿ 20-30 ವರ್ಷಗಳು ಕೆಲಸ ಮಾಡಿ ರಿಟೈರ್‌ಆಗತಕ್ಕವರಿಗೆ ಮುಪ್ಪಿನ ಸೌಕರ್ಯಗಳೇನೂ ಆಶಾದಾಯಕವಾಗಿಲ್ಲ. ಪ್ರಾವಿಡೆಂಟ್‌ ಫಂಡ್‌ ಬರುವುದು ಬಹಳ ಕಡಿಮೆ. ಅವರಿಗೆ ಗ್ರ್ಯಾಚ್ಯುಯಿಟಿ ಕೊಡುವ ಪದ್ಧತಿಯನ್ನು ಜಾರಿಗೆತರಬೇಕೆಂದು ಬೋರ್ಡಿನವರು ಸಹ ಸರ್ಕಾರಕ್ಕೆ ಶಿಫಾರಸ್ಸುಮಾಡಿದ್ದಾರೆ. ಅದರಂತೆ ತಾವು ಗ್ರ್ಯಾಚ್ಯುಯಿಟಿ ಕೊಡುವ ಪದ್ಧತಿಯನ್ನು ಜಾರಿಗೆ ತಂದರೆ ಆ ಬಡ ನೌಕರರಿಗೆ ಮನೆಗೆ ಹೋಗುವ ಕಾಲಕ್ಕೆ ಸ್ವಲ್ಪ ಹಣ ಬರುತ್ತದೆ. ಅವರಿಗೂ ಒಂದು ರೀತಿಯಲ್ಲಿ ತೃಪ್ತಿಯಾಗುತ್ತದೆ. ಕಾರ್ಖಾನೆಯ ಕೆಲಸಗಾರರಿಗೂ ಸರ್ಕಾರದಲ್ಲಿ ಕೆಲಸಮಾಡುವವರಂತೆಯೇ ಜೀವನ ಭದ್ರತೆಯಿದೆಯೆಂಬ ನಂಬಿಕೆ ಬರುತ್ತದೆ. ಹೀಗಾಗಿ ನೌಕರರಲ್ಲಿ ಕೆಲಸದಲ್ಲಿ ಹೆಚ್ಚಿನ ಉತ್ಸಾಹ ಹುಟ್ಟಿ ಅದರ ಪರಿಣಾಮವನ್ನು ತಯಾರಿಕೆಯಲ್ಲಿ ಕಾಣಬಹುದು. ಈ ದೃಷ್ಟಿಯಿಂದ ಸರ್ಕಾರಿ ಕಾರ್ಖಾನೆಗಳಲ್ಲಿ ಕಾರ್ಮಿಕರ ಮತ್ತು ನೌಕರರ ಯೋಗಕ್ಷೇಮದ ವಿಷಯದಲ್ಲಿ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಭಾರತದ ಇತರ ಕಡೆಗಳಲ್ಲಿ ಇತರ ಖಾಸಗಿ ಕಾರ್ಖಾನೆಗಳಲ್ಲಿ ಯಾವ ರೀತಿಯ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದಾರೆ, ನೋಡಿ.

ಖಾಸಗಿ ಕೈಗಾರಿಕಾ ಸಂಸ್ಥೆಗಳವರು ಎಷ್ಟೋ ಸೌಕರ್ಯಗಳನ್ನು ನೌಕರರಿಗೆ ಕೊಡುತ್ತಿದ್ದಾರೆ. ಇಂಥಾ ಸೌಕರ್ಯಗಳನ್ನು ಸರ್ಕಾರಿ ಕೈಗಾರಿಕೆ ಸಂಸ್ಥೆಗಳಲ್ಲಿ ಅಲ್ಲಿನ ನೌಕರರಿಗೆ ಒಂದೊಂದಾಗಿ ಕೊಡುತ್ತಾ ಬಂದರೆ, ಕೈಗಾರಿಕೆಗಳಲ್ಲಿ ಉತ್ಪತ್ತಿ ಜಾಸ್ತಿಯಾಗಿ ನಮ್ಮ ಕಾರ್ಖಾನೆಗಳು ಬಹಳ ಚೆನ್ನಾಗಿ ಕೆಲಸ ಮಾಡಿ ಲಾಭದಾಯಕವಾಗುತ್ತದೆಂದು ನನ್ನ ಅಭಿಪ್ರಾಯ.

ಭದ್ರಾವತಿಯಲ್ಲಿ, ನಾನು ಹೇಳಿದ ಹಾಗೆ, ಕಬ್ಬಿಣದ ಕಾರ್ಖಾನೆಯ ನೌಕರರಿಗೆ ಗ್ರ್ಯಾಚುಯಿಟಿ ಕೊಡುವ ಪದ್ಧತಿಯನ್ನು ಜಾರಿಗೆ ತಂದು ತನ್ಮೂಲಕ ದೇಶಕ್ಕೆ ಮತ್ತು ನೌಕರರಿಗೆ ಅನುಕೂಲ ಮಾಡಬೇಕೆಂದು ನಾನು ಸೂಚಿಸುತ್ತೇನೆ.

Mr. DEPUTY-SPEAKER.—The House will now adjourn for lunch and re-assembe at 3-30 P.M.

(The House rose for lunch at Three minutes past Three of the clock and re-assembled at Thirty minutes past Three of the Clock.)

[MR. SPEAKER in the Chair].

ಶ್ರೀ ಎಲ್‌. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ನಮ್ಮ ಸಂಸ್ಥಾನದ ಕೈಗಾರಿಕೆಗಳ ವಿಚಾರದಲ್ಲಿ ಮಾತನಾಡುತ್ತಾ ಈಗ ತಾನೇ ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಮ್ಯಾಸ್ಕರೇನ್ಹಾಸ್‌ರವರು, ನಮ್ಮ ಕೈಗಾರಿಕೆಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಸಭೆಯ ಸದಸ್ಯರ ಮನಸ್ಸಿನವರೆಲೂ ಸರ್ಕಾರದ ಮೇಲೂ ಎಷ್ಟು ಪರಿಣಾಮಕಾರಿಯಾಗುವ ರೀತಿಯಲ್ಲಿ ಹೇಳಿದ್ದಾರೋ ಅಷ್ಟೇ ಪರಿಣಾಮಕಾರಿಯಾದ ರೀತಿಯಲ್ಲಿ ನನಗೆ ಹೇಳುವುದಕ್ಕೆ ಸಾಧ್ಯವಾಗದೇಯಿದ್ದರೂ, ಒಂದೆರಡು ವಿಷಯಗಳನ್ನು ತಿಳಿಸಬೇಕೆಂದು ಉದ್ದೇಶಿಸಿದ್ದೇನೆ. ಇದುವರೆಗೆ ಮೈಸೂರು ಸಂಸ್ಥಾನಕ್ಕೂ ಮೈಸೂರು ಸರ್ಕಾರಕ್ಕೂ ಹೊರಗಡೆ ಏನು ಒಳ್ಳೆಯ ಹೆಸರು ಬಂದಿದೆಯೋ ಅದು ಹಿಂದಿನಿಂದ ಮೈಸೂರು ಸರ್ಕಾರ ಅನುಸರಿಸುತ್ತಿದ್ದ ಕೈಗಾರಿಕಾ ನೀತಿಯ ಫಲ. ಇಲ್ಲಿ ಏರ್ಪಟ್ಟ ಸಣ್ಣ ಮತ್ತು ದೊಡ್ಡ ಕೈಗಾರಿಕಾ ಸಂಸ್ಥೆಗಳು ಹಿಂದೆ ಸಾಧಿಸಿದ ಪ್ರಗತಿಯಿಂದ ಮೈಸೂರು ಸಂಸ್ಥಾನಕ್ಕೂ ಮೈಸೂರು ಸರ್ಕಾರಕ್ಕೂ ಹೊರಗೆ ಖ್ಯಾತಿ ಬಂತು. ಆದರೆ ಇತ್ತೀಚೆಗೆ ಪ್ರತಿಯೊಂದು ದೊಡ್ಡ ಕೈಗಾರಿಕೆಗೂ ಮೊದಲು ಹಾಕಿದ್ದ ಬಂಡವಾಳದ ಎರಡರಷ್ಟು, ಮೂರರಷ್ಟು, ನಾಲ್ಕರಷ್ಟು ಬಂಡವಾಳ ಹಾಕಿದ್ದಾರೆ. ಈ ರೀತಿ ವಿಶೇಷ ಬಂಡವಾಳವನ್ನು ಹಾಕಿರುವ ಕೈಗಾರಿಕಾ ಸಂಸ್ಥೆಗಳು ಸರಿಯಾದ ಪ್ರಗತಿಯನ್ನು ಸಾಧಿಸದೇ ಹೋದರೆ ಅದರಿಂದ ಸರ್ಕಾರಕ್ಕೂ ದೇಶಕ್ಕೂ ವಿಶೇಷ ನಷ್ಟವಾಗುತ್ತದೆ. ಆದಕಾರಣ ಇವುಗಳ ವಿಚಾರದಲ್ಲಿ ಸರ್ಕಾರದವರು ಹೆಚ್ಚು ನಿಗಾ ತೆಗೆದುಕೊಳ್ಳಬೇಕಾಗುತ್ತದೆ. ಇವು ಅಭಿವೃದ್ಧಿ ಹೊಂದದೆ ಹಿಂದೆ ಹೋಗುತ್ತಿದ್ದರೆ ಅವುಗಳ ಸ್ಥಿತಿ ಇನ್ನೂ ಬಹಳವಾಗಿ ಕೆಟ್ಟು ಹೋಗಿ ಆ ಮೇಲೆ ಇವುಗಳನ್ನು ಮುಂದುವರಿಸುವುದು ಬಹಳ ಕಷ್ಟವಾಗುತ್ತದೆ. ಆದುದರಿಂದ ಇವುಗಳ ಸ್ಥಿತಿ ಇನ್ನೂ ತೀರ ಹದಗೆಡುವುದಕ್ಕೆ ಮುಂಚೆಯೇ ಸರ್ಕಾರದವರು ಎಚ್ಚರಿಕೆ ಕಾರ್ಯ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು ಮತ್ತು ಅವಶ್ಯಕ. ಶ್ರೀ ಮ್ಯಾಸ್ಕರೇನ್ಹಾಸ್‌ರವರು ಹೇಳಿದ ಹಾಗೆ, ಹಿಂದೆ ಸ್ಥಾಪನೆ ಆದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೂ, ಲಾಭಗಳಿಸುವುದಕ್ಕೂ ಕಾರಣ ಆಗ ಜವಾಬ್ದಾರಿಯನ್ನು ವಹಿಸತಕ್ಕ ಅಧಿಕಾರಿಗಳಿದ್ದುದು. ಅವರಿಗೆ ಪೂರ್ಣ ಜವಾಬ್ದಾರಿ ಕೊಟ್ಟು, ಏನಾದರೂ ನ್ಯೂನತೆ ಕಂಡು ಬಂದಾಗ ಅದನ್ನು ಕೇಳುವುದಕ್ಕೂ ಮೇಲ್ಪಟ್ಟ ಅಧಿಕಾರಿಗಳಿರುತ್ತಿದ್ದರು. ಈಗ ಒಬ್ಬರೇ ಅಧಿಕಾರಿಗಳ ಮೇಲೆ ಇಷ್ಟೊಂದು ಸಂಸ್ಥೆಗಳ, ದೊಡ್ಡ ಕೈಗಾರಿಕೆಗಳ ಜವಾಬ್ದಾರಿಯನ್ನು ಹೊರಿಸಿ ಅವರನ್ನು ಕೇಳುವುದು ಕಷ್ಟವಾಗಿದೆ. ಆದುದರಿಂದ ಸರ್ಕಾರದವರು ಎಚ್ಚರಿಕೆ ಕಾರ್ಯಕ್ರಮವನ್ನು ತೆಗೆದುಕೊಂಡು, ಯಾವ ಯಾವ ಕೈಗಾರಿಕೆಯ ಮೇಲ್ವಿಚಾರಣೆ ನೋಡಲು ಯಾರು ಯಾರು ಸಮರ್ಥರು ಎಂಬುದನ್ನು ತಿಳಿದು, ಅಂಥವರನ್ನು ಅದಕ್ಕೆ ನೇಮಿಸುವುದು ಒಳ್ಳೆಯದು. ಮಾನ್ಯ ಮಂತ್ರಿಗಳು ಅವರ ಭಾಷಣದ ಪ್ರಾರಂಭದಲ್ಲಿ ಹೇಳಿದರು, ನಮ್ಮ ಕೈಗಾರಿಕೆಗಳ ಸ್ಥಿತಿಗತಿ, ಆಡಳಿತ ಯಾವ ರೀತಿ ಇದೆ ಎಂಬುದನ್ನು ಪರಿಶೀಲನೆ ಮಾಡುವ ಬಗ್ಗೆ ಇಂಡಿಯಾ ಸರ್ಕಾರದವರು ಒಬ್ಬರು ಖಾಸಗೀ ದೊಡ್ಡ ಮನುಷ್ಯರನ್ನು ಕಳುಹಿಸಿಕೊಟ್ಟಿದ್ದರು, ಅವರು ನಮ್ಮ ಕೈಗಾರಿಕಾ ಸಂಸ್ಥೆಗಳಿಗೆ ಭೇಟಿ ಕೊಟ್ಟು, ವಿಷಯಗಳನ್ನು ತಿಳಿದುಕೊಂಡು ಒಂದು ವರದಿಯನ್ನು ಕೊಟ್ಟರು ಎಂದು. ಅವರ ವರದಿಯ ಫಲವಾಗಿ ಒಂದು ಹೈಪವರ್‌ ಡೈರೆಕ್ಟೊರೇಟನ್ನು ಸ್ಥಾಪನೆ ಮಾಡುತ್ತಾರೆಂದು 1951ರಲ್ಲಿ ಅಥವಾ 1952ರಲ್ಲಿ ಶ್ರೀಮನ್ಮಹಾರಾಜರು ಈ ಸಭೆಯನ್ನುದ್ದೇಶಿಸಿ ಭಾಷಣ ಮಾಡುವಾಗ ಅವರ ಭಾಷಣದಲ್ಲಿ ಕೂಡ ನಮೂದು ಮಾಡಿದ್ದರು. ಆ ಭಾಷಣವಾದ ನಂತರ ಸುಮಾರು ಐದಾರು ತಿಂಗಳಲ್ಲಿ ಈ ಸಭೆ ಸೇರಿದಾಗ ಒಂದು ಪ್ರಶ್ನೆಯನ್ನು ಆ ವಿಚಾರದಲ್ಲಿ ನಾನು ಹಾಕಿದೆ. ಅದರಲ್ಲಿ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಹೇಳಿದ ಆ ವಿಷಯದ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆಯೆಂದು ಕೇಳಿದೆ. ಅದಕ್ಕೆ ಉತ್ತರವಾಗಿ, 'The matter is under

(ಶ್ರೀ ಎಲ್ ಸಿದ್ದಪ್ಪ)

the active consideration of Government' ಎಂದು ಹೇಳಿದರು. ಈ ಸಾರಿ ಅದೇ ಪ್ರಶ್ನೆ ಬೇರೆ ಒಬ್ಬ ಮಾನ್ಯ ಸದಸ್ಯರು ಹಾಕಿದ್ದಕ್ಕೆ ಜವಾಬಾಗಿ ಸದ್ಯಕ್ಕೆ ಅದರ ಮೇಲೆ ಏನೂ ಕಾರ್ಯಕ್ರಮ ತೆಗೆದು ಕೊಂಡಿಲ್ಲ ಎಂದು ಹೇಳಿದ್ದಾರೆ. ಸದ್ಯಕ್ಕೆ ತೆಗೆದು ಕೊಳ್ಳುವ ಅಭಿಪ್ರಾಯವೂ ಇಲ್ಲ ಎನ್ನುವ ಹಾಗೆ ಜವಾಬು ಕೊಟ್ಟಿದ್ದಾರೆ. ಕೈಗಾರಿಕಾ ಸಂಸ್ಥೆಗಳಲ್ಲಿ ಪ್ರಗತಿ ಸಾಧಿಸುವ ವಿಚಾರದಲ್ಲಿ ನಮ್ಮ ಸರ್ಕಾರದವರು ಏಕೆ ಈ ತಾತ್ಸಾರ ಮನೋಭಾವವನ್ನು ತೋರಿಸುತ್ತಿದ್ದಾರೋ ಗೊತ್ತಿಲ್ಲ. ಸುಮ್ಮನೆ 'ರೋಟೀ' ಆಗಿ ಏನೋ ಸೌಭ್ಯ ಕೊಡುತ್ತೇವೆಂದರೆ ಉಪಯೋಗವಿಲ್ಲ. ಈಗಲೇ ಎಚ್ಚರಿಕೆ ಕಾರ್ಯ ಕ್ರಮವನ್ನು ತೆಗೆದುಕೊಂಡು ಯಾರಿಗೆ ಯಾವ ಯಾವ ಕೈಗಾರಿಕೆಯನ್ನು ನೋಡಿ ಕೊಳ್ಳಲು ಯೋಗ್ಯತೆಯಿದೆಯೋ ಅಂಥವರನ್ನು ನೇಮಕ ಮಾಡಬೇಕು. ಒಂದೊಂದು ಸಂಸ್ಥೆಯಲ್ಲಿ ಮೂರು ಕೋಟಿ ರೂಪಾಯಿಗಳ ಬಂಡವಾಳ ಹಾಕಿದೆ ಕೆಲವು ಸಂಸ್ಥೆಗಳಲ್ಲಿ ಇಷ್ಟು ಭಾರಿ ಹಣವನ್ನು ಸರ್ಕಾರ ಹಾಕಿರುವುದರಿಂದ ಸರಿಯಾದ ಕಾರ್ಯ ಕ್ರಮ ತೆಗೆದು ಕೊಳ್ಳಬೇಕು. ಒಂದು ವಿಷಯವನ್ನು ನಾನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಶಕ್ತರಾದ ಅಧಿಕಾರಿಗಳನ್ನು ಕಳುಹಿಸುವುದನ್ನು ಸುಲಭವಾಗಿ ಮಾಡುತ್ತೇವೆ, ಆದರೆ ಅಂಥ ಶಕ್ತರಾದ ಅಧಿಕಾರಿಗಳನ್ನು ದೊರಕಿಸಿ ಕೊಳ್ಳುವುದು ಬಹಳ ಕಷ್ಟ.

ಇನ್ನೊಂದು ವಿಷಯವನ್ನು ಸಭೆಯ ಅವಗಾಹನೆಗೆ ತರಬೇಕೆಂದು ನನ್ನ ಉದ್ದೇಶ. ಈ ವಿಷಯದಲ್ಲಿ ಒಂದು ಖೋತಾ ನಿರ್ಣಯವನ್ನು ಕೂಡ ಕಳುಹಿಸಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಸರ್ಕಾರದವರು ಏನು ಕಾರ್ಯ ಕ್ರಮ ಕೈಕೊಂಡಿದ್ದಾರೆಂಬ ವಿಷಯವನ್ನು ತಿಳಿದುಕೊಳ್ಳುವುದು ನನ್ನ ಖೋತಾ ನಿರ್ಣಯದ ಉದ್ದೇಶ. 195)ನೆಯ ಇಸವಿಯಲ್ಲಿ ಆಗಿನ ಹಣಕಾಸಿನ ಮಂತ್ರಿಗಳು ಅವರು ಬಡ್ಜೆಟ್ ಭಾಷಣ ಮಾಡುವ ಸಂದರ್ಭದಲ್ಲಿ ಈ ರೀತಿ ಹೇಳಿದರು:

"The Budget for the coming year is expected to close with a cash balance of Rs. 114·77 lakhs after providing Rs. 545·45 lakhs for capital works, 115·5 lakhs under investment, the details for which are given below—Shares in Joint Stock companies, Fertilisers work, Shimoga Sugar Factory—Rs. 13·65 lakhs."

ಅದೇ ಸಾಲಿನಲ್ಲಿ ಈ ಸಭೆಯನ್ನುದ್ದೇಶಿಸಿ ಶ್ರೀಮನ್ಮಹಾರಾಜರು ಭಾಷಣ ಮಾಡಿದಾಗ ಈ ವಿಚಾರವನ್ನು ಪ್ರಸ್ತಾಪಿಸಿ ಅವರು ಹೀಗೆ ಹೇಳಿದ್ದಾರೆ:

"My Government, as you are aware, have a one-third share in the Hindustan Aircraft Factory and they have now decided to participate in the Indian Telephone Industry, Raw-film industry and the Sugar Company to be started in Shimoga."

ಇನ್ನೊಂದು ವಿಚಾರ. ಹಿಂದೆ ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಹೇಳಿದಾಗ ಕೆಲವು ಸಂಶಯಗಳಿದ್ದವು. ಆ ಜಿಲ್ಲೆಯಲ್ಲಿ ಆಗ ದೊಡ್ಡ ನೀರಾವರಿ ಸೌಕರ್ಯವಿಲ್ಲದಿದ್ದ ಕಾರಣ ಸಕ್ಕರೆ ಕಾರ್ಖಾನೆಗೆ ಬೇಕಾದ ಕಬ್ಬು ಸಿಕ್ಕುತ್ತದೆಯೋ ಇಲ್ಲವೊ ಎಂಬ ಭಯವಿತ್ತು. ಆಗ ಅಲ್ಲಿ ಭದ್ರಾ ನಾಲೆಯ ತರೀ ಜಮೀನಿನಲ್ಲಿ ಕಬ್ಬು ಬೆಳೆಯಲು ಅವಕಾಶವಿತ್ತು ಮತ್ತು ಅಂಜನಾಪುರದ ನಾಲೆಗಳ ಜಮೀನು ಸುಮಾರು 16 ಸಾವಿರ ಎಕರೆ ಪ್ರದೇಶದಲ್ಲಿ ತರೀ ಸಾಗುವಳಿಗೆ ಅವಕಾಶವಿತ್ತು. ಅಲ್ಲಿಂದೀಚೆಗೆ ಈ ಸಕ್ಕರೆ ಬೈಲು, ತುಂಗಾ ಯೋಜನೆಗಳಿಂದ ಬೇಕಾದಷ್ಟು ನೀರನ್ನು ಒದಗಿಸುತ್ತಿದ್ದೇವೆ. ಇವುಗಳಿಂದ 23 ಸಾವಿರ ಎಕರೆ ತರೀ ಜಮೀನಿಗೆ ನೀರಿನ ಸೌಕರ್ಯ ಒದಗುತ್ತದೆ. ಅಲ್ಲದೆ ಇನ್ನು ಎರಡು ಮೂರು ವರ್ಷಗಳಲ್ಲಿ ಮಾಗಿಸಬೇಕೆಂದಿರುವ ಲಕ್ಕವಳ್ಳಿಯ ಮೊದಲನೆಯ ಘಟ್ಟದ ಕಾಮಗಾರಿ ಮುಗಿದರೆ 1955-56 ಹೊತ್ತಿಗೆ ಇನ್ನೂ 22 ಸಾವಿರ ಎಕರೆ ಜಮೀನು ಸಿಕ್ಕುತ್ತದೆ. ಹೀಗೆ ಸುಮಾರು 60-70 ಸಾವಿರ ಎಕರೆ ತರೀ ಜಮೀನಿರುವ ಪ್ರದೇಶದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದು ಬಹಳ ಅವಶ್ಯಕ. ಹಿಂದೆ ನಾನು ಈ ಸಭೆಯಲ್ಲಿ ಒಂದು ಠರಾವನ್ನು ಮಂಡಿಸಿದಾಗ ಆಗಿನ ಕೈಗಾರಿಕೆ ಮಂತ್ರಿಗಳು ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆಂದು ಹೇಳಿದರು! ಅನಂತರ ಒಂದು ಡೈರೆಕ್ಟೊರೇಟ್ ಎಂಬ ಸಮಿತಿಯನ್ನು ಸ್ಥಾಪನೆಮಾಡಿ, ಅವರು ಒಂದು ವರದಿಯನ್ನು ಕಳುಹಿಸಿ, ಆ ಬಗ್ಗೆ ಒಂದು ಕಚೇರಿಯಲ್ಲಿ ಕೆಲವು ದಿವಸ ಶಿವಮೊಗ್ಗದಲ್ಲಿಯೂ ಇನ್ನು ಕೆಲವು ದಿವಸ ಭದ್ರಾವತಿಯಲ್ಲಿಯೂ ಕೆಲಸಮಾಡಿತು. ಇಷ್ಟೆಲ್ಲಾ ಕಾರ್ಯಕ್ರಮ ನಡೆದು, ಶ್ರೀಮನ್ಮಹಾರಾಜರು ಅವರ ಭಾಷಣದಲ್ಲಿ ಅಪ್ಪಣೆ ಕೊಡಿಸಿ ಮೂರು ವರ್ಷಗಳಾದರೂ ಇದು ಕಾರ್ಯಗತವಾಗದೇ ಇರುವುದನ್ನು ನೋಡಿದರೆ, ಶೋಚನೀಯ ಸ್ಥಿತಿಯೆಂದು ಹೇಳಬೇಕಾಗಿದೆ. ಏಕೆ ಇದನ್ನು ಒತ್ತಿಹೇಳುತ್ತಿದ್ದೇನೆಂದರೆ, ಸಂಸ್ಥಾನಾದ್ಯಂತ ವ್ಯವಸಾಯಗಾರರ ಪರಿಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಹೊರಟಿದ್ದೇವೆ. ಇದು ಸಾರ್ಥಕವಾಗಬೇಕಾದರೆ, ಅಲ್ಲಲ್ಲಿ ವ್ಯವಸಾಯಗಾರರು ಬೆಳೆಯತಕ್ಕ ಫಸಲಿಗೆ ಸರಿಯಾದ ಧಾರಣೆ ದೊರಕುವುದು ಅಗತ್ಯ. ಶಿವಮೊಗ್ಗ ಜಿಲ್ಲೆಯಲ್ಲಿ ಕಬ್ಬು ಬೆಳೆಯುವುದನ್ನು ವ್ಯವಸಾಯ ಇಲಾಖೆಯವರು ನೋಡಿದ್ದಾರೆ. ಅಲ್ಲಿ ಬೆಳೆಯತಕ್ಕಷ್ಟು ಒಳ್ಳೆಯ ಕಬ್ಬು ಸಂಸ್ಥಾನದಲ್ಲಿ ಇನ್ನೆಲ್ಲೂ ಬೆಳೆಯುವುದಿಲ್ಲ. ಅಷ್ಟು ಶ್ರೇಷ್ಠ ದರ್ಜೆಯ ಕಬ್ಬು ಬೆಳೆಯುತ್ತದೆ. ಆದಕಾರಣ ಅಲ್ಲೊಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆಮಾಡುವುದು ಅತ್ಯಾವಶ್ಯಕ. ಈ ವಿಚಾರದಲ್ಲಿ ಸರ್ಕಾರದವರು ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೇನೆ. ಸರ್ಕಾರದವರು ಇದುವರೆಗೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ, ಇಲ್ಲದಿದ್ದರೆ ಏನು ತೆಗೆದುಕೊಳ್ಳುತ್ತಾರೆ, ಎಂಬುದನ್ನು ಕೇಳುವುದಕ್ಕೆ ನಾನು ಕಾತುರನಾಗಿದ್ದೇನೆ.

(Many Members rose.)

Mr. SPEAKER.—Sri Mudlagiri Gowda and Sri Madappa may have an opporunity under 'Miscellaneous',

and Sri Anantaraman and Sri Srinivasa Iyengar if there is time, so far as the present mttion is concerned. Sri B. P. Nagaraja Murthy.

Sri H. SIDDAVEERAPPA.—Since very many points have been raised, I would like to have fifteen minutes for reply.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ) — ಸ್ವಾಮಿ, ಸರ್ಕಾರದಿಂದ ದ್ರವ್ಯ ಸಹಾಯ ಪಡೆದು ನಡೆಸತಕ್ಕ ಕೈಗಾರಿಕೆ ಸಂಸ್ಥೆಗಳಿಗೆ ಸರ್ಕಾರ ಸುಮಾರು 1,42,35,845 ರೂಪಾಯಿಗಳ ಬಂಡವಾಳವನ್ನೊದಗಿಸಿದೆ. ಇವುಗಳಿಂದ ಏನು ಉತ್ಪತ್ತಿ ಎಂದು ವಿಮರ್ಶೆಮಾಡುವುದಾದರೆ, ಕಲವು, ಕೈಗಾರಿಕೆಗಳ ಸ್ಥಿತಿ ಏನು, ಲಾಭವೇನು ಎಂಬುದನ್ನೂ ಕೂಡ ತಿಳಿಸದೆ ಹಾಗೆಯೇ ಬ್ಲಾಂಕ್ ಬಿಟ್ಟಿದ್ದಾರೆ; ಇನ್ನು ಕೆಲವು ಸಂಸ್ಥೆಗಳು ತಕ್ಕಮಟ್ಟಿಗೆ ಲಾಭವನ್ನು ಹಂಚುತ್ತಿವೆ. ಸರ್ಕಾರದ ದ್ರವ್ಯ ಸಹಾಯ ಪಡೆದ ಜಾಯಿಂಟ್ ಸ್ಟಾಕ್ ಕೈಗಾರಿಕೆ ಸಂಸ್ಥೆಗಳ ಮೇಲೆ ಸರ್ಕಾರದ ಮೇಲ್ವಿಚಾರಣೆ ಅಷ್ಟು ಸಮರ್ಪಕವಾಗಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರುವುದು ನನ್ನ ಉದ್ದೇಶ. ಉದಾಹರಣೆಗೆ, ಯಾವುದಾದರೂ ಒಂದು ಸಂಸ್ಥೆಯನ್ನು ತೆಗೆದುಕೊಳ್ಳುವುದಾದರೆ ನಾನಿರತಕ್ಕ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಯ ವಿಚಾರದಲ್ಲಿ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತೇನೆ. ಇದು ಸಾಮಾನ್ಯವಾಗಿ ಶೇಕಡ 20ರಷ್ಟು ಡಿವಿಡೆಂಡ್ ಹಂಚಿದೆ. ನಮ್ಮ ಸರ್ಕಾರ 12 ಲಕ್ಷ ರೂಪಾಯಿಗಳ ಷೇರುಗಳನ್ನು ಕೊಂಡು ಬಂಡವಾಳ ಹಾಕಿದೆ. ಅದಕ್ಕೆ ಅಧ್ಯಕ್ಷರನ್ನು ನೇಮಿಸುವ ಅಧಿಕಾರ ಕೂಡ ಸರ್ಕಾರಕ್ಕಿದೆ. ಆದರೂ ಸರ್ಕಾರ 12 ಲಕ್ಷ ರೂಪಾಯಿಗಳ ಬಂಡವಾಳ ಹಾಕಿರುವ ಇಂಥ ಸಂಸ್ಥೆಯ ಮೇಲ್ವಿಚಾರಣೆಯ ವಿಷಯದಲ್ಲಿ ತಕ್ಕಷ್ಟು ಗಮನ ಕೊಡುತ್ತಿಲ್ಲವೆಂಬ ಅಂಶವನ್ನು ಗಮನಕ್ಕೆ ತರಲಿಚ್ಛಿಸುತ್ತೇನೆ. ಇತರ ಜಾಯಿಂಟ್ ಸ್ಟಾಕ್ ಕಂಪೆನಿಗಳು ತೋರಿಸುವ ರೀತಿ ಇದರಿಂದ ಬರತಕ್ಕ ಲಾಭವನ್ನು ಶೇಕಡ 20ರಷ್ಟೆಂದು ಬಡ್ಜೆಟ್ಟಿನಲ್ಲಿ ನಮೂದಿಸಿದ್ದಾರೆ. ಅಂದಮಾತ್ರಕ್ಕೇ ಈ ಒಂದು ದೃಷ್ಟಿಯಿಂದ ಹೆಚ್ಚು ಲಾಭ ಬರುತ್ತಿದೆಯೆಂಬ ಭಾವನೆ ಇರಬಾರದು. ಏಕೆಂದರೆ, ಇದರ ಮೇಲ್ವಿಚಾರಣೆ ಇನ್ನೂ ಚೆನ್ನಾಗಿ ನಡೆದರೆ ಶೇಕಡ 60ರಷ್ಟು ಡಿವಿಡೆಂಡ್ ಬರುವ ಸಂಭವವಿದೆ. ಇದು ಬಹಳ ಪ್ರಾಮುಖ್ಯವಾದ ಕೈಗಾರಿಕೆ. ಇದರಲ್ಲಿ ಎಣ್ಣೆಯ ಗಿರಣಿ ಇದೆ, ಪೆಪ್ಪರ್‌ಮೆಂಟ್ ಕಾರ್ಖಾನೆಯಿದೆ, ಇನ್ನೂ ಬೇರೆ ಶಾಖೆಗಳಿವೆ. ಎಣ್ಣೆಯ ಗಿರಣಿಯಲ್ಲಿ ನಷ್ಟವಾಗಿದೆಯೆಂದು ಅದನ್ನು ನಿಲ್ಲಿಸಿದ್ದಾರೆ. ಹೀಗೆ ನಷ್ಟವಾಗಲು ಕಾರಣವೇನು ಎಂಬ ಅಂಶವನ್ನು ಇನ್ನೂ ಯೋಚನೆ ಮಾಡಿಲ್ಲ.

ಪೆಪ್ಪರ್‌ಮೆಂಟನ್ನು ತಯಾರಿಸುವ ಶಾಖೆಯಲ್ಲಿ ಈ ದಿವಸ ದಿನ ಒಂದಕ್ಕೆ ಸುಮಾರು 10 ಟನ್‌ನಷ್ಟು ಉತ್ಪನ್ನವಾಡಿ ಖರ್ಚಾಗದೆ ಸರಕು ನಿಂತು ಕರಗಿ ಹಾಳಾಗುತ್ತಿದೆ. ಆದರೆ ಎಷ್ಟು ತಯಾರಾಗುತ್ತಿದೆಯೋ ಅಷ್ಟೂ ಸಹ ಈ ದಿವಸ ಖರ್ಚಾಗುತ್ತಿಲ್ಲ. ಅದೇನು ಕಾರಣದಿಂದಲೋ ಈ ಪೆಪ್ಪರ್‌ಮೆಂಟಿನ ಏಜೆನ್ಸಿ ತೆಗೆದುಕೊಂಡಿದ್ದವರು, ಅವರಿಗೆ ಕಳುಹಿಸಲಾಗಿದ್ದ ಕೋಟಾವನ್ನು ವಾಪಸ್ಸುಮಾಡಿಬಿಟ್ಟಿದ್ದಾರೆ. ಆ ವಿಚಾರ ಸರ್ಕಾರದವರ ಗಮನಕ್ಕೂ ಕೂಡ ಬಂದಿರಬಹುದು. ಹೀಗೆ ಯಾವ ಒಂದು ದೃಷ್ಟಿಯಲ್ಲಿ ನೋಡಿದರೂ ಖಾಸಗೀ ಉದ್ಯಮಗಳವರು ಕೈಗಾರಿಕೆಗಳಿಂದ ಲಾಭ ಹೊಂದುತ್ತಿರುವಂತೆ ಸರ್ಕಾರದವರು ಕೈಕೊಂಡಿರತಕ್ಕ ಉದ್ಯಮಗಳಿಂದ ಲಾಭ ಪಡೆಯುತ್ತಿಲ್ಲ. ನಮ್ಮ ಮಂಡ್ಯ ಜಿಲ್ಲೆ ಸಕ್ಕರೆ ಕಾರ್ಖಾನೆ ಒಂದು ಕಾಮಧೇನು ಇದ್ದಂತಿದೆ. ಅಸಮರ್ಪಕ ಮತ್ತು ಸ್ವಾರ್ಥದಿಂದ ಕೂಡಿದ ಛೇರ್ಮನ್ನರ ಆಡಳಿತದಿಂದ ಕಾಮಧೇನು ಇಂದು ಕತ್ತೆಮರಿಯಾಗಿದೆ. ರೈತರು ಹೆಚ್ಚಿನ ರೀತಿಯಲ್ಲಿ ಷುಗರ್ ಫಂಡ್ ಸೆಸ್ಸನ್ನು ಕೊಡುತ್ತಿದ್ದಾಗ್ಯೂ ಅವರಿಗೆ ಸರಿಯಾದ ಅನುಕೂಲಗಳನ್ನು ಒದಗಿಸಲು ನಿಗಾ ನೋಡತಕ್ಕ ಮತ್ತು ಮೇಲ್ವಿಚಾರಣೆ ಮಾಡತಕ್ಕವರು ಒಂದು ಸಮರ್ಪಕವಾದ ರೀತಿಯಲ್ಲಿ ಕೆಲಸ ನಡೆಸುತ್ತಿಲ್ಲ. ಈ ಮೇಲ್ವಿಚಾರಣೆ ನಡೆಸತಕ್ಕವರು ಸರಿಯಾದ ರೀತಿಯಲ್ಲಿ ಸರ್ಕಾರದ ಅಧೀನಕ್ಕೊಳಪಟ್ಟಂತೆ ಕಾಣುತ್ತಿಲ್ಲ. ಈ ದಿವಸ ಆ ಮಂಡ್ಯ ಷುಗರ್ ಕಂಪೆನಿಯ ಛೇರ್ಮನ್ ಆಗಿರತಕ್ಕವರು ಎಲ್ಲಿದ್ದಾರೆ, ಅವರೇನು ಕೆಲಸಮಾಡುತ್ತಿದ್ದಾರೆ! ಅವರ ಆಫೀಸನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡು ಬೆಂಗಳೂರಿನಲ್ಲಿರಲು ಕಂಪೆನಿಯವರು ವಾಸಕ್ಕೆ ಸಹ ಬಂಗಲೆ ಕೊಟ್ಟಿದ್ದರೂ ಯಾವಾಗಲೂ ಮಂಡ್ಯದಲ್ಲಿಯೆ ಇದ್ದುಕೊಂಡು ಭತ್ಯ ತೆಗೆದುಕೊಳ್ಳುತ್ತಿದ್ದಾರೆ. ಇವರು ವ್ಯಾಪಾರದಲ್ಲಿ ಎಷ್ಟರಮಟ್ಟಿಗೆ ಮೆಹನತ್ತು ನಡೆಸಿರುತ್ತಾರೆ, ಇವರು ಬಂದನಂತರ ವ್ಯಾಪಾರ ಅಭಿವೃದ್ಧಿಗೆ ಬರುತ್ತಿದೆಯೇ, ಇಲ್ಲವೇ ಇತ್ಯಾದಿ ನಾನಾ ಲೋಪದೋಷಗಳನ್ನು ಕಂಡುಹಿಡಿದು ಅವುಗಳನ್ನು ಕ್ರಮಪಡಿಸತಕ್ಕದ್ದು ಸರ್ಕಾರಕ್ಕೊಳಪಟ್ಟ ವಿಚಾರವಾಗಿದೆ. ಈ ಬಗ್ಗೆ ಸರ್ಕಾರದವರು ಒಂದು ಉದಾಸೀನ ಭಾವದಿಂದ, 'ಏನೋ ಹೀಗೆಲ್ಲಾ ಹೇಳುತ್ತಾರೆ, ನಮಗೆ ಅದರಿಂದ ಲಾಭ ಬರುತ್ತಿದೆ' ಎಂದು ಹೇಳಬಹುದು. ಆದರೆ ಇಂಥ ಒಂದು ದೊಡ್ಡ ಕಂಪೆನಿಯ ಹಣಕಾಸಿನ ಆಡಳಿತ ಹೇಗೆ ನಡೆಯುತ್ತಿರುತ್ತೆಂಬುದನ್ನು ಕಾಲಕಾಲಕ್ಕೆ ಸರಿಯಾಗಿ ತನಿಖೆ ನಡೆಸಲು ಸರ್ಕಾರ ಒಂದು ಇನ್‌ವೆಸ್ಟಿಗೇಷನ್ ಆಡಿಟ್ ವ್ಯವಸ್ಥೆಯನ್ನು ಇಟ್ಟಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ಇಲ್ಲಿಯವರೆಗೂ ನಾನು ನೋಡಿದ್ದರಲ್ಲಿ ಅಂಥ ಯಾವ ಆಡಿಟ್ ವ್ಯವಸ್ಥೆಯನ್ನೂ ಜಾರಿಗೆ ತಂದ ಹಾಗಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಚೆಲ್ಲಿ ಸ್ಥಾಪಿಸಿರತಕ್ಕ ಈ ಕೈಗಾರಿಕೆಯ ಆಡಳಿತದ ಬಗ್ಗೆ ತಾತ್ಸಾರಮಾಡದೆ, ಇದಕ್ಕೆ ತಕ್ಕ ಪ್ರೋತ್ಸಾಹ ನೀಡಿ ಇದರ ಆಡಳಿತವನ್ನು ದಕ್ಷತೆಯಿಂದ ನಡೆಸುವಂತೆಮಾಡಿ, ಹೆಚ್ಚಿನ ಲಾಭ ಬರುವ ರೀತಿ ಮಾಡಲು ಸರ್ಕಾರದವರು ತೀವ್ರ ಪರ್ಯಾಲೋಚನೆ ಮಾಡಬೇಕೆಂದು ನಾನು ಸಲಹೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈಗ ಸಭೆಯ ಮುಂದಿಟ್ಟಿರತಕ್ಕ ಇಂಡಸ್ಟ್ರೀಸ್ ಮತ್ತು ಸಪ್ಲೈಸ್ ಡಿಮ್ಯಾಂಡ್' ಬಗ್ಗೆ ಕೆಲವು ವಿಚಾರಗಳನ್ನು ನಾನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇಚ್ಛಿಸಿದ್ದೇನೆ.

ಈಗಾಗಲೇ ನಮ್ಮ ಮಾನ್ಯ ಗೆಳೆಯರು ಈ ಕೈಗಾರಿಕೆಗಳ ಮ್ಯಾನೇಜ್‌ಮೆಂಟ್ ಯಾವ ರೀತಿಯಾಗಿ ನಡೆಯುತ್ತಿದೆಯೆಂಬ ಬಗ್ಗೆ ಕೆಲವು ಮಾತುಗಳನ್ನಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಮ್ಯಾಸ್ಕರನ್‌ಹಾಸ್‌ರವರು ಈ ಕೈಗಾರಿಕೆಗಳ ಅಭಿವೃದ್ಧಿ ಮತ್ತು ಮ್ಯಾನೇಜ್‌ಮೆಂಟಿನ ವಿಚಾರವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಈ ದಿವಸ ನಾವು ಈ ಕೈಗಾರಿಕೆಗಳ ಬಗ್ಗೆ ಖರ್ಚುಮಾಡುತ್ತಿರುವುದು ಸುಮಾರು ಆರು ಕೋಟಿ ರೂಪಾಯಿಗಳು. ಅವುಗಳಿಂದ ಬರತಕ್ಕ ಉತ್ಪತ್ತಿ ಕೂಡ ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ ಇದೆ. ಬರತಕ್ಕ ಉತ್ಪತ್ತಿಗೂ ಮತ್ತು ಖರ್ಚಿಗೂ ಅಲ್ಲಿಂದಲ್ಲಿಗೆ ಸರಿಹೋಗುತ್ತದೆಂದು ಹೇಳಬಹುದು. ತಾವು ಬಡ್ಜೆಟ್ಟಿನಲ್ಲಿ 1951-52ಕ್ಕೆ ತೋರಿ

(ಶ್ರೀ ಎಸ್. ಗೋಪಾಲಗೌಡ)

ಸಿರುವ ಪ್ರಕಾರ ಈ ಕೈಗಾರಿಕೆಗಳಿಂದ ಬಂದಿರುವ ಉತ್ಪತ್ತಿ 423·19 ಲಕ್ಷ, ಇದಕ್ಕಾಗಿ ಖರ್ಚಾಗಿರುವುದು 431·92 ಲಕ್ಷ. ಇದನ್ನು ನೋಡಿದರೆ ನಮಗೆ ಇವುಗಳಿಂದ ಆಗಿರುವ ಉತ್ಪತ್ತಿಗಿಂತಲೂ ಖರ್ಚು ಹೆಚ್ಚಾಗಿತ್ತೆಂದು ಕಂಡುಬರುತ್ತದೆ. ಮೊಟ್ಟಮೊದಲನೆಯದಾಗಿ ನಮ್ಮ ಮಾನ್ಯ ಸಚಿವರು ದೊಡ್ಡ ದೊಡ್ಡ ಕೈಗಾರಿಕೆಗಳ ಪರವಾಗಿ ಒಂದೆರಡು ವಿಷಯಗಳನ್ನು ತಿಳಿಸಿದರು. ಆದರೆ ನಮ್ಮ ದೇಶದಲ್ಲಿ ಕೃಷಿಯೇ ಪ್ರಾಧಾನ್ಯವಾದ ಉದ್ಯೋಗ. ಆದಕಾರಣ ನಾವು ಯಾವ ಕೈಗಾರಿಕೆಯನ್ನೇ ಪ್ರಾರಂಭಿಸಲಿ ಅದು ನಮ್ಮ ಬಹುಸಂಖ್ಯಾತ ಜನರ ಮುಖ್ಯ ವೃತ್ತಿಯಾದ ವ್ಯವಸಾಯಕ್ಕೆ ಹೊಂದಿಕೊಂಡು ಹೋಗುವಂತೆ ಇರಬೇಕು. ಅಂತಹ ಕೈಗಾರಿಕೆಗಳಿಗೆ ನಾವು ಪ್ರೋತ್ಸಾಹ ನೀಡುವುದು ಒಳ್ಳೆಯದೆಂದು ನಾನು ಸೂಚಿಸುತ್ತೇನೆ. ನಮ್ಮ ಮಾರ್ಕೆಟ್ಟಿನಲ್ಲಿ ನಮ್ಮ ಜನರೇ ಉತ್ಪತ್ತಿಮಾಡತಕ್ಕಂಥ ಕೈಗಾರಿಕಾ ಸಾಮಾನುಗಳನ್ನು ನಮ್ಮ ದೇಶದ ಜನರು ಮುಂದೆ ಬಂದು ಕೊಂಡುಕೊಳ್ಳುವಂತಿರಬೇಕು. ಹೀಗೆ ನಾವು ಮೊದಲು ನಮ್ಮ ವ್ಯವಸಾಯದ ಭದ್ರತೆಯನ್ನು ನೋಡಿಕೊಂಡು ಅವುಗಳಿಗೆ ತಕ್ಕಂಥ ಕೈಗಾರಿಕೆಗಳನ್ನೇ ನಾವು ಅವಲಂಬಿಸುವುದು ಒಳ್ಳೆಯದು. ಆದರೆ ಇಲ್ಲಿಯವರೆಗೂ ಹಾಗೆ ನಡೆದಿಲ್ಲ. ಮೊದಲಿನಿಂದಲೂ ಕೇವಲ ಬಂಡವಾಳಶಾಹಿಗಳ ಮನೋಭಿಲಾಷೆಗೆ ತಕ್ಕಂತೆ ಕೇವಲ ಒಂದು ಲಾಭದ ದೃಷ್ಟಿಯನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡು ಭೋಗವಸ್ತುಗಳಿಗೆ ಸಂಬಂಧಿಸಿದ ಕೈಗಾರಿಕೆಗಳನ್ನೇ ಅಭಿವೃದ್ಧಿಗೆ ತರುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಆದರೆ ನಮಗೆ ಲಾಭದ ಮೇಲೆ ಹೆಚ್ಚಿನ ಗುರಿಯಿರಬೇಕಾಗಿದ್ದರೂ, ಕೇವಲ ದೊಡ್ಡ ದೊಡ್ಡ ಭಾರಿ ಕೈಗಾರಿಕೆಗಳನ್ನೇ ಸ್ಥಾಪಿಸುವುದರ ಜೊತೆಗೆ ನಾವು ಸಣ್ಣ ಸಣ್ಣ ಕೈಗಾರಿಕೆಗಳನ್ನೂ ಹೆಚ್ಚು ಹೆಚ್ಚಾಗಿ ಕೈಕೊಳ್ಳಲೇ ಬೇಕಾಗಿರುತ್ತದೆ. ಹೀಗೆ ಕೈಕೊಳ್ಳತಕ್ಕ ಸಣ್ಣಪುಟ್ಟ ಕೈಗಾರಿಕೆಗಳಿಗೆ ಸಾಧಾರಣ ಮೊತ್ತ ಹಾಕಿದರೆ ಸಾಕು. ಅಂಥ ಭಾರಿ ಬಂಡವಾಳವೇನೂ ಬೇಕಾಗಿಲ್ಲ. ಇಂಥ ಅಲ್ಪಸ್ವಲ್ಪ ಬಂಡವಾಳದ ಕೈಗಾರಿಕೆಗಳನ್ನೇ ಹಳ್ಳಿಯವರೂ ಕೂಡ ಅಪೇಕ್ಷೆಮಾಡುವುದು. ಹೀಗೆ ಮಾಡುವುದರಿಂದ ಈ ಕೈಗಾರಿಕೆಗಳೆಲ್ಲವೂ ಕೇವಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೇಂದ್ರಿಕೃತವಾಗುವುದೂ ಕೂಡ ತಪ್ಪಿ, ಅವು ವಿಕೇಂದ್ರಿಕೃತವಾಗಲು ಸಹಾಯವಾಗುತ್ತದೆ. ಅದರಲ್ಲೂ ಇಂಥ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸುವಾಗ ನಾವು ಮುಖ್ಯವಾಗಿ ನಮ್ಮ ಗಮನವನ್ನು ಈ ಗೃಹಕೈಗಾರಿಕೆಗಳ ಕಡೆಗೆ ಕೊಡಬೇಕಾಗಿದೆ. ಈಗಾಗಲೇ ಮೈಸೂರು ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ಫ್ಯಾಕ್ಟರಿಗಳೂ, ಕೈಗಾರಿಕಾ ಕಾರ್ಖಾನೆಗಳೂ ಇರುತ್ತವೆ. ಇವುಗಳಲ್ಲಿ ಸರ್ಕಾರದ ಪರವಾಗಿ ನಡೆಯುತ್ತಿರುವ ದೊಡ್ಡ ದೊಡ್ಡ ಕೈಗಾರಿಕೆಗಳು ಯಾವಯಾವುವೆಂದರೆ—ಗಂಧದ ಎಣ್ಣೆಯ ಕಾರ್ಖಾನೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಪ್ಲಾಂಟ್, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್ಸ್‌ಷಾಪ್, ಗವ॥ ಸೋಪ್ ಫ್ಯಾಕ್ಟರಿ, ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು ಪೋರ್ಸಿಲೇನ್ ಫ್ಯಾಕ್ಟರಿ, ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಇತ್ಯಾದಿಗಳು ಬಹಳ ದೊಡ್ಡ ಕಾರ್ಖಾನೆಗಳೆಂದರೆ, ಭದ್ರಾವತಿ ಕಬ್ಬಿಣ ಕಾರ್ಖಾನೆ ಮತ್ತು ಮಂಡ್ಯದ ಸಕ್ಕರೆ ಕಾರ್ಖಾನೆ. ಇನ್ನೂ ಕೆಲವು ದೊಡ್ಡ ದೊಡ್ಡ ಕಾರ್ಖಾನೆಗಳಿವೆ. ಹೀಗೆ ನಾನಾ ಕೈಗಾರಿಕೆಗಳ ಬಗ್ಗೆ ನಾವು ಅಪಾರವಾದ ಹಣವನ್ನು ಹಾಕಿರುವುದರಿಂದ ಇವುಗಳನ್ನು ಸರಿಯಾಗಿ ಮ್ಯಾನೇಜ್ ಮಾಡುವುದಕ್ಕೂ ಇವುಗಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೂ ಈ ಕೈಗಾರಿಕೆಗಳಿಂದ ನಮಗೆ ಇನ್ನೂ ಹೆಚ್ಚಿನ ಲಾಭ ಬರುವಂತೆ ಮಾಡುವುದಕ್ಕೂ ಮತ್ತು ಇವುಗಳ ಬಗ್ಗೆ ಆಸಕ್ತಿಯಿಂದ ಜನರು ಕೆಲಸ ಮಾಡುವಂತೆ ಇವುಗಳಿಗೆ ಒಂದು ಹೆಚ್ಚಿನ ಪ್ರೋತ್ಸಾಹ ನೀಡತಕ್ಕ ದೃಷ್ಟಿಯಿಂದಲೂ ಮತ್ತು ಇವುಗಳನ್ನು ಒಂದು ಅಭಿವೃದ್ಧಿಮಾರ್ಗಲ್ಲಿದ ಸದಾ ನಡೆಯುವಂತೆ ಒಂದು ಸರಿಯಾದ ವ್ಯವಸ್ಥೆಯನ್ನು ಏರ್ಪಡಿಸುವುದಕ್ಕೂ ಒಂದು ಹೈ ಪವರ್ ಡೈರೆಕ್ಟರೇಟ್ ಬಾಡಿಯನ್ನು ಸರ್ಕಾರದವರು ಏರ್ಪಡಿಸುತ್ತೇವೆಂದು ಈ ಹಿಂದೆಯೇ ತಿಳಿಸಿದ್ದರು. ಆದರೆ ಅಂಥಾದ್ದು ಯಾವುದನ್ನೂ ಇಲ್ಲಿಯತನಕ ಮಾಡಿರುವಂತೆ ಕಂಡುಬರುವುದಿಲ್ಲ. ಈ ದಿವಸ ನಾವು ಈ ಮಂಡ್ಯ ಮತ್ತು ಭದ್ರಾವತಿ ಕಾರ್ಖಾನೆಗಳ ವಿಷಯದಲ್ಲಿ ಎಷ್ಟರ ಮಟ್ಟಿಗೆ ನಿಗಾ ಇಟ್ಟುಕೊಂಡಿದ್ದೇವೆಯೋ ಅಷ್ಟರ ಮಟ್ಟಿಗೆ ಅವುಗಳಿಂದ ನಮಗೆ ಫಾಯಿದೆಯೂ ಬರುತ್ತಿದೆ. ನಾವು ಹೆಚ್ಚಿಗೆ ನಿಗಾ ಇಟ್ಟಿದ್ದರೆ ಹೆಚ್ಚಿನ ಫಾಯಿದೆ ಹೊಂದಬಹುದಿತ್ತು. ನಾನು ಉದಾಹರಣೆಗೆ ಹೇಳುವುದಾದರೆ ಈ ಸಿಮೆಂಟ್ ಹಾಕತಕ್ಕ ಒಂದು ಸಣ್ಣ ಗೋಣೀಚೀಲದ ವಿಚಾರವನ್ನೇ ತೆಗೆದುಕೊಳ್ಳೋಣ. ಈ ಚೀಲಕ್ಕೆ ಕೊಡತಕ್ಕ ಹಣ ಅದೆಷ್ಟಾದೀತು ಎಂದು ನೋಡತಕ್ಕವರಿಗೆ ಇದೊಂದು ಸಣ್ಣ ವಿಚಾರವಾಗಿ ಕಂಡು ಬರಬಹುದು. ಆದರೆ ಇಂಥ ಸಣ್ಣಪುಟ್ಟ ಬಾಬುಗಳಲ್ಲಿಯೂ ಸಹ ಸರ್ಕಾರಕ್ಕೆ ಅಪಾರ ಲುಕ್ಸಾನಾಗತಕ್ಕ ಸಂಭವವಿದೆ. ಒಂದು ಗೋಣೀಚೀಲಕ್ಕೆ ಒಂದೂವರಾಣೆ ಕೊಡುವ ಕಡೆ ಎರಡಾಣೆ ಕೊಟ್ಟರೆ ಲಕ್ಷಾಂತರ ಚೀಲಗಳನ್ನು ಕೊಳ್ಳುವ ಕಡೆ ಸರ್ಕಾರಕ್ಕೆ ಲಕ್ಷಾಂತರಗಟ್ಟಲೇ ಲುಕ್ಸಾನಾಗುತ್ತದೆ. ಆದಕಾರಣ ಶ್ರೀ ಮ್ಯಾಸ್ಕರನ್‌ಹ್ಯಾಸ್‌ರವರು ತಿಳಿಸಿದಂತೆ ಈ ಬಗ್ಗೆ ನಾವು ಒಂದು Business ದೃಷ್ಟಿಯಿಂದ ಕೆಲಸಮಾಡತಕ್ಕದ್ದು ಬಹಳ ಮುಖ್ಯವಾದ ವಿಷಯ. ಆದರೆ ಲಾಭ ಹೊಂದಬೇಕೆಂಬ ಉದ್ದೇಶವಷ್ಟೇ ಸರ್ಕಾರಕ್ಕೆ ಇರಬೇಕೆಂದಲ್ಲ. ಅದರ ಜೊತೆಗೆ ಕೇಳುವವರ ಮತ್ತು ಕಾರ್ಮಿಕರ ಏಳಿಗೆಯ ಉದ್ದೇಶ ಕೂಡ ಇರಬೇಕು. ಆದರೆ ಸರ್ಕಾರದವರಿಗೆ ಒಂದು ಮಾತು ಹೇಳುವುದಾದರೆ ಕೇವಲ ಲಾಭಕ್ಕಾಗಿಯೇ ಸರ್ಕಾರ ಅವುಗಳನ್ನು ಮಾಡುವುದಿಲ್ಲವಾದರೂ ಅವರು ಆ ಕಾರ್ಖಾನೆಗಳಿಗಾಗಿ ನೇಮಿಸಿಕೊಳ್ಳತಕ್ಕ, ಸಿಬ್ಬಂದಿಗಾಗಿ ಕೊಡತಕ್ಕ, ಸಂಬಳ ಸಾರಿಗೆಗಳನ್ನು ಹೆಚ್ಚಿಸದಂತೆ ನೋಡಿಕೊಂಡು ಇರತಕ್ಕ ಸಿಬ್ಬಂದಿಯಲ್ಲೇ ಇನ್ನೂ ಹೆಚ್ಚಿನ ಉತ್ಪನ್ನ ಬರುವಂತೆ ಎಫಿಷಿಯಂಟಾಗಿ ಕೆಲಸ ನಡೆಯುವಂತೆಯೂ ಮತ್ತು ಲುಕ್ಸಾನಾಗದಂತೆಯೂ ಅವುಗಳನ್ನು ನಡೆಸತಕ್ಕದ್ದು ಸರ್ಕಾರದ ಅತ್ಯಗತ್ಯವಾದ ಕೆಲಸ.

ಇನ್ನು ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಬೇಕೆಂಬ ಪ್ರಶ್ನೆ ಬಂದಿದ್ದಾಗ, ಶಿವಮೊಗ್ಗದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನೂ ಮತ್ತು ಇಂಪ್ಲಿಮೆಂಟ್ ಫ್ಯಾಕ್ಟರಿಯನ್ನೂ ಸ್ಥಾಪಿಸುವುದಕ್ಕೆ ಸ್ಥಳ ಸಹ ನೋಡಲಾಗಿತ್ತು. ಆದರೆ ಸರ್ಕಾರದವರು ಏತಕ್ಕೋ ಅವುಗಳನ್ನು ಆ ರೀತಿ ಇನ್ನೂ ಕೈಗೊಂಡಿಲ್ಲ. ಆದರೆ ನಮ್ಮ ಸರ್ಕಾರದವರು ಕೇಂದ್ರದವರು ಹೇಳುವ ರೀತಿ ಕೂಡ ಬೇಕಾಗಿರುತ್ತದೆಯೆಂದು ಹೇಳಬಹುದು. ಸಿಂದ್ರಿ ಫರ್ಟಿಲೈಜರ್ಸ್ ಫ್ಯಾಕ್ಟರಿಯ ಮಾದರಿಯಲ್ಲಿ ಒಂದು ಫರ್ಟಿಲೈಜರ್ಸ್ ಫ್ಯಾಕ್ಟರಿಯನ್ನು ಭದ್ರಾವತಿಯಲ್ಲಿ ಸ್ಥಾಪಿಸಬೇಕೆಂದಿದ್ದರು. ಆದರೆ ಆ ಪ್ರಯತ್ನಗಳೊಂದೂ ಸಾಗುತ್ತಿರುವಂತೆ ಕಂಡುಬರುವುದಿಲ್ಲ. ಆದರೆ

ಈ ದಿವಸ ಇವುಗಳನ್ನು ವಿಕೇಂದ್ರೀಕರಣಮಾಡುವುದಕ್ಕೆ ಬದಲಾಗಿ ಸರ್ಕಾರದವರಿಗೆ ಎಲ್ಲಿ ರಸ್ತೆಗಳು, ರೈಲ್ವೆಗಳ ಸೌಕರ್ಯ ಇರುತ್ತವೋ ಮತ್ತು ಎಲ್ಲಿ ಕೂಲಿಗಾರರು ಹೆಚ್ಚಾಗಿ ಸಿಕ್ಕುತ್ತಾರೋ ಮತ್ತು ಎಲ್ಲಿ ಅವರಿಗೆ ಹೆಚ್ಚಿನ ಸೌಕರ್ಯಗಳಿರುತ್ತವೆಯೋ ಮತ್ತು ಎಲ್ಲಿ ಅವರಿಗೆ ಇವುಗಳ ಆಡಳಿತವನ್ನು ನೇರವಾಗಿ ನೋಡಿಕೊಳ್ಳಲು ಅವಕಾಶವಿರುತ್ತದೋ ಅಂಥ ಕಡೆಗಳಲ್ಲೇ ಸ್ಥಳಗಳನ್ನು ಆರಿಸಿಕೊಳ್ಳುತ್ತಾರೆ. ಈ ಕಾರಣಗಳಿಂದ ಆ ಎಲ್ಲಾ ಕೈಗಾರಿಕೆಗಳೂ ಒಂದೇ ಕಡೆ ಒಟ್ಟುಗೂಡಲು ಅವಕಾಶವಾಗಿದೆ. ಆದರೆ ಎಲ್ಲಿ ಆಯಾ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾಮಾಲು ದೊರೆಯುತ್ತದೆಯೋ ಅಂಥ ಕಡೆಗಳಲ್ಲಿ ಆ ಕೈಗಾರಿಕೆಗಳನ್ನು ಪ್ರಾರಂಭಿಸಿ, ಅಲ್ಲಿನ ಜನರಿಗೆ ಒಂದು ಕೂಲಿ ಸೌಕರ್ಯ ಒದಗುವಂತೆ ಮಾಡತಕ್ಕದ್ದು ಅತ್ಯಗತ್ಯವಾಗಿರುತ್ತೆಂದು ನಾನು ಸಲಹೆ ಮಾಡುತ್ತೇನೆ.

ಇತ್ತೀಚೆಗೆ ಲಾಭದಾಯಕವಾಗಿಲ್ಲ ಎಂಬ ವಾದದ ಮೇಲೆ ಕೆಲವು ಕಾರ್ಖಾನೆಗಳನ್ನು ಮುಚ್ಚಿರುವುದು ಮತ್ತು ಮುಚ್ಚಲು ಯೋಚಿಸಿರುವುದನ್ನು ಕೇಳಿದ್ದೇನೆ ಉದಾಹರಣೆಗೆ ಬೆಂಗಳೂರಿನ ಸೂರ್ಯೋದಯ ಮಿಲ್ಸ್, ಪ್ಲೈವುಡ್ ಫ್ಯಾಕ್ಟರಿ ಮತ್ತು ಉರಿಗಾಂ ಚಿನ್ನದ ಗಣಿ ಇತ್ಯಾದಿ. ಆ ಮಿಲ್ ಅಥವಾ ಉದ್ಯಮ ಯಾರದೇ ಆಗಿರಲಿ—ಖಾಸಗಿಯವರದೇ ಆಗಿರಲಿ ಅಥವಾ ಸರ್ಕಾರದವರದೇ ಆಗಿರಲಿ ಅಥವಾ ಜಾಯಿಂಟ್ ಸ್ಟಾಕ್ ಕಂಪೆನಿಯವರದೇ ಆಗಿರಲಿ—ಹಾಗೆ ಮುಚ್ಚುವಾಗ ಅಲ್ಲಿಯ ಕಾರ್ಮಿಕರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಬಂಡವಾಳಗಾರರು ಈ ಕಂಪೆನಿ ಮುಚ್ಚಿದರೆ ಮತ್ತೊಂದು ಕಂಪೆನಿ ಪ್ರಾರಂಭಿಸುತ್ತಾರೆ. ಆದರೆ ಹೀಗೆ ಮುಚ್ಚುವುದರಿಂದ ಕಾರ್ಮಿಕರಿಗೆ ತುಂಬ ತೊಂದರೆಯಾಗುತ್ತದೆ. ಆದಕಾರಣ ಇಂಥ ಕೈಗಾರಿಕೆಗಳ ಜವಾಬ್ದಾರಿಯನ್ನೂ ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರವೇ ಹೊರಬೇಕಾಗಿದೆ.

ಆದರೆ ನಾನು ಮತ್ತೊಂದು ಅಂಶವನ್ನು ಸರ್ಕಾರದವರ ಮತ್ತು ಈ ಸಭೆಯ ಗಮನಕ್ಕೆ ತರಬೇಕಾಗಿದೆ. 1942ರಲ್ಲಿ ಒಂದು Ferro Alloys Plantನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಅಂಥ ಯಂತ್ರ ಇಂಡಿಯಾ ದೇಶದಲ್ಲೇ ಮತ್ತೊಂದಿಲ್ಲವೆನ್ನಬಹುದು. This is the only plant of its kind in the whole of India ಎಂದು ಹೇಳಲಾಗಿದೆ. ಇಂಥ ಒಂದು ಪ್ಲಾಂಟನ್ನು ಈಗ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಭದ್ರಾವತಿ ಕಂಪೆನಿಗೆ ಸಾಗಿಸಬೇಕೆಂದು ಪ್ರಯತ್ನಮಾಡಲಾಗುತ್ತದೆಯೆಂದು ನಾನು ಕೇಳಿದ್ದೇನೆ. ಆದರೆ ಅದು ಎಷ್ಟರಮಟ್ಟಿಗೆ ಅವಶ್ಯಕವೋ ನನಗೆ ತಿಳಿಯದು. ಇಷ್ಟೇ ಅಲ್ಲದೆ ಅಲ್ಲಿ ಲಕ್ಷಾಂತರ ರೂಪಾಯಿಗಳ ಕಲ್ಲಿದ್ದಲು ಸಹ ಬಿದ್ದು ಹಾಳಾಗಿ ಹೋಗುತ್ತಿದೆಯೆಂದು ತಿಳಿದು ಬಂದಿದೆ. ಹಾಗೆ ಒಂದು ವೇಳೆ ಆ ಪ್ಲಾಂಟನ್ನು ಸಾಗಿಸಲೇ ಬೇಕಾದುದು ಅನಿವಾರ್ಯವೆಂದು ಕಂಡು ಬಂದರೆ ಅಲ್ಲಿಯ ಕಾರ್ಮಿಕರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕು.

ಹೀಗೆ ಕೈಗಾರಿಕೆಗಳನ್ನು ನಾವು ಮುಚ್ಚುವುದಕ್ಕಾಗಲಿ ಅಥವಾ ಅವುಗಳಿಂದ ಲುಕ್ಸಾನು ಹೊಂದುವುದಕ್ಕೆ ಆಗಲಿ ಅವಕಾಶಕೊಡಬಾರದು. 6 ಕೋಟಿ ರೂಪಾಯಿಗಳ ಮ್ಯಾನೇಜ್‌ಮೆಂಟ್ ಖರ್ಚಿಗೆ ಸರಿಯಾಗಿ 6 ಕೋಟಿ ರೂಪಾಯಿಗಳ ಉತ್ಪನ್ನ ಬರುವಂತೆ ವ್ಯವಹಾರಮಾಡಿದರೆ ಸಾಕು ಎಂಬ ಭಾವನೆ ಇರುವುದು ಸರಿಯಲ್ಲ. ಇವುಗಳನ್ನು ಯಾವಾಗ ಒಂದಾವರ್ತಿ ಸ್ಥಾಪನೆಮಾಡಲಾಯಿತೋ ಅಂದಿನಿಂದಲೂ ಇವುಗಳನ್ನು ಅಭಿವೃದ್ಧಿಗೆ ತಂದು ಅವುಗಳನ್ನು ಹೆಚ್ಚು ಹೆಚ್ಚಾಗಿ ಬೆಳಸಬೇಕೇ ಹೊರತು ಅವುಗಳು ಯಾವ ಕಾರಣದಿಂದಲೂ ಕುಂಠಿತಗೊಳ್ಳಲು ಅವಕಾಶಕೊಡಬಾರದು.

ಇನ್ನು ಈ ಗೃಹಕೈಗಾರಿಕೆಗಳ ವಿಚಾರ ತಿಳಿಸಬೇಕೆಂದರೆ, ಇವು ಈಗಾಗಲೇ ಅನೇಕ ಜನರ ಕೈಬಿಟ್ಟು ಹೋಗಿವೆ. ನಮ್ಮಲ್ಲಿ ಈ ಗೃಹಕೈಗಾರಿಕೆಗೆ ಅತ್ಯಗತ್ಯವಾದ ಬೆತ್ತ, ಬಿದಿರು, ಬೆಂಡು, ಗಂಧ ಇತ್ಯಾದಿ ಕಚ್ಚಾ ಮಾಲುಗಳು ಹೇರಳವಾಗಿ ದೊರೆಯುತ್ತವೆ. ಓಲೇಗರಿ ನಮ್ಮಲ್ಲಿ ವಿಶೇಷವಾಗಿದೆ. ಚೈನ ಜಪಾನ್ ದೇಶಗಳಲ್ಲಿ ತಯಾರಿಸುವಂಥ ಛತ್ರಿಗಳನ್ನು ನಾವೂ ಸಹ ಇಲ್ಲಿ ಈ ಓಲೇಗರಿಗಳಿಂದ ತಯಾರಿಸಬಹುದು. ನಮ್ಮ ಮಲೆನಾಡಿನಲ್ಲಿ ಈಗಲೂ ಈ ಓಲೇಗರಿಗಳ ಛತ್ರಿ ಚಾಲ್ತಿಯಲ್ಲಿರುತ್ತವೆ. ಹೀಗೆ ನಮ್ಮಲ್ಲಿ ಅನೇಕ ಗೃಹಕೈಗಾರಿಕೆಗಳಿಗೆ ಅತ್ಯವಶ್ಯಕವಾದ ಮಾಲು ದೊರೆಯುತ್ತಿದ್ದರೂ ಜನರು ಅವುಗಳಿಂದ ಯಾವ ಉತ್ಪತ್ತಿಯನ್ನೂ ಪಡೆಯದೆ ಹಾಳಾಗುತ್ತಿದ್ದಾರೆ. ಇದಕ್ಕೆಲ್ಲಾ ಮೂಲಕಾರಣ ಜನರಿಗೆ ಉತ್ತೇಜನವಿಲ್ಲ; ನಮ್ಮ ದೇಶದ ಮಾಲುಗಳಿಗೆ ಮಾನ್ಯತೆಯಿಲ್ಲ. ಹೀಗಾಗಿ ನಮ್ಮ ದೇಶ ಮುಂದುವರಿಯಲು ಸಾಧ್ಯವಿಲ್ಲ. ಶಿವಮೊಗ್ಗ ಜಿಲ್ಲಾ ಸಾಗರ ಸೊರಬದಲ್ಲಿ ಗುಡಿಗಾರರು ಗಂಧದ ಮರದಲ್ಲಿ ಅನೇಕ ಸಾಮಾನುಗಳನ್ನೂ ಮತ್ತು ತೀರ್ಥಹಳ್ಳಿಯ ಕವಲೇದುರ್ಗದಲ್ಲಿ ಬಳಪದ ಕಲ್ಲಿನ ಗಡಿಗೆ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಹೀಗೆ ಯಾವ ಯಾವ ಪ್ರದೇಶದಲ್ಲಿ ಕಚ್ಚಾ ಮಾಲುಗಳು ಅಗ್ಗವಾಗಿ ದೊರೆಯುತ್ತವೆಯೋ ಅಂಥ ಕಡೆಗಳಲ್ಲಿ ಜನರು ಈಗಲೂ ಕೂಡ ಅವರಿಗೆ ಮೊದಲಿಂದಲೂ ತಿಳಿದುಬಂದಿರತಕ್ಕಂಥ ಒಂದು ಕ್ರೂಡ್ ರೀತಿಯಲ್ಲಿ ಕೆಲವು ಸಾಮಾನುಗಳನ್ನು ತಯಾರುಮಾಡುತ್ತಿದ್ದಾರೆ. ಆದರೆ ಈ ಕೈಗಾರಿಕೆಯನ್ನು ಇಂಪ್ರೂವ್‌ಮಾಡಬೇಕಾಗಿದ್ದರೆ ಅವರಿಗೆ ಬಂಡವಾಳಬೇಕು. ಇಂಥ ಸಂದರ್ಭದಲ್ಲಿ ಸರ್ಕಾರದವರು ಅವರಿಗೆ ಕೊಂಚಮಟ್ಟಿಗೆ ಬಂಡವಾಳವನ್ನು ಒದಗಿಸುವುದು ಒಳ್ಳೆಯದು.

ಇನ್ನು ನಮ್ಮಲ್ಲಿಯೇ ಒಂದು ಫರ್ಟಿಲೈಜರ್ಸ್ ಫ್ಯಾಕ್ಟರಿಯನ್ನು ತೆರೆಯಲು ಅನುಕೂಲವಿದೆ, ಆ ಸಿಂದ್ರಿ project ಫರ್ಟಿಲೈಜರ್ಸ್ ಮಾದರಿಯಲ್ಲೇ ನಾವೂ ಪ್ರಾರಂಭಮಾಡಬೇಕು.

4 P.M.

ಆದ್ದರಿಂದ, ಇವೊತ್ತು ನಮ್ಮ ಗೃಹ ಕೈಗಾರಿಕೆಗಳು ಬಹಳ ನಶಿಸಿ ಹೋಗಿವೆಯೆಂದು ಹೇಳಬೇಕು. ನೆಯ್ಗೆಯಾಗಲಿ, ಕಮ್ಮಾರಿಕೆಯಾಗಲಿ ಹಳ್ಳಿಗಳಲ್ಲಿ ಏನು ಕೈಗಾರಿಕೆಗಳು ನಡೆಯುತ್ತಿದ್ದುವೋ ಅವೆಲ್ಲಾ ಇಂದು ಪ್ರೋತ್ಸಾಹವಿಲ್ಲದೆ, ಉತ್ತೇಜನವಿಲ್ಲದೆ, ಹಾಗೆಯೇ ನಶಿಸುತ್ತಿವೆ. ಭತ್ತ ಕುಟ್ಟುವ ಒನಕೆ ಇಂದು ಅಟ್ಟ ಸೇರಿದೆ. ಎಷ್ಟೋಕಡೆ ಒನಕೆಗಳೇ ಸಿಕ್ಕುವುದಿಲ್ಲ. ಹೀಗಾಗಿ ಪರಾವಲಂಬನೆಯಿಂದ ಯಾವ ವಸ್ತು ಬೇಕಾದರೂ ಪರರ ಕಡೆಯೇ ನೋಡಬೇಕಾದ ನಿಸ್ಸಹಾಯಕ ಪರಿಸ್ಥಿತಿ ನಮಗೆ ಬಂದಿದೆ! ಆದರೆ ತಮ್ಮ ಪಾನ ನಿರೋಧ ನೀತಿಯಾದಾಗಿನಿಂದ ಇನ್ನೊಂದು ಗೃಹ ಕೈಗಾರಿಕೆಯೆನಿಸಿಕೊಂಡದ್ದಾಗಿ, ನಮ್ಮಲ್ಲೀಗ ಹೆಚ್ಚಾಗಿ ನಡೆಯುತ್ತಿರುವುದೆಂದರೆ, ಕಳ್ಳಬಟ್ಟಿ ಸಾರಾಯಿ ತಯಾರಿಕೆ ಎಂದು ಹೇಳಬಹುದು.

Mr. SPEAKER.—Your time is up-Sri G. Narayana Gowda.

ಶ್ರೀ ಜಿ. ನಾರಾಯಣಗೌಡ (ಮುಳಬಾಗಿಲು—ಶ್ರೀನಿವಾಸಪುರ).—ಅಧ್ಯಕ್ಷರೇ, ಕೈಗಾರಿಕೆಯ ಇಲಾಖೆಯ ವಿಚಾರವಾಗಿ 6,03,46,000 ರೂಪಾಯಿಗಳ ಡಿಮ್ಯಾಂಡನ್ನು ಸರ್ಕಾರದವರು ಸಭೆಯ ಮುಂದಿಟ್ಟಿದ್ದಾರೆ. ಮಾನ್ಯ ಸ್ನೇಹಿತರನೇಕರು ಕೈಗಾರಿಕೆಗಳ ವಿಷಯದಲ್ಲಿ ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ನಮ್ಮ ಸರ್ಕಾರದವರು ಈ ಕೈಗಾರಿಕೆಗಳೆಲ್ಲವನ್ನೂ ಬೆಂಗಳೂರು ಮತ್ತು ಅದರ ಸುತ್ತಮುತ್ತಲೂ ಕೇಂದ್ರೀಕರಿಸಿ ಅದರ ದುಷ್ಪರಿಣಾಮಗಳನ್ನೂ ಸಹ ನೋಡುವವರಾಗಿದ್ದಾರೆ. ಏಕೆಂದರೆ ಈ ಪಟ್ಟಣ ಅನೇಕ ಹಳ್ಳಿಗರನ್ನು ಆಕರ್ಷಿಸಿ ವಿಶಾಲವಾಗಿ ಬೆಳೆಯುತ್ತಿದೆ. ಅವರಿಗೆ ಇಲ್ಲಿರುವ ಸೌಕರ್ಯಗಳನ್ನೂ, ಸೌಲಭ್ಯಗಳನ್ನೂ ನೋಡಿ ಮತ್ತೆ ಅವರು ತಮ್ಮ ಊರುಗಳಿಗೆ ಹಿಂತಿರುಗುವುದಿಲ್ಲವೆಂಬುದೂ ತಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಹೀಗಾಗಿ ನಮ್ಮ ದೇಶದ ಬೇರೆ ಬೇರೆ ಗೃಹ ಕೈಗಾರಿಕೆಗಳೂ ಹಾಗೂ ಗ್ರಾಮ ಕೈಗಾರಿಕೆಗಳೂ ನಾಶ ಹೊಂದುತ್ತಿವೆ ಯೆಂಬುದನ್ನೂ ತಿಳದುಕೊಳ್ಳಬೇಕಾಗಿದೆ. ಅಂಥದರಲ್ಲೂ ಈಗತಾನೇ ನಾವು ಕೇಳುತ್ತಿದ್ದೇವೆ, ಬೆಂಗಳೂರಿಗೆ ಸಮಾಪದಲ್ಲೇ ಮತ್ತೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವವರಾಗಿದ್ದಾರೆ ಎಂದು. ಇದೇ ವಿಷಯದಲ್ಲಿ ನಾನೂ ಒಂದು ಖೋತಾ ನಿರ್ಣಯವನ್ನೂ ತಂದಿದ್ದೇನೆ. ಅದೇನೆಂದರೆ, ಬೆಂಗಳೂರಿನ ಹತ್ತಿರ ಕೃಷ್ಣರಾಜಪುರದಲ್ಲಿ ಒಂದು fruit Preservation ಮತ್ತು Canning industry ಯನ್ನು ಏರ್ಪಡಿಸಬೇಕೆಂದು ಸರ್ಕಾರದವರು ಮನಸ್ಸುಮಾಡಿಕೊಂಡಿರುವುದು. ಈ ರೀತಿಯಾಗಿ ಕೈಗಾರಿಕೆಗಳನ್ನು ಕೇಂದ್ರೀಕರಣ ಮಾಡುವುದರಿಂದ ಏನು ತೊಂದರೆಯಾಗುತ್ತದೆಂಬುದನ್ನು ನಾನು ಹೇಳಬೇಕಾಗಿಲ್ಲ. ಅಲ್ಲದೆ ಈ ಪ್ರದೇಶದಲ್ಲಿ ಈ ಕೈಗಾರಿಕೆಯನ್ನು ಸ್ಥಾಪಿಸಲಿಕ್ಕೆ ಇರುವ ವಿಶೇಷ ಸೌಕರ್ಯ ಸೌಲಭ್ಯಗಳಾದರೂ ಏನೆಂಬುದನ್ನು ನೋಡೋಣ. ಬೆಂಗಳೂರು ಅಥವಾ ಅದರ ಸುತ್ತಮುತ್ತ ಎಷ್ಟು ಹಣ್ಣುಗಳನ್ನು ಬೆಳೆಯುತ್ತಿದ್ದಾರೆ, ಅಥವಾ ಮೈಸೂರು ದೇಶದಲ್ಲಿ ಇನ್ನೆಲ್ಲಾದರೂ ಈ ರೀತಿಯ ಸೌಲಭ್ಯವಿದೆಯೇ ಎಂಬುದನ್ನೂ ಪರೀಕ್ಷಿಸೋಣ.

ನಮ್ಮ ಜಿಲ್ಲೆಯಲ್ಲಿರುವ ಶ್ರೀನಿವಾಸಪುರ, ಮುಳಬಾಗಿಲು, ಚಿಂತಾಮಣಿ ಮತ್ತು ಕೋಲಾರ ಈ ನಾಲ್ಕು ತಾಲ್ಲೂಕುಗಳನ್ನು ಸೇರಿಸಿದರೆ, ಒಂದಾನೊಂದು ಸಂದರ್ಭದಲ್ಲಿ ಸಂಗ್ರಹಿಸಿರುವ ಅಂಕಿ ಅಂಶಗಳ ಪ್ರಕಾರ 10,000 ಎಕರೆ ಮಾವಿನಮರದ ತೋಪುಗಳು ಅಲ್ಲಿರುವುದಾಗಿ ಗೊತ್ತಾಗಿದೆ. ಇಂಥ ಸೌಲಭ್ಯವನ್ನು ಉಪಯೋಗಿಸಿಕೊಂಡು ನಮ್ಮ ಸರ್ಕಾರದವರು. ಈ ತಾಲ್ಲೂಕುಗಳಿಗೆ ಕೇಂದ್ರವಾಗಿರುವ ಶ್ರೀನಿವಾಸಪುರದಲ್ಲಿ ಈ ಕೈಗಾರಿಕೆಯನ್ನು ಸ್ಥಾಪನೆಮಾಡುವುದರಿಂದ ಕೈಗಾರಿಕೆಗಳ ವಿಕೇಂದ್ರೀಕರಣ ನೀತಿಗೂ ಅನುಸಾರವಾಗಿರುತ್ತದೆ; ಅಲ್ಲಿನ ಜನರಿಗೂ ಒಂದು ಹೆಚ್ಚಿನ ಸೌಕರ್ಯ ಸೌಲಭ್ಯಗಳನ್ನು ಒದಗಿಸಿದಂತಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ಈ ಕೈಗಾರಿಕೆಯನ್ನು ಶ್ರೀನಿವಾಸಪುರದಲ್ಲಿ ಸ್ಥಾಪನೆಮಾಡುವುದಕ್ಕೆ ಇನ್ನೂ ಮನಸ್ಸು ಮಾಡಿರದಿದ್ದರೆ ಈಗಲಾದರೂ ಮನಸ್ಸುಮಾಡಬೇಕೆಂದು ನಾನು ಒತ್ತಾಯಮಾಡುತ್ತಾ ಈ ಸಂದರ್ಭದಲ್ಲಿ ಕೊನೆಯದಾಗಿ, ನಮ್ಮಲ್ಲಿಗೆ ಈಗ. ಕೆಲವು ವರ್ಷಗಳ ಹಿಂದೆ ಬಂದ ಕೆಲವು ಕೈಗಾರಿಕೋದ್ಯಮಿಗಳು ನಮ್ಮ ಕೈಗಾರಿಕೆಗಳ ವಿಷಯದಲ್ಲಿ ಏನು ಹೇಳಿದ್ದಾರೆಂಬುದನ್ನು ಮಾತ್ರ ಈ ಸಭೆಯ ಮುಂದಿಟ್ಟು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ. ಜಪಾನಿನಿಂದ ಬಂದಿದ್ದಂಥ ಕೈಗಾರಿಕೋದ್ಯಮಿಗಳಿಗೆ ಇಲ್ಲಿನ ನಾನಾ ಕೈಗಾರಿಕಾ ಕಾರ್ಖಾನೆಗಳನ್ನೂ ತೋರಿಸಿ ಕಡೆಯಲ್ಲಿ ಅವರಿಗೊಂದು ಸತ್ಕಾರ ಕೂಟವನ್ನೇರ್ಪಡಿಸಿದ್ದು, ಅವರನ್ನು ನಮ್ಮ ಕೈಗಾರಿಕೆಗಳು ಹೇಗಿವೆ ಎಂದು ಕೇಳಿದ್ದರಲ್ಲಿ, ಅವರು "Huge capital, fine buildings, big machinery, but no production" ಎಂದು ನಾಲ್ಕು ಮಾತುಗಳಲ್ಲಿ ತಮ್ಮ ಅಭಿಪ್ರಾಯವನ್ನು ಸಂಕ್ಷೇಪವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಇದನ್ನು ನಮ್ಮ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಕೈಗಾರಿಕೆಗಳನ್ನು ಹೆಚ್ಚಿಗೆ ಉತ್ಪತ್ತಿಯಿಲ್ಲದೆ, ಹೆಚ್ಚಿಗೆ ಲಾಭವಿಲ್ಲದೆ ಮತ್ತು ನಾವು ಹಾಕುವ ಹಣಕ್ಕೆ ಸರಿಯಾದ ಪ್ರತಿಫಲವಿಲ್ಲದೆ ಹೋಗಿರುವ ಅಂಶದ ಕಡೆಗೆ ಹೆಚ್ಚಿಗೆ ನಿಗಾ ಕೊಡಬೇಕೆಂದು ಹೇಳುತ್ತೇನೆ.

ಸಾಮಾನ್ಯವಾಗಿ ನಾವು ಆಗಾಗ್ಗೆ ನೋಡುತ್ತಿದ್ದೇವೆ, ನಮ್ಮ ದೇಶದ ಕೆಲವು ಭಾಗಗಳಲ್ಲಿ ಕ್ಷಾಮ ತಲೆದೋರುತ್ತಲೇ ಇರುತ್ತದೆ. ಈ ಕ್ಷಾಮ ಪರಿಹಾರಕ್ಕೆ, ಈ ಮಾನ್ಯ ಸಭೆಯ ಅನೇಕ ಮಾನ್ಯಮಿತ್ರರು ನಮ್ಮ ಸರ್ಕಾರದವರಿಗೆ ತಿಳಿಸಿರುವ ಹಾಗೆ, ಸಣ್ಣಸಣ್ಣ ಗೃಹ ಕೈಗಾರಿಕೆಗಳನ್ನು ಅಲ್ಲಲ್ಲಿ ಸ್ಥಾಪನೆ ಮಾಡುವುದು ಸರ್ಕಾರದವರ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಏಕೆಂದರೆ, ಗೃಹ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯುತ್ತಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಗೃಹ ಕೈಗಾರಿಕೆಗಳಲ್ಲಿ ಹೆಚ್ಚಿನ ಅನುಭವವಿರುವವರನ್ನಾದರೂ ಸೇರಿಸಿ ಒಂದು ಸಮಿತಿಯನ್ನು ಮಾಡಿದರೆ, ಗೃಹ ಕೈಗಾರಿಕೆಗಳನ್ನು ಕ್ಷಾಮದ ಪ್ರದೇಶಗಳಲ್ಲಿ ಯಾವರೀತಿ ಪ್ರಾರಂಭ ಮಾಡಬೇಕೆಂಬುದನ್ನು ಸರ್ಕಾರದ ಗಮನಕ್ಕೆ ತರಲು ಅವಕಾಶವಾಗುತ್ತದೆ. ಆ ರೀತಿಮಾಡಿ, ಸರ್ಕಾರದವರು ಕೋಲಾರ, ಚಿತ್ರದುರ್ಗ, ತುಮಕೂರು ಮುಂತಾದ ಕಡೆಗಳಲ್ಲಿ ಹೆಚ್ಚು ಹೆಚ್ಚು ಗೃಹ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದವರನ್ನು, ಕೇಳಿಕೊಳ್ಳುತ್ತೇನೆ.

Mr. SPEAKER.—What time does the Hon'ble Minister wish to take?

Sri H. SIDDAVEERAPPA.—I hope the House will bear with me. I may take about half an hour now.

Sir, I am glad the Hon'ble Members who partook in this general debate have thrown a good deal of light on the working of this Department. Very many suggestions have been thrown and many Hon'ble Members have criticised the Department with an eye for the development of the working of this Department, though of course, as is usual with him, my friend Sri Gopala Gowda had a different note to strike. First of all, I should like to make the position quite clear that with regard to the anxiety of the Hon'ble Members that this Department must become a

good revenue earning department and that all the facilities that we have in Mysore must be fully harnessed. So far as that position is concerned, I may at once concede and say there is no difference of opinion between the Hon'ble Members and the Government. I am entirely one with them. This department has developed to a very large extent from the last one or two decades and as my friend Mr. Mascernhas who has an intimate insight into the working of the Industries Department in the State, has said, a time has come when we have to review the entire working and try to see that the department functions properly and that any defects that we find are remedied at a very early time. So far as the Government industries are concerned, I do not like to take much of your valueable time; I did not give some of the figures when I commenced my speech when the demand was moved. I may bring to the notice of this Honourable House, so far as the facts are concerned, that the Mysore Iron and Steel Works with a capital of Rs. 492.48 lakhs earned a net profit of Rs. 32.20 lakhs in the year 1951-52 and in 1952-53, my figures are only up to January 1953—we have earned about Rs. 30 lakhs. In the case of Government Electric Factory, of course I have to say that it is not working to the entire satisfaction of the Government and we have not been able to get as much profit as we ought to get there for various reasons which I need not dilate at this time; we have invested a very heavy sum—we have invested Rs. 64.67 lakhs in this industry and last year we got a net profit of only Rs. 56,000 and this year we expect slightly less than what we got last year. Government Porcelain Factory with an invested capital of Rs. 15.95 lakhs, in the year 1951-52 earned a net income of Rs. 1,83,900 and this year up to January 1953, Rs. 68,734. Government Soap Factory with a capital investment of Rs. 5.97 lakhs, last year earned a net income of Rs. 2,87,000 and this year, up to January figure, Rs. 1,94,000. Central Industrial Workshop, Bangalore with a capital of Rs. 2,96,000 earned a net income of Rs. 24,826 last year and this year Rs. 18,700. Sandal Oil Factory with a capital of Rs. 17,20,000 earned a net income of Rs. 40,62,000 ast year and this year up to January, Rs. 34 lakhs. Government Silk Weaving Factory with a capital of Rs. 7,82,000 earned a net income of Rs. 90,091 last year and this year Rs. 9,888. Government Dichromate Factory with Rs. 6,38,000 capital earned a net income of Rs. 6,520 last year and this year unfortunately it has still a downward tendency and the loss up to end of December was Rs. 31,386. In the case of Mysore Implements Factory with a capital of Rs. 7,81,000, the loss last year was Rs. 52,832 and this year Rs. 631 up to the end of January 1953. Government Silk Factory, Kankanhalli (Rs. 9,13,000 capital): last year the loss was Rs. 2,87,678 and this year we have not been able to get the figure because we have recently opened it, just a few months back. I have given these figures just to bring to the notice of this House the exact position and the way in which these industries have been developing or have been conducted and it will be readily seen that some of these industries, one or two of them, have fared rather badly and the reasons for it are not far to seek. So far as Hassan Implement industry is concerned, it is no doubt true that this industry for some time was not able to face some competition and we have tried to minimise the loss. The fact that the loss has been reduced very considerably this year clearly shows that we have been trying to improve the working of that Factory. I entirely agree with the suggestions of some of the Hon'ble Members that before we develop further, we will have to consolidate, and we will have to see that the whole house is set in order and that if any improvements are needed, all those things are attended to before thinking of further expansion of some of these industries. Already, we have

(SRI H. SIDDAVEERAPPA.)

invested a very heavy sum and the time has come when we have to consolidate the position and then think of taking any further step in the matter.

With regard to the cottage industries, several Hon'ble members, including my friends Sri M. Linganna, Sri Narayana Gowda and several others, stressed the importance of the cottage industries for the State. Government are not unmindful of the needs of the State for the development of cottage industries. But we have to reckon with the facts as to how far the cottage industries will be able to withstand the onslaughts of the several big industries, how far they will be able to stand on their legs, and how far can the State go on giving them artificial respiration every time. These are matters that will have to be very seriously looked into.

I entirely agree with my friend, Sri Chikkalingiah, that cottage industries will have to be developed and nursed. But there are certain other factors, namely—in the cost of production, these cottage industries have not been able to face the very severe competition from the big industries. Sir, only yesterday, the Textile Enquiry Committee was in Bangalore. I met them. With regard to the Cottage industries and Handloom Weavers industries, I am told that about ten per cent of the population depend on these cottage industries. They have not been able to face severe competition from the mills. That is the reason why the Government of India have also thought of enquiring into the matter and have thought of appointing a committee so that they might suggest any remedies whereby they will be able to give a permanent measure of relief to these cottage industries.

My friends brought to the notice of this House several other matters of local importance, but for want of time I will not be able to refer to all of them. Sri Mascarenhas gave me very valuable suggestions. Here I want to refer to one other important matter that has been referred to both by Sri Mascarenhas and Sri L. Siddappa. They referred to the recommendation of Sri Kasturbhai Lallubhai Committee and said, " How is it that the Government have not thought of appointing a high power directorate ? " Although there was a reference to it in the speech of the Rajpramukh in the previous session and although there was a sort of conceding of the point by the Government, by this time some other things happened beyond the control of this Government. That is, the Government of India enacted a legislation called the Industries Development and Regulation Act of 1951, which I already alluded to in one of the interpellations. It is found that so long as that Act is in force, there are several functionaries that have to be appointed under the Act. We find powers will be almost overlapping and the functions will be overlapping. Unless we have a definite picture of the committees that ought to be appointed under that Act, we cannot proceed further. That is the reason why Government have not taken any steps. Apart from the huge cost involved—if you work it up, it comes to three lakhs of recurring expenditure if we appoint a high power directorate—this is one of the reasons why Government have not taken immediate steps in the matter.

My friend, Sri Mascarenhas, referred to the managerial aspect of it. I am glad he gave me certain valuable suggestions and I will examine them in greater detail. I shall be deeply thankful to him if he is able to throw any further light in the matter.

Many other Hon'ble Members referred to cottage industries and I have already referred to them. Sri Madhavachar referred to the interests, of the labourers. I may assure him that it is in the earnest consideration of this Government that, so far as the labourers are concerned, wherever they have increased production they must have their just dues, what is justly due to them. It is with that

object in view, as the Hon'ble Member is aware and he is also a member of the committee of management there, we have given very liberal bonuses in the year 1951-52.

Sri Siddappa referred to what is called the starting of a sugar factory in Shimoga. We have so far spent about Rs. 25,000 and this Government did everything by way of exploratory work. But in the meanwhile we received a letter from the Government of India that the production of sugar in India is sufficient and that there is no need to start and instal any other new mill. My friend readily agrees that it is central subject and that we are guided by this fact. When the Government of India communicated to us that there is no further need for another factory at the present moment, it was inevitable that we could not think of taking any further step in that matter. That is the reason. It is not due to any lethargic condition on the part of the Government that we are not able to start the sugar factory. Let us hope for better days. That is all I can say.

My friend Sri Nagaraja Murthy referred to certain mismanagement in the Mandya Sugar Factory. I was not able to follow. He indulged in vague generalisations, if I may call them so. I would only tell him that so far as the Government are concerned, they are safeguarding very jealously their interests in the factory through their agency and they have got their own chairman. If any Hon'ble Member brings any concrete instance to the notice of the Government with regard to any mismanagement, the Government will not fail to look into the matter and examine it. Mere generalisation, in my opinion, is not of much avail.

With regard to cement bags, Sri Gopala Gowda mentioned something. I need not refer to all other factors he mentioned. With regard to cement bags, I may assure the Hon'ble Member that we require two lakhs of bags every month and the purchase department of the Works calls for quotations. Not only that, but we have got one responsible officer at the place where these bags are made available to us. If my friend wants to know whether we are businesslike or not, there is the cement company or corporation. Let him examine the prices to know whether what we are paying is more or is on an equal footing with the prices they are paying. Therefore, I very earnestly request my friend when making a suggestion to be true or to be at least true to facts. I shall only be obliged if he can examine it before he makes a statement on the floor of the House that there is so much loss. Any concrete suggestion that is made will always receive a welcome from me and I would request you to examine that question. I may tell him at once that so far as we are concerned, we take all possible steps to see that nothing is lost by way of unbusinesslike deal in the matter.

So far as the Ferro-Alloy Plant at Mysore is concerned, I will have to say one word. When it was started in Mysore during the time of the War, it was never made known that Mysore would be the permanent place for locating the factory. The only proper place is Bhadravati on account of the natural conditions. It was because power was not available in such quantity at Bhadravati as to make the installation of the plant, only as a temporary measure we installed it in Mysore. Now the conditions are favourable for locating that factory at Bhadravati and that is the reason why we have shifted it. We have shifted it not for any love of doing so. The cost of production will be appreciably lower if it is produced at Bhadravati. That is a factor which I cannot overlook. I may assure the Hon'ble Members that if there are any workers in Mysore who want to go and join in Bhadravati, I have not denied them to do so. I do not want the factory to be located just to accommodate the labourers

(SRI H. SIDDAVEERAPPA.)

because it is unremunerative. If the labourers want to go to Bhadravati, I have already issued instructions to absorb as much labour as possible.

My friend Sri Gopala Gowda referred to some of those Gudigar workers, and, I may assure him, it will receive the earnest attention of the Government. It is a very rare art and we do not want to allow it to go. We will give all help to that cottage industry which has earned an All-India reputation.

Mr. Narayana Gowda referred to the fruit preservation industry. I may assure that we have not taken any final steps or final decision in the matter. There is a jusitification as to why we thought of Krishnarajapuram in this behalf. Adjacent to this place, there is the tin industry. We want this tin for preserving the fruits and that is why we thought this to be the proper place. In a way we have been thinking whether to progress in the matter or not. We have not taken any decision in the matter.

Sir, these are some of the general problems that were raised by the Hon'ble Members. I am entirely in agreement with them in their suggestion that the Department of Industries must progress well and that the department must bring more revenues to the State. I may assure the House that every suggestion made by them will be weighed, examined and attempted to be implemented wherever it is possible.

Mr. SPEAKER.—The question is :

"That a sum not exceeding Rs. 6,03,46,000 be granted to the Government to defray the charges which will come in course of payment during the year ending 31st day of March 1954, in respect of 'Industries and Supplies (Except Sericulture)'."

The motion was adopted.

DEMAND No. 27—SERICULTURE.

43. (*a*)—4. SERICULTURE.

Mr. SPEAKER.—Motion moved :

"That a sum not exceeding Rs. 8,96,000 be granted to the Government to defray the charges which will come in course of payment during the year ending 31st day of March 1954, in respect of 'Sericulture'."

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯ ಬಹಳ ಮುಖ್ಯವಾದ ವ್ಯವಸಾಯ. ಈ ವ್ಯವಸಾಯದ ವಿಚಾರದಲ್ಲಿ.................................

Mr. SPEAKER.—I have already stated that Sri Mudlagiri Gowda and Sri Madappa may speak on this subject. You may hear them and make a statement at the end.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ರೇಷ್ಮೆ ವ್ಯವಸಾಯ ಮಾಡತಕ್ಕ ರೈತರಿಗೆ ಉತ್ತೇಜನ ಕೊಡಬೇಕೆಂಬ ವಿಚಾರದಲ್ಲಿ ನಾನು ಒಂದು ಖೋತಾ ನಿರ್ಣಯವನ್ನು ಕಳುಹಿಸಿದ್ದೇನೆ. ಈಗಾಗಲೇ ನಮ್ಮ ಮಾನ್ಯ ಮಂತ್ರಿಗಳು ಈ ಸಂಬಂಧದಲ್ಲಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಪ್ರಾರಂಭ ಮಾಡುತ್ತಾ ಇದು ಬಹಳ ಮುಖ್ಯವಾದ ವ್ಯವಸಾಯವೆಂದು ಹೇಳಿ ಪ್ರಾರಂಭ ಮಾಡಿದರು. ಈಗಾಗಲೇ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳ ಸಂಬಂಧವಾದ ಖೋತಾ ನಿರ್ಣಯಗಳ ಮೇಲೆ ಅನೇಕ ಮಾನ್ಯ ಸದಸ್ಯರು ಬಹಳ ಮಾತನಾಡಿದ್ದಾರೆ. ಗೃಹಕೈಗಾರಿಕೆಗಳಲ್ಲಿ ರೇಷ್ಮೆ ವ್ಯವಸಾಯ ಅತಿ ಮುಖ್ಯವಾದ ಸ್ಥಾನವನ್ನು ಪಡೆದಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅದರಲ್ಲಿಯೂ ಮೈಸೂರು ರೇಷ್ಮೆ ಎಂದರೆ ಇಡೀ ಪ್ರಪಂಚದಲ್ಲೇ ಪ್ರಖ್ಯಾತಿ ಪಡೆದಿರತಕ್ಕದ್ದೆಂಬುದು ಸರ್ವವಿದಿತವಾದ ವಿಷಯ. ಈ ರೇಷ್ಮೆ ವ್ಯವಸಾಯ ಯಾವ ರೀತಿಯಲ್ಲಿ ನಡೆಯುತ್ತಿದೆಯೆಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ.

ನಿನ್ನೆಯ ದಿವಸ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ದೊಡ್ಡ ದೊಡ್ಡ ಕಾಫಿ ಪ್ಲಾಂಟರ್ಸ್ ವಿಚಾರವಾಗಿ ಮಾತನಾಡುತ್ತಾ, ಅವರು ವಿಶೇಷವಾಗಿ ಕಾಫಿ ಬೆಳೆದಾಗ್ಯೂ, ಆ ಕಾಫಿಯನ್ನು ಕುಡಿಯುತಕ್ಕ ಜನರೇ ಬೇರೆ ಇರುತ್ತಾರೆಂದು ಹೇಳಿದರು. ಅಂದರೆ ಹೊರ ದೇಶದವರೆಂದು ಹೇಳಿದರು. ಅದೇ ರೀತಿ ಇಲ್ಲಿ ಸಹ ನಮ್ಮ ಮೈಸೂರಿನಲ್ಲಿ ಹಸನಾದ ರೇಷ್ಮೆಯನ್ನು ಬೆಳೆದಾಗ್ಯೂ, ಅದನ್ನು ಉಪಯೋಗಿಸತಕ್ಕವರು ಬೇರೆ ಇರತಕ್ಕವರೇ ಹೆಚ್ಚು ಇರುತ್ತಾರೆ. ಅನುಕೂಲಸ್ಥರು, ಆಸೆಯುಳ್ಳವರು ನಮ್ಮ ಮೈಸೂರಿನ ಹೊರಗೆ ಎಂದರೆ ನಮ್ಮ ಮಾಲಿಗೆ ಉತ್ತೇಜನ ಕೊಡತಕ್ಕವರು ನಮ್ಮಲ್ಲಿಲ್ಲ. ನಮ್ಮ ಮೈಸೂರು ರೇಷ್ಮೆ ಇಡೀ ಪ್ರಪಂಚದಲ್ಲಿಯೇ ಹೆಸರು ವಾಸಿಪಡೆದಿದೆ. ಇದನ್ನು ವ್ಯವಸಾಯಮಾಡಿಕೊಂಡು

ಇದರ ಮೇಲೆ ಜೀವನ ನಡೆಸುತ್ತಿರುವಂಥ ಸಂಸಾರಗಳು ನಮ್ಮ ಸಂಸ್ಥಾನದಲ್ಲಿ ಸುಮಾರು 50 ಸಾವಿರ ಇವೆ. ಈ ಕಸಬು ಈ 50 ಸಹಸ್ರ ಸಂಸಾರಗಳಿಗೆ ಜೀವಾಧಾರವಾಗಿರುವುದರ ಜೊತೆಗೆ ಸುಮಾರು 5 ಲಕ್ಷ ಜನರಿಗೆ ಕೂಲಿ ಸೌಕರ್ಯವನ್ನು ಒದಗಿಸಿಕೊಡಲು ಅವಕಾಶವಿರುತ್ತವೆ. ಇನ್ನು ನಮ್ಮ ದೇಶದಲ್ಲಿ ಹೀಗೆ ಕೂಲಿ ಒದಗಿಸುವಂಥ ಎಲ್ಲ ಉದ್ಯಮಗಳನ್ನು ಒಟ್ಟುಗೂಡಿಸಿದರೂ ಅವುಗಳೆಲ್ಲಾ ಸೇರಿಕೊಂಡು 1½ ಲಕ್ಷ ಜನರಿಗಿಂತಲೂ ಹೆಚ್ಚಿನ ಜನರಿಗೆ ಕೂಲಿ ಕೆಲಸ ಒದಗಿಸಲು ಸಾಧ್ಯವಾಗಿರುವುದಿಲ್ಲ. ಆಂದಮೇಲೆ ಹೀಗೆ 5 ಲಕ್ಷ ಜನರಿಗೆ ಜೀವನೋಪಾಯವನ್ನು ಕಲ್ಪಿಸಿಕೊಡಬೇಕಾಗಿದ್ದರೆ ಇದಿನ್ನೆಷ್ಟು ದೊಡ್ಡ ಸ್ಥಾನಮಾನವನ್ನು ಪಡೆದುಕೊಂಡಿರುತ್ತದೆ ಎಂಬುದು ಎಲ್ಲರೂ ಆಲೋಚನೆ ಮಾಡತಕ್ಕ ವಿಷಯವಾಗಿದೆ. ಈ ರೇಷ್ಮೆ ವ್ಯವಸಾಯ ಹೆಚ್ಚಾಗಿ ನಮ್ಮ ಸಂಸ್ಥಾನದಲ್ಲಿ ಮೈಸೂರು, ಮಂಡ್ಯ ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ನಡೆಯುತ್ತಿದೆ ಮತ್ತು ಮೂರು ನಾಲ್ಕು ವಿಧಗಳಲ್ಲಿ ಜನರಿಗೆ ಸೌಕರ್ಯ ನೀಡುತ್ತಿದೆ. ರೇಷ್ಮೆ ಬೆಳೆಗಾರ, ಮಧ್ಯಸ್ಥಗಾರ, ಗೂಡನ್ನು ತಯಾರಿಸತಕ್ಕವನು, ರೇಷ್ಮೆ ನೂಲು ತೆಗೆಯುತಕ್ಕವನು, ಬಟ್ಟೆ ನೇಯುತಕ್ಕವನು, ಬಟ್ಟೆ ಮತ್ತು ನೂಲನ್ನು ಕೊಳ್ಳತಕ್ಕವರು ಎಂದು ನಾನಾ ತರನಾಗಿ ಜನರು ಈ ಉದ್ಯಮದಲ್ಲಿ ತೊಡಗಿರುತ್ತಾರೆ. ಆದರೆ ನಾನಾ ರೀತಿಯಾಗಿ ಈ ಉದ್ಯಮದಲ್ಲಿ ತೊಡಗಿರತಕ್ಕವರಿಗೆ ಧಾರಣೆ ಏರಲಿ ಅಥವಾ ಧಾರಣೆ ಇಳಿಯಲಿ, ಆದರಿಂದ ಯಾರಿಗೆ ಲುಕ್ಸಾನಾದರೂ, ಈ ರೇಷ್ಮೆ ಬಟ್ಟೆ ನೇಯುತಕ್ಕವನಿಗೂ ಮತ್ತು ಅದನ್ನು ಮಾರಾಟ ಮಾಡತಕ್ಕವನಿಗೂ ಎಂದಿಗೂ ಲುಕ್ಸಾನಾಗುವುದಿಲ್ಲ. ಎಂದಿದ್ದರೂ, ಯಾವ ಧಾರಣೆಯೇ ಇರಲಿ, ಈ ಎರಡು ಕಸಬಿನವರಿಗೆ ಲಾಭ ತಪ್ಪಿದ್ದಿಲ್ಲ. ಆದರೆ ಬೆಳೆಯುತಕ್ಕವನಿಗೂ, ಗೂಡನ್ನು ತಯಾರಿಸತಕ್ಕವನಿಗೂ, ಧಾರಣೆವಾಸಿಗಳು ಇಳಿದಲ್ಲಿ ಅವರ ಗತಿಯೇನಾಗಬೇಕು ! ಅವರು ಈ ಬಗ್ಗೆ ಪಡತಕ್ಕ ಶ್ರಮವೆಷ್ಟು, ಅವರ ಖರ್ಚು ವೆಚ್ಚಗಳೇನು, ಎಂಬ ಈ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ, ಒಂದು ಸಾರಿ ನಾಲ್ಕೆಂಟು ರೂಪಾಯಿಗಳು ಆತನಿಗೆ ಬಂದರೂ, ಆತನಿಗೆ ಸಮಯಾನುಸಂದರ್ಭ 10–6 ರೂಪಾಯಿಗಳು ಹೋಗತಕ್ಕ ಸಂಭವಗಳೂ ಜಾಸ್ತಿ ಇರುತ್ತವೆ. ಆದರೆ ಈ ದಿವಸ ನಮ್ಮ ರೇಷ್ಮೆಗೆ ಚೈನಾ ರೇಷ್ಮೆ ಇಲ್ಲಿಗೆ ಬರುತ್ತಿರುವುದು ಒಂದು ಕಷ್ಟಕ್ಕೆ ಬಂದಿದೆ. ಇದರಿಂದ ಬೆಲೆಗಳಲ್ಲಿ ಪೈಪೋಟಿ ಬಂದು ಜನರು ಹೆಚ್ಚು ಹೆಚ್ಚಾಗಿ ಈ ರೇಷ್ಮೆಯನ್ನು ಬೆಳೆಯುತಕ್ಕ ಬಗ್ಗೆ ಪ್ರೋತ್ಸಾಹ ಕೊಡುತ್ತಿಲ್ಲ. ಇದರಿಂದ ಈ ರೇಷ್ಮೆ ವ್ಯವಸಾಯಕ್ಕೆ ಒಂದು ಕಂಟಕ ಉಂಟಾಗಿದೆ. ಆದರೆ ಈ ದಿವಸ ಈ ರೇಷ್ಮೆ ತಯಾರಿಸತಕ್ಕವರು ಎಲ್ಲಿದ್ದಾರೋ ಅತ್ತ ಕಡೆಗೇ ಸರ್ಕಾರದವರ, ಗಮನಬಿದ್ದು ರೇಷ್ಮೆ ಕೈಗಾರಿಕೆ ಕಾರ್ಖಾನೆಗಳ ಕಡೆ ಹೆಚ್ಚಿನ ನಿಗಾ ಕೊಟ್ಟು, ಬೆಳೆಯುತಕ್ಕ ರೈತನ ಕಡೆಗೆ ಸರ್ಕಾರದ ಗಮನ ಅಷ್ಟಾಗಿ ಹೋಗುತ್ತಿಲ್ಲ. ಇಂಥ ಭಾವನೆಯನ್ನು ತಪ್ಪಿಸಿ, ರೈತನ ಕಷ್ಟ ಸುಖಗಳ ಕಡೆಗೆ ಹೆಚ್ಚಿನ ಗಮನಕೊಡಬೇಕಾದದ್ದು ಅವಶ್ಯಕ.

ಈ ದಿವಸ ಮೈಸೂರು ಜಿಲ್ಲೆಯಲ್ಲಿ ಈ ವ್ಯವಸಾಯ 80 ಸಾವಿರ ಎಕರೆಯಷ್ಟು ಪ್ರದೇಶದಲ್ಲಿ ನಡೆಯುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ 10 ಸಾವಿರ ಎಕರೆ, ಬೆಂಗಳೂರು ಜಿಲ್ಲೆಯಲ್ಲಿ 10 ಸಾವಿರ ಎಕರೆ, ಕೋಲಾರ ಜಿಲ್ಲೆಯಲ್ಲಿ 15 ಸಾವಿರ ಎಕರೆ, ತುಮಕೂರು ಜಿಲ್ಲೆಯಲ್ಲಿ 3 ಸಾವಿರದಿಂದ 5 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಈ ವ್ಯವಸಾಯ ನಡೆಯುತ್ತಿದೆ. ತುಮಕೂರು ಜಿಲ್ಲೆಯಲ್ಲಿ ತತ್ರಾಪಿ ಈ ವ್ಯವಸಾಯ ನಡೆಯುತ್ತಿರುವುದು ಕೇವಲ ತುಮಕೂರು ಮತ್ತು ಕುಣಿಗಲ್ ಈ ಎರಡೇ ತಾಲ್ಲೂಕುಗಳಲ್ಲಿ. ಈ ಎರಡು ತಾಲ್ಲೂಕುಗಳೇ ಒಳ್ಳೆಯ ಬಿತ್ತನೆಯ ಬೀಜವನ್ನು ಮಂಡ್ಯ ಮತ್ತು ಮೈಸೂರು ಈ ಎರಡು ಜಿಲ್ಲೆಗಳಿಗೂ ಸಂಪೂರ್ಣವಾಗಿ ಒದಗಿಸುತ್ತವೆ. ಇಡೀ ನಮ್ಮ ಮೈಸೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಈ ರೇಷ್ಮೆ ವ್ಯವಸಾಯ ನಡೆಯುತ್ತಿದೆಯೋ ಆ ಪ್ರದೇಶಗಳಿಗೆಲ್ಲಾ ಒಳ್ಳೆಯ ರೇಷ್ಮೆ ಗೂಡನ್ನು ಸರಬರಾಯಿ ಮಾಡಬೇಕಾಗಿದ್ದರೆ ಸುಮಾರು 10 ಸಾವಿರ ಎಕರೆ ಪ್ರದೇಶಗಳಲ್ಲಿ ಈ ಗೂಡುಗಳನ್ನು ತಯಾರುಮಾಡಬೇಕಾಗುತ್ತದೆ. ಹಾಗೆ ಎಂದಿನವರೆಗೆ ಒಳ್ಳೆಯ ಉತ್ತಮ ದರ್ಜೆ ಗೂಡುಗಳನ್ನು ಒದಗಿಸಲು ಸಾಧ್ಯವಿಲ್ಲವೋ ಅಂದಿನವರೆಗೂ ನಮಗೆ ಈ ಬೆಳೆಯಿಂದ ಹೆಚ್ಚಿನ ಒಂದು ಲಾಭ ಸಂಪಾದನೆಗೆ ಅವಕಾಶವಿಲ್ಲವೆಂದು ಹೇಳುತ್ತೇನೆ. ಆದರೆ ಈ ದಿವಸ ಉತ್ತಮ ದರ್ಜೆ ಗೂಡುಗಳನ್ನು ಇಡೀ ಸಂಸ್ಥಾನದಲ್ಲೇ ತಯಾರಿಸುತ್ತಿರುವ ಎರಡು ಸ್ಥಳಗಳೆಂದರೆ ನಾನಾಗಲೇ ಹೇಳಿದಹಾಗೆ ನಮ್ಮ ತುಮಕೂರು ಮತ್ತು ಕುಣಿಗಲ್ ಈ ಎರಡು ತಾಲ್ಲೂಕುಗಳು ಮಾತ್ರ. ಆದರೆ ಆ ಎರಡು ತಾಲ್ಲೂಕುಗಳಲ್ಲಿಯೂ ಮಳೆ ಕಡಿಮೆ. ಏನೋ ಮಳೆಗಾಲದಲ್ಲಿ ಮಾತ್ರ ಒಂದೆರಡು ಬೆಳೆಗಳನ್ನು ತೆಗೆದುಕೊಳ್ಳಬಹುದು. ಅಷ್ಟೇ ಶಿವಾಯ ಬೇಸಿಗೆಯಲ್ಲಿ ಈ ವ್ಯವಸಾಯ ಮಾಡಿ ಬೆಳೆ ತೆಗೆದುಕೊಳ್ಳಲು ಅನುಕೂಲಗಳಿರುವುದಿಲ್ಲ. ಈಗ ಯಾರು ನೀರಾವರಿ ವ್ಯವಸಾಯವನ್ನು ಮಾಡುತ್ತಾರೋ ಅವರು 500–1,000 ರೂಪಾಯಿಗಳವರೆಗೂ ಲಾಭ ಹೊಂದತಕ್ಕ ಅವಕಾಶವಿದೆ. ಹಾಗಿಲ್ಲದೆ ಕೇವಲ ಮಳೆಯನ್ನೇ ನಂಬಿಕೊಂಡು ವ್ಯವಸಾಯ ಮಾಡತಕ್ಕವರಿಗೆ ವರ್ಷಕ್ಕೆ ಸುಮಾರು 100-150 ಅಥವಾ 200 ರೂಪಾಯಿಗಳು ದೊರೆತರೆ ಹೆಚ್ಚು. ಇದಕ್ಕೂ ಮೇಲ್ಪಟ್ಟ ವರಮಾನ ಬರತಕ್ಕಂಥ ಅವಕಾಶವಿಲ್ಲ. ಹೀಗೆ ಎಲ್ಲವನ್ನೂ ಆಲೋಚನೆ ಮಾಡಿ ನೋಡುವುದಾದರೆ, ಸರ್ಕಾರದವರು ಈ ಮಳೆ ನೀರಿನ ಆಧಾರದ ಮೇಲೆ ಕೆಲಸಮಾಡತಕ್ಕ ಪ್ರದೇಶದ ಜನರಿಗೆ ಹೆಚ್ಚಿನ ಪ್ರೋತ್ಸಾಹ ನೀಡತಕ್ಕದ್ದು ಅತ್ಯಾವಶ್ಯಕ.

ಆದರೆ ಈ ರೇಷ್ಮೆ ಉದ್ಯಮದ ಬಗ್ಗೆ ಇತ್ತೀಚೆಗೆ ಕೇಂದ್ರ ಸರ್ಕಾರದವರು ಒಂದು ಸೆಂಟ್ರಲ್ ಸಿಲ್ಕ್ ಬೋರ್ಡ್ ಎಂಬುದನ್ನು ಸ್ಥಾಪಿಸಿದ್ದಾರೆ. ಅದೇ ಆಧಾರದ ಮೇಲೆ ನಮ್ಮ ಮೈಸೂರು ಸರ್ಕಾರದವರೂ ಒಂದು ಸಮಿತಿಯನ್ನು ನೇಮಕಮಾಡಿದ್ದಾರೆ. ಆದರೆ ಇವೆಲ್ಲಾ ವರ್ತಕನ ಹಿತದೃಷ್ಟಿಯಿಂದ ಮಾಡಲ್ಪಟ್ಟವುಗಳೇ ಹೊರತು, ಇವುಗಳಿಂದ ಬೆಳೆಯುತಕ್ಕ ರೈತನಿಗೇನೂ ಸಹಾಯವಾಗುವುದಿಲ್ಲ. ಕೇಂದ್ರಸರ್ಕಾರದವರು ನೇಮಿಸಿರುವ ಸಮಿತಿಯಲ್ಲಿ 24 ಸ್ಥಾನಗಳಿವೆ. ಆ ಪೈಕಿ 5 ಸ್ಥಾನಗಳನ್ನಾದರೂ ನಮ್ಮ ಮೈಸೂರಿನವರಿಗೆ ಇರಬೇಕಾಗಿದೆ. ಈ ರೇಷ್ಮೆ ಬೆಳೆಯುತಕ್ಕವರು ಹೆಚ್ಚಾಗಿ ಅಲ್ಲಿ ಇದ್ದು ತಮ್ಮ ಸಲಹೆಗಳನ್ನು ನೀಡಲು ಒಂದು ಅವಕಾಶ ದೊರೆತಿರುವುದಿಲ್ಲ. ಈ ಸಮಿತಿಗಳಲ್ಲಿ ಬೆಳೆಗಾರನ ಕಷ್ಟಸುಖಗಳನ್ನು ಪ್ರತಿನಿಧಿಸಲು ಬಹಳ ಕಡಿಮೆ ಸ್ಥಾನಗಳನ್ನು ಕೊಡಲಾಗಿದೆ. ಇಡೀ ಭಾರತದಲ್ಲೇ ಉತ್ಪತ್ತಿಯಾಗತಕ್ಕ ರೇಷ್ಮೆಯಲ್ಲಿ ಶೇಕಡ 60–70 ರಷ್ಟನ್ನು ಉತ್ಪತ್ತಿಮಾಡುವಂಥ ನಮ್ಮ ಮೈಸೂರಿನವರಿಗೆ ಆ ಸಮಿತಿಯಲ್ಲಿ ಇರತಕ್ಕ ಪ್ರಾತಿನಿಧ್ಯವೇನು ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕಾಗಿದೆ. ಈ ವ್ಯವಸಾಯ ನಮ್ಮ ದೇಶದಲ್ಲಿ 5 ಲಕ್ಷ ಜನರಿಗೆ ಜೀವನಾಧಾರವಾಗಿರತಕ್ಕಂಥಾದ್ದಾಗಿದೆ. ಈ ವ್ಯವಸಾಯದಲ್ಲಿ

(ಶ್ರೀ ಟಿ. ಎನ್. ಮುದಲಗಿರಿಗೌಡ.)

ತೊಡಗತಕ್ಕವರೆಲ್ಲರನ್ನೂ ಒಂದು ಸಂಘಟನೆ ಮಾಡಲು ಪ್ರಯತ್ನಮಾಡಬೇಕು. ತಾವು ಕೈಗಾರಿಕೆ ಕಾರ್ಖಾನೆ ಜನರಿಗೆ ಹೇಗೆ ವಿದ್ಯಾಸೌಕರ್ಯ, ವೈದ್ಯಸೌಕರ್ಯ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಿದ್ದೀರೋ, ಅದೇ ರೀತಿಯಲ್ಲಿ ಈ ರೇಷ್ಮೆ ವ್ಯವಸಾಯಗಾರರಿಗೂ ತಾವು ಗೊಬ್ಬರ ನೀರಾವರಿ ಅನುಕೂಲಗಳನ್ನು ಕಲ್ಪಿಸಿಕೊಟ್ಟರೂಸಹ, ಇವರು ಬಹಳ ತೃಪ್ತಿಪಟ್ಟುಕೊಳ್ಳುತ್ತಾರೆ. ಅಷ್ಟನ್ನಾದಗೂ ಕೂಡ ಮಾಡಲು ಸರ್ಕಾರ ಪ್ರಯತ್ನಪಟ್ಟಿಲ್ಲ. ಈಗ ತಾವು ಪ್ರಾರಂಭಿಸಿರುವ ಮಲ್ಟಿಪರ್ಪಸ್ ಸೊಸೈಟಿಗಳಿಂದ ಈ ರೈತರಿಗೆ ಅಷ್ಟಾಗಿ ಸಾಲ ವಗೈರೆಗಳು ಸಿಕ್ಕುತ್ತಿಲ್ಲ. ರೇಷ್ಮೆ ಬೆಲೆ ಹೆಚ್ಚು ಕಡಮೆಯಾದಾಗ ಅವರಿಗೆ ಕೊಂಚ ಹಣವನ್ನೂ ಸಾಲವಾಗಿ ಒದಗಿಸಲು ಅವುಗಳಿಗೆ ಶಕ್ತಿ ಇರುವುದಿಲ್ಲ. ಅವುಗಳಿಗೆ ಇನ್ನೂ ಹೆಚ್ಚಿನ ಮೊಬಲಗನ್ನು ತಾವು ಒದಗಿಸಿಕೊಟ್ಟು ಈ ರೈತರಿಗೆ ಅವುಗಳ ಮೂಲಕ ಅನುಕೂಲವಾಗುವಂತೆ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅಧ್ಯಕ್ಷರೇ, ಈ ರೇಷ್ಮೆ ಕೈಗಾರಿಕೆ ನಮ್ಮ ಮೈಸೂರು ಸಂಸ್ಥಾನ ಒಂದರಲ್ಲೇ ಅಲ್ಲ, ಇಂಡಿಯಾದೇಶದ ಇತರ ಕಡೆಯೂ ಕೂಡ ಇದೆ. ಆದರೆ ಇಂಡಿಯಾ ದೇಶದಲ್ಲಿ ಯಾವ ಯಾವ ಭಾಗದಲ್ಲಿ ರೇಷ್ಮೆ ತಯಾರಾಗುತ್ತಿದೆ, ಹೊರಗಡೆ ಕಳುಹಿಸುತ್ತಿರುವುದರಲ್ಲಿ ಯಾವ ಯಾವ ಭಾಗ ಹೆಚ್ಚಿನ ಮಾಲನ್ನು ರಫಾನೆ ಮಾಡುತ್ತಿದೆ, ಎಂಬ ಅಂಶವನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ಹೊರಗಡೆ ಹೋಗತಕ್ಕ ರೇಷ್ಮೆಯಲ್ಲಿ 2/3 ಭಾಗ ನಮ್ಮ ಮೈಸೂರಿನ ರೇಷ್ಮೆ 1/3 ಭಾಗದ ರೇಷ್ಮೆ ಇತರ ಸಂಸ್ಥಾನದಿಂದ. ನಮ್ಮ ಸಂಸ್ಥಾನದಲ್ಲಿ ತಯಾರಾಗತಕ್ಕ ರೇಷ್ಮೆ ಸುಮಾರು 18 ಲಕ್ಷ ಪೌಂಡುಗಳು ಎಂದು ಅಂದಾಜುಮಾಡಲಾಗಿದೆ. ಇಡೀ ಇಂಡಿಯಾದಲ್ಲಿ ಉತ್ಪತ್ತಿಯಾಗತಕ್ಕದ್ದು 28·5 ಲಕ್ಷ ಪೌಂಡುಗಳು ನಮ್ಮ ದೇಶದಲ್ಲಿ ಈ ಬೆಳೆಯನ್ನು 7·5 ಲಕ್ಷ ಎಕರೆಗಳ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಈ ಬೆಳೆಗೆ ನಮ್ಮ ದೇಶದವರು ನಿಗಾ ಕೊಟ್ಟಿರುವಂತೆ ಮತ್ತೆ ಯಾವ ದೇಶದವರೂ ಕೊಟ್ಟಿರುವುದಿಲ್ಲ. ಈ ವ್ಯವಸಾಯ ನಮ್ಮ ಸಂಸ್ಥಾನದಲ್ಲಿ ಸುಮಾರು 2ಲಕ್ಷ ಜನರಿಗೆ ಒಂದು ಗೃಹ ಕೈಗಾರಿಕೆಯನ್ನು ಒದಗಿಸಿಕೊಟ್ಟಿದೆ. ನಮ್ಮ ಸಂಸ್ಥಾನದಲ್ಲಿ ಈ ಕೈಗಾರಿಕೆ ಮುಖ್ಯವಾಗಿ, ಮೈಸೂರು, ಮಂಡ್ಯ, ಕೋಲಾರ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿಗೆ ನಡೆಯುತ್ತಿದೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸುಮಾರು 79,064 ಎಕರೆಗಳಲ್ಲಿ ಈ ವ್ಯವಸಾಯ ನಡೆಯುತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಒಟ್ಟು ಸಂಸ್ಥಾನದಲ್ಲಿರುವುದು ಅಷ್ಟೇ ಅಲ್ಲ. 80,000 ಕ್ಕಿಂತಲೂ ಜಾಸ್ತಿ ಇದೆ.

ಶ್ರೀ ಯು. ಎಂ. ಮಾದಪ್ಪ.—ನಾನು ಹೇಳಿರುವುದೇ ಬೇರೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿರುವುದನ್ನು ಮಾತ್ರ ನಾನು ಹೇಳಿದ್ದೇನೆ. 1951ನೆಯ ಇಸವಿ ಲೆಕ್ಕದ ಪ್ರಕಾರ ನಮ್ಮ ಸಂಸ್ಥಾನದಲ್ಲಿ 1,05,275 ಎಕರೆಗಳಲ್ಲಿ ಉಪ್ಪುನೇರಳೆ ವ್ಯವಸಾಯ ನಡೆಯುತ್ತಿದೆಯೆಂದು ಹೇಳಬಹುದು. 1925 ರಿಂದ 1951 ನೆಯ ಇಸವಿಯವರೆಗೆ ಯಾವ ರೀತಿ ಈ ವ್ಯವಸಾಯಕ್ಕೆ ಉತ್ತೇಜನ ಸಿಕ್ಕಿದೆ, ಎಷ್ಟು ಜನರು ಉತ್ಪತ್ತಿಯನ್ನು ಹೆಚ್ಚುಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ, ಎಂಬುದನ್ನು ನೋಡುವುದಾದರೆ, 1925 ರಲ್ಲಿ 53,477 ಎಕರೆಗಳಲ್ಲಿ 207 ಗ್ರಾಮಗಳಲ್ಲಿ 77,500 ಸಂಸಾರಗಳು ಉಪ್ಪುನೇರಳೆ ವ್ಯವಸಾಯವನ್ನು ಅವಲಂಬಿಸಿದ್ದುವು, 1935 ರಲ್ಲಿ 25,132 ಎಕರೆಗಳಲ್ಲಿ 1915 ಗ್ರಾಮಗಳಲ್ಲಿ 20,000 ಸಂಸಾರಗಳು ಇದನ್ನವಲಂಬಿಸಿದ್ದುವು, 1942—43 ರಲ್ಲಿ 65,000 ಎಕರೆಗಳಲ್ಲಿ 2950 ಗ್ರಾಮಗಳಲ್ಲಿ 4,35,000 ಸಂಸಾರಗಳು ಈ ವ್ಯವಸಾಯದಿಂದ ಜೀವಿಸುತ್ತಿದ್ದುವು; 1950—51 ರಲ್ಲಿ 90,500 ಎಕರೆಗಳಿದ್ದು 3200 ಗ್ರಾಮಗಳಲ್ಲಿ 55,000 ಸಂಸಾರಗಳು ಈ ವ್ಯವಸಾಯವನ್ನು ಕೈಕೊಂಡಿದ್ದಾರೆಂದು ಗೊತ್ತಾಗಿದೆ. ಇದಕ್ಕೆ ಕಾರಣವೇನು ? ಸರ್ಕಾರದವರು ಎಷ್ಟರಮಟ್ಟಿಗೆ ಕಾರಣರು, ರೈತರು ಎಷ್ಟರಮಟ್ಟಿಗೆ ಕಾರಣರು ಎಂಬುದನ್ನು ನಾವೆಲ್ಲಗೂ ಪರ್ಯಾಲೋಚಿಸಬೇಕಾದದ್ದು ಅಗತ್ಯ.

ಸರ್ಕಾರದವರು ಆಮದು ರಫ್ತು ವಿಚಾರದಲ್ಲಿ ಏನಾದರೂ ಹತೋಟಿಯಿಟ್ಟರೆ ಇದಕ್ಕೇನಾದರೂ ಉತ್ತೇಜನ ಸಿಕ್ಕುತ್ತದೆಯೆ ಎಂಬುದು ಅರ್ಥಿಕ ಶಾಸ್ತ್ರ ತಜ್ಞರು ಯೋಚನೆಮಾಡಬೇಕಾದ ವಿಷಯ. ಹಾಗೂ ವ್ಯಾಪಾರಸ್ಥರು ಯೋಚನೆಮಾಡಬೇಕಾದ ವಿಷಯ. ಸಿಲ್ಕ್ ಸೆಮಿನಾರಿನಲ್ಲೂ ಆಮದು ಕಂಟ್ರೋಲು ಇರಬೇಕೆಂದು ಒತ್ತಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ದೇಶ ಇಬ್ಭಾಗವಾಗುವುದಕ್ಕೆ ಮುಂಚೆ ನಾವೆಷ್ಟು ರೇಷ್ಮೆಯನ್ನು ಉಪಯೋಗಿಸುತ್ತಿದ್ದೆವು, ಅನಂತರ ಎಷ್ಟು ಉಪಯೋಗಿಸುತ್ತಿದ್ದೇವೆ, ನಮ್ಮಲ್ಲಿ ಉತ್ಪತ್ತಿ ಎಷ್ಟಿತ್ತು, ಹೊರಗಡೆಯಿಂದ ಎಷ್ಟು ಬರುತ್ತಿದೆ ಎಂಬುದನ್ನು ತಿಳಿಯುವುದು ಒಳ್ಳೆಯದು. ಪಾಕಿಸ್ಥಾನ್ ರಚನೆಯಾಗುವುದಕ್ಕೆ ಮುಂಚೆ ನಾಲ್ಕು ಮಿಲಿಯನ್ ಪೌಂಡುಗಳ ರೇಷ್ಮೆ ನಮ್ಮ ದೇಶದಲ್ಲೇ ಉಪಯೋಗಿಸಲ್ಪಡುತ್ತಿತ್ತು, ಆದರೆ 25·7 ಮಿಲಿಯನ್ ಪೌಂಡುಗಳು ಮಾತ್ರ ನಮ್ಮಲ್ಲಿ ಉತ್ಪತ್ತಿಯಾಗುತ್ತಿತ್ತು. ಆದ್ದರಿಂದ ಹೊರದೇಶದಿಂದ ನಾವು ರೇಷ್ಮೆಯನ್ನು ಆಮದುಮಾಡಿಕೊಳ್ಳಬೇಕಾದ ಸಂದಿಗ್ಧ ಪರಿಸ್ಥಿತಿ ಇದ್ದಿತು. ತತ್ಫಲವಾಗಿ ರೇಷ್ಮೆ ಬೆಲೆ ಇಳಿಯಿತು. ಹೀಗಾಗಿ ರೈತನ ಸ್ಥಿತಿ ಅಧೋಗತಿಗೆ ಬಂತು. ಎರಡನೆಯ ಮಹಾಯುದ್ಧ ಪ್ರಾರಂಭವಾದಮೇಲೆ ಸ್ವಲ್ಪಮಟ್ಟಿಗೆ ರೈತರಿಗೆ ಅನುಕೂಲ ವಾತಾವರಣ ಬಂತೆನ್ನಬಹುದು. ಇದಕ್ಕೆ ಆಮದು ಸ್ವಲ್ಪ ಕಡಿಮೆಯಾದುದು ಕಾರಣವೆಂದು ಹೇಳಬಹುದು.

ಆದರೆ, 1950—51ರಲ್ಲಿ ದೇಶದ ವಿಭಜನೆಯಾದ ಮೇಲೆ, ನಮ್ಮ ಉತ್ಪತ್ತಿಯೇನು, ನಮ್ಮ ಅವಶ್ಯಕತೆಯೇನು ಎಂಬುದನ್ನು ನೋಡುವುದಾದರೆ, ನಮ್ಮ ಉತ್ಪತ್ತಿ 25 ಮಿಲಿಯನ್ ಪೌಂಡುಗಳು ಇದ್ದೇ ಇದೆ. ನಾವು ಉಪಯೋಗಿಸುತ್ತಿದ್ದುದು 60 ಲಕ್ಷ ಪೌಂಡುಗಳು. ಪಾಕಿಸ್ಥಾನ್ ಸ್ಥಾಪನೆಯಾದಮೇಲೆ ನಮಗೆ ನಾವು ಮೊದಲು ಉಪಯೋಗಿಸುತ್ತಿದ್ದಷ್ಟು ರೇಷ್ಮೆ ಬೇಕಾಗಲಿಲ್ಲ. ಆದ್ದರಿಂದ ಆಮದುಮಾಡಿಕೊಳ್ಳಬೇಕಾದ ಆವಶ್ಯಕತೆಯೂ ಹೆಚ್ಚಾಗಿಲ್ಲ, ಆದ್ದರಿಂದ ಒಂದು ವಿಧದಲ್ಲಿ ನಮ್ಮ ರೇಷ್ಮೆ ಕೈಗಾರಿಕೆಗೆ ಉತ್ತೇಜನ ಸಿಕ್ಕಿತು. ಅದರ ಬೆಲೆ ಹೆಚ್ಚಲೂ ಅವಕಾಶವಾಯಿತು. ರೈತನ ಆರ್ಥಿಕಸ್ಥಿತಿಯೂ ಉತ್ತಮಗೊಂಡಿತು.

ಆದರ ಇತ್ತೀಚೆಗೇನಾಯಿತೆಂದು ನೋಡುವುದಾದರೆ, ಕ್ರಮೇಣ ರೇಷ್ಮೆಯ ಆಮದು ಹೆಚ್ಚಾಗುತ್ತಾ ಬಂತು. ಇದರಿಂದಾಗಿ ರೈತರಿಗೆ ಧಕ್ಕೆ ಬಂತು. ಈ ಕಾರಣದಿಂದ ಸರ್ಕಾರದವರು ಆಮದಿನ ಮೇಲೆ ಹತೋಟಿ ಇಡಬೇಕು. ಇದು ಕೇಂದ್ರಕ್ಕೇ ಸೇರಿದ್ದೇನೋ ನಿಜ. ಆದರೂ ಶಿಫಾರಸುಮಾಡುವ ಹಕ್ಕು ನಮ್ಮ ಸಂಸ್ಥಾನಕೆ

ಇದ್ದೇ ಇದೆ. ಆದ್ದರಿಂದ ಅವರು ಮಾಡಬೇಕಾದ ಕರ್ತವ್ಯಲೋಪವಾಗದಂತೆ ನಮ್ಮ ಸರ್ಕಾರ ರೈತರ ಪರವಾಗಿ ಒತ್ತಾಯಮಾಡಬೇಕು.

ಇಷ್ಟಾದಮೇಲೆ, ರೇಷ್ಮೆ ಹತೋಟಿಮಾಡಿದರೆ ಸಾಕೇ ಎಂದು ಕೇಳಬಹುದು. ವ್ಯಾಪಾರದ ಒಂದು ಕ್ಷೇತ್ರ ಬೇಕು. ಆದ್ದರಿಂದ ಈ ಒಂದು ಕ್ಷೇತ್ರವನ್ನು ಯಾವ ರೀತಿ ಕಲ್ಪಿಸಬೇಕು, ರೆಗ್ಯುಲೇಟೆಡ್ ಮಾರ್ಕೆಟ್ಟೇ ಬೇಕೇ ಅಥವಾ ಬೇರೆ ಯಾವ ರೀತಿ ಮಾರ್ಕೆಟ್ ಬೇಕು ಎಂಬುದನ್ನು ಆಲೋಚಿಸಬೇಕು. ಹಿಂದೆ ನಡೆದ ಸೆಮಿನಾರ್‌ನಲ್ಲೂ ಈ ಬಗ್ಗೆ ಸಲಹೆಗಳು ಬಂದಿವೆ. ಆದರೆ ಅದು ರೈತರಿಗೆ ಹೊಂದದೆ ಇರಬಹುದು. ಆದ್ದರಿಂದ ರೇಷ್ಮೆ ಬೇಸಾಯದಲ್ಲಿಯೂ ಮತ್ತು, ರೇಷ್ಮೆ ವ್ಯಾಪಾರದಲ್ಲಿಯೂ ಅನುಭವಸ್ಥರಾದವರನ್ನು ಕರೆಯಿಸಿ, ಆ ಒಂದು ಸಮ್ಮೇಳನದಲ್ಲಿ ಈ ವಿಚಾರದಲ್ಲಿ ಏನೇನು ಲೋಪದೋಷಗಳಿವೆಯೆಂಬುದನ್ನು ಸಮಾಲೋಚಿಸಿ, ಅದನ್ನು ನಿವಾರಣೆಮಾಡಿ, ಸರಿಯಾದ ಒಂದು ಮಾರ್ಕೆಟ್ಟನ್ನು ಮಾಡುವುದು ಉತ್ತಮ. ಈಗಿರುವ ಕೋಠಿಗಳಲ್ಲಿ ಏನು ತೊಂದರೆಗಳಿವೆಯೆಂಬುದನ್ನು ಸ್ವಲ್ಪ ಎಲ್ಲರೂ ತಿಳಿದುಕೊಳ್ಳಬೇಕು. ಈ ಸಂದರ್ಭದಲ್ಲಿ ಕೋಠಿಗಳಲ್ಲಿ ನಡೆಯುವ ವ್ಯಾಪಾರ ವಿಧಾನಗಳನ್ನು ಹೇಳದೆ ಇದ್ದರೆ ನನ್ನ ಕರ್ತವ್ಯಲೋಪವಾಗುತ್ತದೆಂದು ತಿಳಿದಿದ್ದೇನೆ. ಆ ಕೋಠಿಗಳಲ್ಲಿ ನಡೆಯುತ್ತಿರುವ ಬಟ್ಟೆ ಮರೆಯ ವ್ಯಾಪಾರ ಕಣ್ಣಿಗೆ ಮಣ್ಣೆರಚುವ ವ್ಯಾಪಾರವಲ್ಲದೆ ಬೇರೆಯೇನಲ್ಲ. ಮಾರುವವನು ಅಲ್ಲಿಗೆ ಹೋದರೆ ಕೊಂಡುಕೊಳ್ಳುವವನು ಅಥವಾ ಕೋಠಿಯವನು (ವ್ಯಾಪಾರಸ್ಥ) ಬಟ್ಟೆಯಿಂದ ತನ್ನ ಮತ್ತು ಅವನ ಕೈಗಳನ್ನು ಮುಚ್ಚಿ ಮಾರುವವನ ಕೈ ಹಿಡಿದುಕೊಂಡು ಅಕ್ಕಪಕ್ಕದಲ್ಲಿಯಾರಿದ್ದರೂ ಅವರಿಗೆ ರೇಷ್ಮೆ ಬೆಲೆ ಗೊತ್ತಾಗದಂತೆ ಮಾರುವವನ ಬೆರಳುಗಳನ್ನು ಹಿಡಿದು ವ್ಯಾಪಾರ ತಿಳಿಸುತ್ತಾನೆ. ಹೀಗಾದರೆ ವ್ಯಾಪಾರದ ಗತಿ ಏನಾಗುತ್ತದೆಂಬುದನ್ನು ತಾವೇ ಯೋಚಿಸಬಹುದು. ಇದಕ್ಕೆ ಬದಲು ಬಹಿರಂಗ ವ್ಯಾಪಾರ ಪದ್ಧತಿಯನ್ನು ಜಾರಿಗೆ ತರಬೇಕು. ಈ ವಿಚಾರದಲ್ಲಿ ಸರ್ಕಾರ ಸೂಕ್ತ ಕಾರ್ಯಕ್ರಮ ಕೈಕೊಳ್ಳಲು ಅಧಿಕಾರವಿದೆ. ಇದನ್ನು ರೈತನ ಹಿತದೃಷ್ಟಿಯಿಂದ ಮಾರ್ಪಾಡುಮಾಡುವುದು ಅಗತ್ಯ.

ಎರಡನೆಯದಾಗಿ, ಇನ್ನೊಂದು ಭಾಗವನ್ನು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ ರೇಷ್ಮೆ ಮೊಟ್ಟೆಯ ವಿಷಯದಲ್ಲಿ ಒಂದು ಕಾನೂನು ಈಗಾಗಲೇ ಆಗಿದೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—Pass ಆಗಿದೆ ಅಷ್ಟೆ; ಇನ್ನೂ ಜಾರಿಗೆ ಬಂದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಅದನ್ನು ಜಾರಿಗೆ ತರುವುದರಲ್ಲಿ ಸರ್ಕಾರದವರು ನಿಧಾನವಾಗಿ ಆಲೋಚಿಸಿ ಜಾರಿಗೆ ತರಬೇಕಾದದ್ದು ಅಗತ್ಯ. ಏಕೆಂದರೆ, ಅನೇಕರು ಏಡೆಡ್ ಗ್ರೇನೇಜ್ ಸ್ಕೀಮು ಪ್ರಕಾರ ವಿದ್ಯಾಭ್ಯಾಸ ಪಡೆದಿದ್ದಾರೆ, ಅವರು ವಿಜ್ಞಾನಶಾಸ್ತ್ರ ಪ್ರಕಾರ ಸ್ವಲ್ಪ ಹೆಚ್ಚಿಗೆ ತಿಳಿದುಕೊಂಡಿರುತ್ತಾರೆ, ನಿಜ. ಸರ್ಟಿಫಿಕೇಟೂ ಇದೆ. ಆದರೆ ಅನೇಕ ವರ್ಷಗಳು ಬೇಸಾಯಮಾಡಿ ಅನುಭವದಿಂದ ಕೂಡಿರುವ ಖಾಸಗೀ ರೇಷ್ಮೆ ಮೊಟ್ಟೆ ತಯಾರುಮಾಡುವವರ ಅನುಭವ ಇವರಿಗಿರುವುದಿಲ್ಲ. ಆದ್ದರಿಂದ ಇವರುಗಳಿಗೆ ಸರ್ಟಿಫಿಕೇಟ್ ಇದ್ದಮಾತ್ರಕ್ಕೇ ಇವರು ತಜ್ಞರು, ಸರ್ವಜ್ಞಮೂರ್ತಿಗಳೆಂದು ತಿಳಿಯಕೂಡದು. ಅವರೂ ಬೇಕು, ಇವರೂ ಬೇಕು. ಆದ್ದರಿಂದ ಇಬ್ಬರನ್ನೂ ಸೇರಿಸಿ ಸಂಯಮದಿಂದ ಕೆಲಸಮಾಡಿದ್ದರೆ ಉತ್ತಮವಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಮಾನ್ಯ ಸ್ನೇಹಿತರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಅವರಿಗೆ ಅವರು ಕೊಟ್ಟಿರತಕ್ಕ ರಚನಾತ್ಮಕ ಸಲಹೆಗಳಿಗಾಗಿ ವಂದಿಸುತ್ತೇನೆ.

ಸಂಸ್ಥಾನದಲ್ಲಿ ಹೋದವರ್ಷ 1,05,000 ಎಕರೆ ಪ್ರದೇಶದಲ್ಲಿ ರೇಷ್ಮೆ ವ್ಯವಸಾಯ ನಡೆಯುತ್ತಿತ್ತು. ಅವರು ಹೇಳಿದಂತೆ 80,000 ಎಕರೆ ಅಲ್ಲ. ಈ ವರ್ಷ ಸುಮಾರು ಒಂದು ಲಕ್ಷ ಎಕರೆ ಸಾಗುವಳಿಯಲ್ಲಿದೆ.

Mr. SPEAKER.—He refered to Mysore District only.

ಶ್ರೀ ಎಚ್. ಸಿದ್ದವೀರಪ್ಪ.—Then it is correct.

ಇದಾದ ಮೇಲೆ, ಈ ವರ್ಷ ಮುಖ್ಯವಾಗಿ ದೇಶದಲ್ಲಿ ರೇಷ್ಮೆಯ ವಿಷಯದಲ್ಲಿ ಯಾವ ಪರಿಸ್ಥಿತಿಯಿತ್ತೆಂಬ ಬಗ್ಗೆ ಒಂದು ಮಾತು ಹೇಳುತ್ತೇನೆ. ಏಪ್ರಿಲ್ ತಿಂಗಳಿನ ಸುಮಾರಿನಲ್ಲಿ ಅನೇಕ ಫ್ಯಾಕ್ಟರಿಗಳು ಬಂದಾಗಿದ್ದುವು. ಕಾರಣ ರೇಷ್ಮೆಗೆ ಡಿಮ್ಯಾಂಡ್ ಇರಲಿಲ್ಲ, ದಾಸ್ತಾನು ಜಾಸ್ತಿಯಿತ್ತು. ಇದಕ್ಕೆ ಮುಖ್ಯವಾದ ಕಾರಣ, ಹೊರಗಡೆಯಿಂದ ಬಂದಂಥ ರೇಷ್ಮೆಯಿಂದ ಪೈಪೋಟಿ ಜಾಸ್ತಿ ಆಗಿ ನಮ್ಮಲ್ಲಿ ತಯಾರಾಗತಕ್ಕ ಮಾಲಿಗೆ ಧಾರಣೆ ಸಿಕ್ಕದೆ ಬಹಳ ತೊಂದರೆಯಾಗಿತ್ತು. ಅನೇಕ ಕೂಲಿಗಾರರಿಗೆ ತೊಂದರೆಯಾಗಿತ್ತು. ಏನು ಮಾಡಬೇಕೆಂಬುದೇ ತಿಳಿಯುತ್ತಿರಲಿಲ್ಲ. ಅಂಥ ಸಂದರ್ಭದಲ್ಲಿ ಉದಾರ ಮನಸ್ಸುಮಾಡಿ ಇಂಡಿಯಾ ಸರ್ಕಾರದವರು ನಮ್ಮ ಸಹಾಯಕ್ಕೆ ಬಂದರು. ನಾವೂ ಡೆಲ್ಲಿಗೆ ಹೋಗಿ ಇಲ್ಲಿನ ಪರಿಸ್ಥಿತಿಯನ್ನು ತಿಳಿಸಿ ಯಾವ ರೀತಿ ದೇಶದ 10% ಜನರು ಕಷ್ಟಕೊಳಗಾಗಿದ್ದಾರೆಂಬದನ್ನು ತಿಳಿಸಿದ ಕೂಡಲೇ ಅವರು ತಮ್ಮ import policy ಯನ್ನು regulate ಮಾಡಿದ್ದರ ಮೇಲೆ, ನಾವೂ ಸ್ವಲ್ಪ ಚೇತರಿಸಿಕೊಳ್ಳುವುದಕ್ಕೆ ಅನುಕೂಲವಾಯಿತು. ತಮಗೇ ಗೊತ್ತಿದೆ, ಶ್ರೀ ಕರ್ಮರ್‌ಕರ್‌ರವರು ಇಲ್ಲಿ ಕಾಫಿ ಬೋರ್ಡಿಗೆ ಬಂದಾಗ ಅವರು ಮಾತನಾಡಿದ್ದರಲ್ಲಿ ಅವರು ನಮ್ಮ ಕಷ್ಟಗಳನ್ನು ಎಷ್ಟು ಚೆನ್ನಾಗಿ ತಿಳಿದುಕೊಂಡಿದ್ದಾರೆ ಎಂಬುದು. ನಮ್ಮ ರೇಷ್ಮೆ ಕೈಗಾರಿಕೆ ಆದಷ್ಟು ಚೆನ್ನಾಗಿ ನಡೆಯಬೇಕೆಂದೇ ಇಂಡಿಯಾ ಸರ್ಕಾರದವರ ಆಶೆಯೆಂಬುದನ್ನು ಅವರು ವ್ಯಕ್ತಪಡಿಸಿದ್ದಾರೆ. ಮಾತಾಡುವುದರಲ್ಲೇ ಅಲ್ಲದೆ ಪತ್ರವ್ಯವಹಾರದಲ್ಲೂ ತಿಳಿಸಿದ್ದಾರೆ, ಅದರಂತೆ ಸಹಾಯಮಾಡುತ್ತಲೂ ಇದ್ದಾರೆ. ಆದ್ದರಿಂದ ಇವೊತ್ತಿನ ದಿವಸ ಈ ಕೈಗಾರಿಕೆ ಸ್ವಲ್ಪ ನೆಲೆಯಲ್ಲಿ ನಿಲ್ಲಲು ಅನುಕೂಲವಾಗಿದ್ದರೆ ಅದಕ್ಕೆ ಪ್ರಥಮತಃ ವಂದನೆಗಳು ಇಂಡಿಯಾ ಸರ್ಕಾರದವರಿಗೆ ಸಲ್ಲಬೇಕೆಂದರೆ ಅದು ಅತಿಶಯೋಕ್ತಿಯಾಗಲಾರದು.

'ರೇಯಿಂಗ್ಸ್' ವಿಷಯದಲ್ಲಿ ಎಷ್ಟೆಷ್ಟು ಪ್ರಯತ್ನ ಮಾಡಿದ್ದೇವೆಂಬ ವಿವರಗಳನ್ನೆಲ್ಲಾ ಈಗ ಹೇಳುವುದಕ್ಕಾಗುವುದಿಲ್ಲ. ಟ್ಯಾರಿಫ್ ಬೋರ್ಡಿನವರು ಎಕನಾಮಿಕಲ್ ಆಗಿರಬೇಕಾದರೆ 35 ರೂಪಾಯಿ ಇರಬೇಕೆಂದು ನಿರ್ಧರಿಸಿ ಬೆಲೆಯನ್ನು ಗೊತ್ತುಮಾಡಿದ್ದಾರೆ. ಈ ದೃಷ್ಟಿಯಿಂದ ನಾವು ಇಂಡಿಯಾ ಸರ್ಕಾರದವರ ನೀತಿಗನುಗುಣವಾಗಿ ಮುಂದುವರಿಯಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ರೇಷ್ಮೆಯ ಬೆಲೆ ನಿರ್ಧಾರವಾಗುವುದು ಆಮದು ನೀತಿಯನ್ನವಲಂಬಿಸಿದೆ. ನಮಗೆ ಪೈಪೋಟಿಯಿರುವುದು ಜಪಾನ್‌ನಿಂದ ಎಂದು ಪದೇ ಪದೇ ಹೇಳು-

(ಶ್ರೀ ಹೆಚ್. ಸಿದ್ದವೀರಪ್ಪ)

ತ್ತಿದ್ದೇವೆ ಇಂಡಿಯಾ ಸರ್ಕಾರಕ್ಕೆ. ಮೊನ್ನೆ ತಾನೆ ಟ್ಯಾರಿಫ್ ಬೋರ್ಡಿನಿಂದ ಶ್ರೀದಾಸ್ ಗುಪ್ತ ಎಂಬುವರು ಇಲ್ಲಿಗೆ ಬಂದು, ನಮ್ಮ ರೇಷ್ಮೆಗೆ ಯಾವ ರೀತಿಯ ರಕ್ಷಣೆ ಬೇಕು, ರಕ್ಷಣೆಯ ಅವಶ್ಯಕತೆ ಇದೆಯೆ ಎಂಬ ಬಗ್ಗೆ ಇಲ್ಲಿಯ ಸ್ಥಿತಿಗತಿಗಳನ್ನು ನೋಡಿ ತಿಳಿದುಕೊಂಡು ಹೋಗಿದ್ದಾರೆ. ಟ್ಯಾರಿಫ್ ಬೋರ್ಡಿನವರು ನಮಗೆ ಸೂಕ್ತ ರಕ್ಷಣೆ ಕೊಡಬೇಕೆಂದು ನಿದರ್ಶನಗಳನ್ನೂ ತೋರಿಸಿದ್ದೇವೆ. ಅವರು ಸಹಾಯಮಾಡುತ್ತಾರೆಂದು ನಂಬಿದ್ದೇವೆ.

ಇನ್ನೊಂದು ಮುಖ್ಯ ವಿಷಯವೆಂದರೆ, ರೆಗ್ಯುಲೇಟೆಡ್ ಮಾರ್ಕೆಟ್ ವಿಚಾರವನ್ನು ಒತ್ತಾಯ ಪಡಿಸಿದರು. ಆಗಿಂದಾಗ್ಗೆ ನನ್ನಲ್ಲಿ ಕೆಲವು ಪುಕಾರುಗಳು ಬರುತ್ತಿವೆ. ನ್ಯಾಯವಾಗಿ ಯಾರು ಬೆಳೆಯುತ್ತಾರೋ ಅವರಿಗೆ ಇದರಿಂದ ಪ್ರಯೋಜನವಾಗುತ್ತಿಲ್ಲ, ಮಧ್ಯೆ ಇರುವವರು ಪ್ರಯೋಜನ ಪಡೆಯುತ್ತಾರೆ ಎಂದು ಹೇಳುತ್ತಾರೆ. ಒಂದು ವಿಷಯವನ್ನು ತಿಳಿಸಿಕೊಳ್ಳಬೇಕು. ಬೆಳೆಗಾರರು ಪ್ರಯತ್ನಮಾಡಿ ಒಟ್ಟು ಸೇರಿ ಸಹಕಾರ ಸಂಸ್ಥೆಯನ್ನು ಮಾಡಿಕೊಳ್ಳಲು ಮುಂದೆ ಬಂದರೆ ಸರ್ಕಾರ ಸಹಾಯಮಾಡುವುದಕ್ಕೆ ಸದಾ ಸಿದ್ಧರಾಗಿದ್ದಾರೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಅವರು ಹಾಗೆ ಮಾಡುತ್ತಾರೆ, ಇವರು ಹೀಗೆ ಮಾಡುತ್ತಾರೆ ಎಂದು ಸುಮ್ಮನೆ ಹೇಳಿದರೆ ಪ್ರಯೋಜನವಿಲ್ಲ. ಹೀಗೆ ಹೇಳುವ ಬದಲು ನಾವು ಬೆಳೆದುದನ್ನು ನಾವೇ ಮಾರಾಟಮಾಡಿಕೊಳ್ಳುತ್ತೇವೆ, ಮಧ್ಯಸ್ಥರು ಬೇಡ, ಸರ್ಕಾರ ಸಹಾಯಮಾಡಬೇಕು ಎಂದು ಕೇಳಿದರೆ, ನಾವು ಇಲ್ಲವೆನ್ನುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರಕ್ಕೆ ಹತೋಟಿ ಮಾಡುವ ಶಕ್ತಿಯಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದ ಶಕ್ತಿಯನ್ನು ಪರೀಕ್ಷೆ ಮಾಡುವುದುಬೇಡ, ಶಕ್ತಿಯಿದೆ.

ಸಹಕಾರ ಸಂಸ್ಥೆಯನ್ನೇರ್ಪಡಿಸಿಕೊಳ್ಳಲು ಉತ್ಸಾಹದಿಂದ ಮುಂದೆಬಂದರೆ, ನಾನು ಈಗತಾನೇ ಹೇಳಿದಂತೆ, ಸರ್ಕಾರದವರು ಸಹಾಯ ಮಾಡಲು ಸಿದ್ಧರಾಗಿದ್ದಾರೆ. ಆದರೂ ರೆಗ್ಯುಲೇಟೆಡ್ ಮಾರ್ಕೆಟ್ ಮಾಡುವ ವಿಷಯದಲ್ಲಿ ಶೀಘ್ರದಲ್ಲೇ ಪರಿಶೀಲನೆ ಮಾಡುತ್ತೇವೆ. ಅದರ ಸಾಧಕ ಬಾಧಕಗಳನ್ನು ಪರೀಕ್ಷಿಸಿ ನೋಡಬೇಕು.

ಶ್ರೀ ಮೂಡಲಗಿರಿ ಗೌಡರು ಹೇಳಿದಹಾಗೆ, ಈ ವರ್ಷ ಸಿಲ್ಕ್ ಬೋರ್ಡಿನಿಂದ ನಮಗೆ ತುಂಬಾ ಸಹಾಯ ದೊರೆಕಿದೆ; ಅವರನ್ನು ವಂದಿಸಲೇಬೇಕು. ಅವರು ಇನ್ನೂ ಎರಡು ಲಕ್ಷ ರೂಪಾಯಿಗಳವರೆಗೆ ಸಹಾಯ ಮಾಡುತ್ತಾರೆಂಬ ನಿರೀಕ್ಷಣೆಯಿದೆ.

ಸಂಶೋಧನೆಯ ವಿಚಾರ ಹೇಳುವುದಾದರೆ, ಕೃಷ್ಣರಾಜೇಂದ್ರ ಹಿಲ್ ಸ್ಟೇಷನ್ ಬಿಳಿಗಿರಿ ರಂಗನಬೆಟ್ಟ, ಕಣ್ವಾ ಮುಂತಾದ ಕಡೆ ನಡೆಸುತ್ತಿದ್ದಾರೆ. ಅದಕ್ಕೂ ಸಹಾಯ ಮಾಡುತ್ತಿದ್ದಾರೆ. ಕಣ್ವಾ ನರ್ಸರಿಗೂ ಸಹಾಯ ಮಾಡುತ್ತಿದ್ದಾರೆ. ಮೈಸೂರು ದೇಶದಲ್ಲಿ ರೇಷ್ಮೆ ಹೆಚ್ಚು ಉತ್ಪತ್ತಿಯಾಗುತ್ತದೆಂಬುದನ್ನು ಗಮನಿಸಿ ಇಲ್ಲಿಗೇ ಹೆಚ್ಚಿನ ಸಹಾಯ ಮಾಡುತ್ತಿದ್ದಾರೆ. ಆದುದರಿಂದ ಅವರನ್ನು ಆಕ್ಷೇಪಿಸುವಹಾಗಿಲ್ಲವೆಂದು ಹೇಳುತ್ತೇನೆ. ಈ ಕೈಗಾರಿಕೆ ಇನ್ನೂ ಮುಂದುವರಿಯಬೇಕು ಎಂಬುದು ಸರ್ಕಾರದ ಆಶಯ. ದೇವರದಯೆಯಿಂದ ಇದುವರೆಗೆ ಬಂದಿರತಕ್ಕ ತೊಂದರೆಯನ್ನು ನಿವಾರಿಸಿಕೊಂಡು ಈಗ ತಾನೇ ನಿಲ್ಲುವುದಕ್ಕೆ ಶಕ್ತಿ ಪಡೆಯುತ್ತಿದೆ ಈ ಕೈಗಾರಿಕೆ. ಬೆಳೆಯುವವರ ಹಿತರಕ್ಷಣೆಯ ಜೊತೆಗೆ ಬಾಕಿಯವರ ಹಿತರಕ್ಷಣೆಯನ್ನೂ ಮಾಡೋಣ. ಆದುದರಿಂದ ಈ ಡಿಮ್ಯಾಂಡನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is :

"That a sum not exceeding Rs. 8,96,000 be granted to the Government to defray the charges which will come in course of payment during the year ending 31st day of March 1954, in respect of 'Sericulture'."

The motion was adopted.

DEMAND No. 28—MISCELLANEOUS DEPARTMENTS.

47. MISCELLANEOUS DEPARTMENTS

Mr. SPEAKER.—Motion moved :

"That a sum not exceeding Rs. 12,26,000 be granted to the Government to defray the charges which will come in course of payment during the year ending 31st day of March 1954, in respect of 'Miscellaneous Departments'."

(Sri R. Anantaraman rose).

Mr. SPEAKER.—You will have to mention one or two points, because you should have time to hear the reply of the Minister.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈ ಡಿಮ್ಯಾಂಡಿಗೆ ಸಂಬಂಧಿಸಿದ ಹಾಗೆ ನಾನು ಒಂದು ಖೋತಾ ನಿರ್ಣಯವನ್ನು ಕಳುಹಿಸಿದ್ದೇನೆ. ಮುಜರಾಯಿ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೆಂಬ ಅಂಶವನ್ನು ಗಮನಕ್ಕೆ ತರುವುದು ಅದರ ಉದ್ದೇಶ. ಈಗ ಕಾಲಾವಕಾಶವಿಲ್ಲದೇಯಿರುವುದರಿಂದ ಒಂದೆರಡು ಸಲಹೆಗಳನ್ನು ಮಾತ್ರ ಕೊಡುತ್ತೇನೆ.

ಸೆಕ್ಯುಲರ್ ಸ್ಟೇಟಿನಲ್ಲಿ ಸರ್ಕಾರದಲ್ಲಿ ಇಂಥಾ ಇಲಾಖೆ ಇರಬಾರದೆಂದು ವಾದಿಸುವವರಲ್ಲಿ ನಾನೂ ಒಬ್ಬ. ನಮ್ಮ ರಾಜ್ಯಾಂಗದಲ್ಲಿ ತನ್ನ ಇಷ್ಟ ಬಂದಂತೆ ಪೂಜೆ ಮಾಡುವ ಹಕ್ಕನ್ನು ವ್ಯಕ್ತಿಗೆ ಕೊಟ್ಟಿರುವಾಗ ಇದನ್ನು ಸರ್ಕಾರದವರು ನಡೆಸಬಾರದೆಂದು ವಾದಿಸುವವರಲ್ಲಿ ನಾನೂ ಒಬ್ಬ. ಆದಾಗ್ಯೂ ಈಗ ಸರ್ಕಾರದವರು ಮುಜರಾಯಿ ಸಂಸ್ಥೆಗಳೆಂದು ತಮ್ಮ ಹತೋಟಿಯಲ್ಲಿಟ್ಟುಕೊಂಡು ನಡೆಸುತ್ತಿದ್ದಾರೆ. ಈ ಸಂಸ್ಥೆಗಳು ಎಷ್ಟುಮಟ್ಟಿಗೆ ಕೆಲಸ ಮಾಡುತ್ತಿವೆಯೆಂದು ನೋಡಿದರೆ, ಇವು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ. ಎಲ್ಲಾ ಮುಜರಾಯಿ ಸಂಸ್ಥೆಗಳಿಗೂ ಸರ್ಕಾರದವರು ಭೂಮಿಯನ್ನು ಕೊಟ್ಟಿದ್ದಾರೆ, ಭಕ್ತರೂ ದಾನವಾಗಿ ಕೊಟ್ಟಿದ್ದಾರೆ. ಅಲ್ಲದೆ ಲಕ್ಷಾಂತರ ರೂಪಾಯಿನ ಒಡವೆ ವಸ್ತು

ಗಳನ್ನು ಕೊಟ್ಟಿದ್ದಾರೆ. ಭಕ್ತಾದಿಗಳು ದೇವಸ್ಥಾನಗಳನ್ನು ನಡೆಸಿಕೊಂಡು ಹೋಗುತ್ತಾರೆಂದರೆ ಸಂತೋಷ. ಆದರೆ ಮುಜರಾಯಿ ಇಲಾಖೆಗೆ ಸೇರಿದ ಮಠಗಳೂ ಮುಜರಾಯಿ ಇಲಾಖೆಗಳೂ ಸರಿಯಾಗಿ ನಡೆಯಬೇಕು. ಈಗ ಈ ಸಂಸ್ಥೆಗಳ ಆಡಳಿತ ಚೆನ್ನಾಗಿ ನಡೆಯುತ್ತಿಲ್ಲ. ಅದನ್ನು ವಿಮರ್ಶಿಸಲು ಸರ್ಕಾರದವರು ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಆದರೂ ನನ್ನ ಅನುಭವವನ್ನು ಹೇಳುವುದಾದರೆ, ಈ ಸಂಸ್ಥೆಗಳು ಚೆನ್ನಾಗಿ ನಡೆಯಬೇಕಾದರೆ, ಸರ್ಕಾರದವರು ಹೆಚ್ಚು ನಿಗಾ ತೆಗೆದುಕೊಳ್ಳಬೇಕು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ನನಗೆ ಕಾಲಾವಕಾಶ ವಿಲ್ಲದಿರುವುದರಿಂದ ಒಂದೇ ಒಂದು ವಿಷಯ ಹೇಳುತ್ತೇನೆ. ಒಂಭತ್ತು ಹತ್ತನೆಯ ಶತಮಾನದಲ್ಲಿ ಕಟ್ಟಿರುವ ದೇವಸ್ಥಾನಗಳು ಟಿ. ನರಸೀಪುರದ ತಾಲ್ಲೂಕಿನಲ್ಲಿವೆ. ಇವುಗಳು ಚೋಳ ರಾಜ ವಿಷ್ಣುವರ್ಧನನ ಕಾಲದ ದೇವಸ್ಥಾನಗಳು. ಬಹು ಸುಂದರವಾದ ದೇವಸ್ಥಾನಗಳು. ಅವುಗಳನ್ನು ಸರಿಯಾಗಿ ರಿಪೇರಿ ಮಾಡಿಸಿ ಒಳ್ಳೆಯ ಸ್ಥಿತಿಯಲ್ಲಿಟ್ಟು ಕೊಳ್ಳಬೇಕೆಂಬುದು ನನ್ನ ಸಲಹೆ.

Sri Kadidal MANJAPPA (Minister for Revenue).—Sir, the management of these Muzrai institutions is governed by the Mysore Religious and Charitable Institutions Act and the rules framed thereunder. Whatever may be my opinion and whatever may be the opinion of my friend Sri Anantaraman regarding these matters, we will have to respect the opinion of the majority of the people. It is our duty to maintain these religious institutions so long as the people want them. Sri Anantaraman said that these institutions are not managed well and I may tell him that the Muzrai Officers are inspecting these institutions and auditing the accounts. In cases of complaints regarding the mismanagement of these institutions, they would be taken over by the Government. There is a Special Assistant Commissioner to enquire into certain allegations made against some institutions in Bangalore District.

Sri Srinivasa Iyengar said that the ancient temples in T. Narsipur require the immediate attention of Government. Government will surely look into the matter and see that necessary steps are taken and the repairs attended to.

Mr. SPEAKER.—The question is :

> "That a sum not exceeding Rs. 12,26,000 be granted to the Government to defray the chargess which will come in course of payment during the year ending 31st day of March 1954, in respect of 'Miscellanous Deperatments'."

The motion was adopted.

Mr. SPEAKER.—The House will now rise for the day and meet again to-morrow at Twelve of the Clock.

(The House adjourned at Five of the Clock to meet again at Twelve of the Clock on Friday the 27th March **1953.**

WD 4516—GPB—500—3-1-54